ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 27 ಮಂಗಳವಾರ 2025

ಸಂಪುಟ: 46 | ಸಂಚಿಕೆ: 41 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರಾಜ್ಯದಲ್ಲಿ ಕೋವಿಡ್ ಸಂಬಂಧ ಸಭೆ; ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ಎಲ್ಲದಕ್ಕೂ ಸಜ್ಜಾಗಿರಿ

● ಈಗಾಗಲೇ ರಾಜ್ಯದಲ್ಲಿ 62 ಪ್ರಕರಣ ದಾಖಲಾಗಿವೆ ● ಶೀತ ಆಗಿದ್ರೆ ಮಕ್ಕಳ ಶಾಲೆಗೆ ಸೇರಿಸಬೇಡಿ; ವೈದ್ಯಾಧಿಕಾರಿಗಳು ರಜೆ ಹಾಕಬೇಡಿ ● ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಬೇಡವೇ ಬೇಡ

ಬೆಂಗಳೂರು, ಮೇ26(ಕೆಎಂಶಿ)– ಮಹಾಮಾರಿ ಕೋವಿಡ್ ಸೋಂಕು ರಾಜ್ಯದಲ್ಲಿ ಮತ್ತೆ ಉಲ್ಬಣಗೊಳ್ಳುತ್ತಿದ್ದು, ಎಂತಹುದೇ ಪರಿಸ್ಥಿತಿ ಎದುರಾದರೂ ಅದನ್ನು ಎದುರಿಸಲು ಸರ್ವ ಸನ್ನದ್ಧವಾಗಿರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯ ಇಲಾಖೆಗೆ ಸೂಚನೆ ನೀಡಿದ್ದಾರೆ.



ಕೋವಿಡ್ ಪರಿಸ್ಥಿತಿ ಅವಲೋಕಿಸಲು ಸಿಎಂ ಸಿದ್ದರಾಮಯ್ಯ ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು.

ಕೋವಿಡ್‌ಗೆ ಸಂಬಂಧಿಸಿದಂತೆ ಪರಿಸ್ಥಿತಿ ಅವಲೋಕಿಸಲು ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಕಾವೇರಿ ನಿವಾಸದಲ್ಲಿ ನಡೆಸಿದ ಸಭೆಯಲ್ಲಿ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಕೊರೊನಾ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಅಧಿಕಾರಿಗಳು, ತಜ್ಞರು ಮತ್ತು ಸಚಿವರಿಂದ ಮಾಹಿತಿ ಪಡೆದ ಮುಖ್ಯಮಂತ್ರಿಗಳು, ಸದ್ಯಕ್ಕೆ ಆತಂಕಪಡುವ ಅಗತ್ಯವಿಲ್ಲ. ಆದರೆ, ಮುಂಚಿತ ವಾಗಿಯೇ ಮುಂದೆ ಎದುರಾಗಬಹುದಾದ ಪರಿಸ್ಥಿತಿಯನ್ನು ಅವಲೋಕಿಸಿ ಅಗತ್ಯವಾದ ಎಲ್ಲಾ ಸವಲತ್ತು, ಸಲಕರಣೆಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೊರೊನಾ ಸಹಾಯವಾಣಿ ಪ್ರಾರಂಭ ಮಾಡಲು ಸೂಚನೆ ನೀಡಿ ದರು. ಮುಂದಿನ ದಿನಗಳಲ್ಲಿ ಅವಶ್ಯಕತೆ ಕಂಡು ಬಂದರೆ ವಿಮಾನ ನಿಲ್ದಾಣಗಳಲ್ಲಿ ಹೊರಗಡೆಯಿಂದ ಬರುವ ಪ್ರಯಾಣಿಕರಿಗೆ ತಪಾಸಣಾ ಘಟಕಗಳನ್ನು ಪ್ರಾರಂಭಿಸಲು ಕ್ರಮ ವಹಿಸುವಂತೆ ನಿರ್ದೇಶಿಸಿದರು. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಧೋರಣೆ ಇರಬಾರದು. ಎಲ್ಲಾ ಜಿಲ್ಲಾ ಆಸ್ಪತ್ರೆಗಳೂ ಸರ್ವ ಸನ್ನದ್ಧವಾಗಿ ಇರುವಂತೆ ಸೂಚಿಸಿದರು.

■6ನೇ ಪುಟಕ್ಕೆ

ಮೈಸೂರಲ್ಲಿ 3 ಕೊರೊನಾ ಪ್ರಕರಣ ದೃಢ

ಮೈಸೂರು, ಮೇ 26(ಆರ್‌ಕೆ)– ರಾಜ್ಯಾದ್ಯಂತ ಕೋವಿಡ್–19 ಪ್ರಕರಣಗಳು ದಿನೇ ದಿನೆ ಹೆಚ್ಚಾಗುತ್ತಿರುವುದರ ಬೆನ್ನಲ್ಲೇ ಮೈಸೂರು ಜಿಲ್ಲೆಯಲ್ಲಿ ಮೂವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಮೇ 23ರಂದು ನಡೆಸಿದ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಕೆ.ಆರ್.ನಗರದ ಇಬ್ಬರಿಗೆ ಮತ್ತು ಹೆಚ್.ಡಿ.ಕೋಟೆ ತಾಲೂಕಿನ ಒಬ್ಬರಿಗೆ ಸೋಂಕು ಹರಡಿರುವುದು ದೃಢಪಟ್ಟಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದ್ದಾರೆ. 2025ರ ಜನವರಿ 1ರಿಂದ ಮೇ 25 ರವರೆಗೆ ಕೆ.ಆರ್. ಆಸ್ಪತ್ರೆಯಲ್ಲಿ ನಡೆಸಿದ 78 ಆರ್‌ಟಿ–ಪಿಸಿಆರ್ ಟೆಸ್ಟ್ ಪೈಕಿ ಮೂವರಿಗೆ ಕೋವಿಡ್–19 ಪಾಸಿಟಿವ್ ಬಂದಿದೆ

■6ನೇ ಪುಟಕ್ಕೆ

ಕೆ.ಆರ್.ಆಸ್ಪತ್ರೆಯಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆ



ಕೆ.ಆರ್.ಆಸ್ಪತ್ರೆಯಲ್ಲಿ ನರ್ಸಿಂಗ್ ಸಿಬ್ಬಂದಿ ಆರ್‌ಟಿ–ಪಿಸಿಆರ್ ಟೆಸ್ಟ್‌ಗೆ ಸಿದ್ಧತೆ ಮಾಡಿಕೊಳ್ಳುತ್ತಿರುವುದು.

ಪೊಲೀಸರ ತಪಾಸಣೆ ವೇಳೆ ಬೈಕಿಗೆ ಲಾರಿ ಡಿಕ್ಕಿ; 3 ವರ್ಷದ ಮಗು ಸಾವು

■ ಮಂಡ್ಯದ ಸ್ವರ್ಣಸಂದ್ರ ಬಳಿ ಹೆದ್ದಾರಿಯಲ್ಲಿ ದುರ್ಘಟನೆ ■ ಪೋಷಕರು, ಸಂಬಂಧಿಕರಿಂದ ರಸ್ತೆ ತಡೆದು ಆಕ್ರೋಶ ■ ಎಸ್ಪಿಯವರಿಂದ ಮೂವರು ಎಎಸ್‌ಐಗಳ ಅಮಾನತು; ಇಲಾಖಾ ತನಿಖೆಗೆ ಆದೇಶ





ಮೃತ ಬಾಲಕಿ ಹೃತಿಕ್ಷ. ಬಲಚಿತ್ರದಲ್ಲಿ ಮಗುವಿನ ಸಂಬಂಧಿಕರು ಹಾಗೂ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಮಂಡ್ಯ, ಮೇ 26– ವಾಹನ ತಪಾಸಣೆ ವೇಳೆ ಸಂಚಾರ ಪೊಲೀಸರು ಮಾಡಿದ ಎಡವಟ್ಟಿನಿಂದ ಮೂರು ವರ್ಷದ ಮಗು ಧಾರುಣವಾಗಿ ಸಾವನ್ನಪ್ಪಿದ ಘಟನೆ ಮಂಡ್ಯದ ಮೈಸೂರು–ಬೆಂಗಳೂರು ಹಳೆ ಹೆದ್ದಾರಿಯ ಸ್ವರ್ಣಸಂದ್ರ ಬಳಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಈ ಹಿನ್ನೆಲೆಯಲ್ಲಿ ಮಗುವಿನ ಪೋಷಕರು ಸೇರಿದಂತೆ ನೂರಾರು ಮಂದಿ ಮಿಮ್ಸ್ ಆಸ್ಪತ್ರೆಯ ಮುಂಭಾಗ ರಸ್ತೆ ತಡೆದು ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಿದ್ದು, ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮೂವರು ಎಎಸ್‌ಐಗಳನ್ನು ತಕ್ಷಣವೇ ಅಮಾನತು ಮಾಡಿ, ಇಲಾಖಾ ವಿಚಾರಣೆಗೆ ಆದೇಶಿಸಿದ್ದಾರೆ. ಅಲ್ಲದೆ ಮಗುವಿನ ಪೋಷಕರಿಗೆ ಸೂಕ್ತ ಪರಿಹಾರ ನೀಡಲು ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ಹಳೆ ಹೆದ್ದಾರಿ ರಸ್ತೆಯಲ್ಲಿ ಕೆಲ ಗಂಟೆಗಳ ಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ವಾಹನ ತಪಾಸಣೆ ವೇಳೆ ಮಗು ಸಾವನ್ನಪ್ಪಿರುವುದಕ್ಕೆ ವಿಷಾದಿಸುತ್ತೇನೆ. ನಮ್ಮ ಸಿಬ್ಬಂದಿ, ಹೆಲ್ಮೆಟ್ ಧರಿಸದ ಕಾರಣ ಬೈಕ್ ನಿಲ್ಲಿಸಿದ್ದಾರೆ. ಮಗುವಿಗೆ ನಾಯಿ ಕಚ್ಚಿರುವುದರಿಂದ ಆಸ್ಪತ್ರೆಗೆ ಹೋಗುತ್ತಿರುವುದಾಗಿ ಹೇಳಿದ್ದರಿಂದ ಬಿಟ್ಟು ಕಳಿಸಿದ್ದಾರೆ. ಇದೇ ವೇಳೆ ಬೈಕಿಗೆ ವಾಹನವೊಂದು ಡಿಕ್ಕಿ ಹೊಡೆದು ಮಗು ಕೆಳಗೆ ಬಿದ್ದು ಸಾವನ್ನಪ್ಪಿದೆ. ಪ್ರತಿಭಟನಾಕಾರರು ಹಲವು ಬೇಡಿಕೆಗಳನ್ನು ಮುಂದಿಟ್ಟಿದ್ದರು. ತಪಾಸಣೆ ವೇಳೆ ಪೊಲೀಸರು ಸುರಕ್ಷತಾ ನಿಯಮಗಳನ್ನು ಸರಿಯಾಗಿ ಪಾಲಿಸಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಈಗಾಗಲೇ ಮೂವರು ಎಎಸ್‌ಐಗಳನ್ನು ಅಮಾನತು ಪಡಿಸುವ ಮೂಲಕ ಪ್ರತಿಭಟನಾಕಾರರ ಒಂದು ಬೇಡಿಕೆ ಈಡೇರಿಸಿದ್ದೇವೆ. ಅಲ್ಲದೆ ಅಮಾನತುಗೊಂಡ ಎಎಸ್‌ಐಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ. ಆರ್ಥಿಕ ಪರಿಹಾರಕ್ಕೆ ಮನವಿ ಮಾಡಿದ್ದಾರೆ. ಈ ಸಂಬಂಧ ಸ್ಥಳೀಯ ಶಾಸಕರು ಹಾಗೂ ಸರ್ಕಾರದೊಂದಿಗೆ ವ್ಯವಹರಿಸಿ ಕ್ರಮ ಕೈಗೊಳ್ಳಲಾಗುವುದು. ಮುಂದೆ ಇಂತಹ ಘಟನೆ ನಡೆಯದಂತೆ ನಮ್ಮ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡುತ್ತೇವೆ.

– ಮಲ್ಲಿಕಾರ್ಜುನ ಬಾಲದಂಡಿ, ಮಂಡ್ಯ ಜಿಲ್ಲಾ ಎಸ್ಪಿ

ವಿವರ: ಮದ್ದೂರು ತಾಲೂಕು ಗೊರವನ ಹಳ್ಳಿ ಗ್ರಾಮದ ಅಶೋಕ್ ಮತ್ತು ವಾಣಿ ದಂಪತಿ ಪುತ್ರಿ ಮೂರು ವರ್ಷದ ಹೃತಿಕ್ಷ ಸಾವನ್ನಪ್ಪಿದ್ದು,

■6ನೇ ಪುಟಕ್ಕೆ

ಕೊಡಗಿಗೆ ಎನ್‌ಡಿಆರ್‌ಎಫ್ ಯೋಧರ ತಂಡ



ಮಡಿಕೇರಿ, ಮೇ 26– ಜಿಲ್ಲೆಯಲ್ಲಿ ಮುಂಗಾರು ಆರ್ಭಟಿಸುತ್ತಿರುವುದರಿಂದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಎನ್‌ಡಿಆರ್‌ಎಫ್ ಒಂದು ತಂಡ ಕೊಡಗಿಗೆ ಆಗಮಿಸಿದೆ. ಆಂಧ್ರಪ್ರದೇಶದ ವಿಜಯವಾಡದಲ್ಲಿರುವ 10ನೇ ಬೆಟಾಲಿಯನ್ ಎನ್‌ಡಿಆರ್‌ಎಫ್ ತಂಡ ಭಾನುವಾರ ರಾತ್ರಿ ಮಡಿಕೇರಿಗೆ ಆಗಮಿಸಿದ್ದು, ನಗರದ ಪೊಲೀಸ್ ಸಮುದಾಯ ಭವನ ಮೈತ್ರಿಯಲ್ಲಿ ವಾಸ್ತವ್ಯ ಹೂಡಿದೆ.

ಈ ಬಾರಿ ಅವಧಿಗೂ ಮುನ್ನವೇ ಮುಂಗಾರು ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಮೇ ತಿಂಗಳ ಮೂರನೇ ವಾರದಲ್ಲೇ ಕೇಂದ್ರೀಯ ರಕ್ಷಣಾ ತಂಡ ಜಿಲ್ಲೆಯಲ್ಲಿ ನಿಯೋಜನೆಯಾಗಿದೆ. ಈ ಯೋಧರ ತಂಡ ಮಳೆ ಗಾಲ ಸಂಪೂರ್ಣವಾಗಿ ಮುಕ್ತಾಯಗೊಂಡ ಬಳಿಕ ಜಿಲ್ಲೆಯಿಂದ ನಿರ್ಗ ಮಿಸಲಿದೆ. ಪ್ರಾಕೃತಿಕ ವಿಕೋಪ ಎದುರಾದಲ್ಲಿ ಈ ತಂಡದೊಂದಿಗೆ ಪೊಲೀಸ್, ಅಗ್ನಿಶಾಮಕ ದಳ, ಹೋಂ ಗಾರ್ಡ್ಸ್, ಕಂದಾಯ, ಸ್ಥಳೀಯ ಗ್ರಾಪಂ ಪಿಡಿಓಗಳು, ದುಬಾರೆಯ ರ್‍ಯಾಫ್ಟರ್‌ಗಳು ಹಾಗೂ ಈಗಾಗಲೇ ಜಿಲ್ಲಾಡಳಿತದಿಂದ ಗುರುತಿಸಲ್ಪಟ್ಟಿರುವ ವಾಹನಗಳು ರಕ್ಷಣಾ ಕಾರ್ಯಾಚರಣೆ ನಡೆಸಲಿವೆ.

ವರ್ಷಾಂತ್ಯಕ್ಕೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ತಲ್ಲಣ ಸಾಧ್ಯತೆ

● ರಾಜಕೀಯ ಲಾಭಕ್ಕಾಗಿ ಸಜ್ಜಾಗಿರುವ ಬಿಜೆಪಿ ● ನಾಲ್ವರು ಪ್ರಬುದ್ಧ ಸಚಿವರಿಗೆ ಪರಿಸ್ಥಿತಿ ಸಮರ್ಥ ನಿರ್ವಹಣೆ ಹೊಣೆ ● ಕೇಂದ್ರ ಸಚಿವ ಕುಮಾರಸ್ವಾಮಿಯೊಂದಿಗೆ ಬಿಜೆಪಿ, ಆರ್‌ಎಸ್‌ಎಸ್ ನಾಯಕರ ಸಭೆ; ತಟಸ್ಥವಾಗಿರಲು ಸಲಹೆ



ಬೆಂಗಳೂರು, ಮೇ 26 (ಕೆಎಂಶಿ)– ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ವಿಚಾರಕ್ಕೆ ಒಂದು ವೇಳೆ ಕಾಂಗ್ರೆಸ್‌ನಲ್ಲಿ ಆಂತರಿಕ ತಲ್ಲಣ ಉಂಟಾದರೆ ಅದನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳಲು ಬಿಜೆಪಿ ಸಜ್ಜಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ಮಾಡದಿದ್ದರೆ, ಡಿ.ಕೆ. ಶಿವಕುಮಾರ್ ಬೆಂಬಲಿಗರು ಸಿಡಿದೇಳುವ ಸಾಧ್ಯತೆ ಇದೆ.

ಒಂದು ವೇಳೆ ಶಿವಕುಮಾರ್ ಅವರಿಗೆ ಅಧಿಕಾರ ನೀಡಿದರೆ, ಸಿದ್ದರಾಮಯ್ಯ ಬೆಂಬಲಿತ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮುಂದಾಳತ್ವದಲ್ಲಿ ಬಂಡಾಯ ಏಳಬಹುದೆಂಬ ಮಾಹಿತಿ ದೆಹಲಿ ಬಿಜೆಪಿ ಅಂಗಳಕ್ಕೆ ತಲುಪಿದೆ.

ವರ್ಷಾಂತ್ಯದ ವೇಳೆಗೆ ಕರ್ನಾಟಕ ರಾಜ್ಯ ರಾಜಕೀಯದಲ್ಲಿ ಮಹತ್ತರ ಬದಲಾವಣೆ ಆಗಲಿದ್ದು, ಕಾಂಗ್ರೆಸ್‌ನ ಆಂತರಿಕ ಜಗಳದ ರಾಜಕೀಯ ಲಾಭ ಪಡೆಯಲು ಬಿಜೆಪಿ, ನಾಲ್ವರು ನುರಿತ ಕೇಂದ್ರ ಸಚಿವರನ್ನು ಇದರ ಸಮರ್ಥ ನಿರ್ವಹಣೆಗೆ ನಿಯೋಜಿಸಲು ಮುಂದಾಗಿದೆ.

ಇಂತಹ ಸನ್ನಿವೇಶದಲ್ಲಿ ರಾಜ್ಯಮಟ್ಟದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಗೊಂದಲ ಉದ್ಭವಿಸದಂತೆ ಕೇಂದ್ರದಲ್ಲಿ ಜೆಡಿಎಸ್ ಪ್ರತಿನಿಧಿಯಾಗಿರುವ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಮನವೊಲಿಕೆ ಪ್ರಯತ್ನಗಳೂ ನಡೆದಿವೆ.

ನೂತನ ಮೈತ್ರಿ ಸರ್ಕಾರ ರಚನೆ ವೇಳೆ ನಡೆಯಬಹುದಾದ ರಾಜಕೀಯ ಕ್ಷಿಪ್ರ ಬೆಳವಣಿಗೆಯಲ್ಲಿ ಕುಮಾರಸ್ವಾಮಿ ತಟಸ್ಥವಾಗಿ ಉಳಿಯುವಂತೆ ಪ್ರಮುಖರೊಬ್ಬರ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂದೇಶ ರವಾನಿಸಿದೆ. ಕಳೆದ 10–12 ದಿನಗಳ ಹಿಂದೆ ಕುಮಾರಸ್ವಾಮಿ ಮತ್ತು ಆರ್‌ಎಸ್‌ಎಸ್‌ಗೆ ನಿಕಟವಾಗಿರುವ ಹಿರಿಯರೊಬ್ಬರು ಈ ಸಂಬಂಧ ಚರ್ಚಿಸಿದ್ದಾರೆ.

ಕುಮಾರಸ್ವಾಮಿ ಅವರನ್ನು ತಾವಿರುವ ಸ್ಥಳಕ್ಕೆ ಕರೆಸಿಕೊಂಡ ಆ ಹಿರಿಯರು, ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿಯದೆ ಮುಂದುವರೆದರೆ, ಶಿವಕುಮಾರ್ ಬಂಡೇಳುವ ಸಾಧ್ಯತೆ ಇದೆ. ಅವರು ಮುಖ್ಯಮಂತ್ರಿ ಆಗಲೇಬೇಕೆಂದು ಹಠಕ್ಕೆ ಬಿದ್ದಿದ್ದು ಯಾವುದೇ ರಾಜಕೀಯ ತೀರ್ಮಾನಕ್ಕೂ ಸಿದ್ಧರಿದ್ದಾರೆ.

ಅಂತಹ ಸನ್ನಿವೇಶದಲ್ಲಿ ಒಂದು ಭಾಗವಾಗಿ ಸರ್ಕಾರದಿಂದ ಹೊರಬಂದರೆ, ಮಹಾರಾಷ್ಟ್ರ ಮಾದರಿಯಲ್ಲಿ ಆ ಗುಂಪಿನ ಜೊತೆ ಬಿಜೆಪಿ ಕೈಜೋಡಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಮೈತ್ರಿ ಸರ್ಕಾರ ರಚನೆಯಾದರೆ ಶಿವಕುಮಾರ್ ನಾಯಕತ್ವಕ್ಕೆ ರಾಜಕೀಯ ವಿರೋಧ ಮಾಡುವುದು ಬೇಡ.

■6ನೇ ಪುಟಕ್ಕೆ

ಹಾಡಹಗಲೇ ಹುಲಿ ದಾಳಿ: ಆದಿವಾಸಿ ಯುವಕ ಬಲಿ

ಹನಗೋಡು, ಮೇ 26– ಹಾಡಹಗಲೇ ಹುಲಿ ದಾಳಿಗೆ ಆದಿವಾಸಿ ಯುವಕ ಬಲಿಯಾಗಿದ್ದಾನೆ. ಈ ಘಟನೆ ಗುರುಪುರ ಗ್ರಾಪಂನ ನಾಗಾಪುರ–5ನೇ ಬ್ಲಾಕ್ ಪಕ್ಕದ ಸೊಳ್ಳೇಪುರ ಅರಣ್ಯ ಪ್ರದೇಶದಲ್ಲಿ ನಡೆದಿದೆ.



ಹರೀಶ

ಹನಗೋಡು ಹೋಬಳಿ ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದ 5ನೇ ಬ್ಲಾಕ್‌ನ ನಿವಾಸಿ ಕೃಷ್ಣ, ನಾಗವೇಣಿ ದಂಪತಿ ಪುತ್ರ ಹರೀಶ್(29) ಸಾವನ್ನಪ್ಪಿದವರು.

ವಿವರ: ತಂದೆ ಕೃಷ್ಣ ಅವರೊಂದಿಗೆ ಹರೀಶ ತಮ್ಮ ಜಮೀನಿನ ಬಳಿಯ ಅರಣ್ಯ ಪ್ರದೇಶದಲ್ಲಿ ಮೇಕೆಗಳನ್ನು ಮೇಯಿಸುತ್ತಿದ್ದರು. ಇದೇ ವೇಳೆ ಕೃಷ್ಣ ಅವರು ಅರಣ್ಯ ಪ್ರದೇಶದ ಪಕ್ಕದ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹರೀಶನ ಮೇಲೆ ಹುಲಿ ಏಕಾಏಕಿ ದಾಳಿ ನಡೆಸಿದೆ. ಇದರಿಂದ ಗಾಬರಿಗೊಂಡ ಹರೀಶ್ ಸಹಾಯಕ್ಕಾಗಿ ಕೂಗುತ್ತಿದ್ದಂತೆಯೇ ಕೃಷ್ಣ ಸ್ಥಳಕ್ಕಾಗಮಿಸಿ ಹುಲಿಯನ್ನು ಬೆದರಿಸಿ ಓಡಿಸಿದ್ದಾರೆ. ಅಷ್ಟರೊಳಗೆ ತೀವ್ರ ಗಾಯಗೊಂಡು ಹರೀಶ್ ಅಸ್ವಸ್ಥಗೊಂಡಿದ್ದರು. ತಕ್ಷಣ ಅಕ್ಕಪಕ್ಕದ ಆದಿವಾಸಿ ರೈತರೆಲ್ಲರೂ ಸೇರಿ ಚಿಕಿತ್ಸೆಗಾಗಿ ಹರೀಶ್‌ನನ್ನು ಕರೆದೊಯ್ಯುವಾಗ

■6ನೇ ಪುಟಕ್ಕೆ

ಆರಂಭದಲ್ಲೇ ಮುಂಗಾರು ಆರ್ಭಟಕ್ಕೆ ನಲುಗಿದ ಮೈಸೂರು

● ಧರೆಗುರುಳಿದ ಮರಗಳು; ಆಟೋ, ಬೈಕ್ ಜಖಂ ● ವಿದ್ಯುತ್ ಕಂಬಗಳು ಉರುಳಿ ಕರೆಂಟ್ ಸ್ಥಗಿತ; ವ್ಯಾಪಾರ ವಹಿವಾಟು ವ್ಯತ್ಯಯ ● ತಗ್ಗು ಪ್ರದೇಶಗಳು ಜಲಾವೃತ; ತುಂಬಿ ಹರಿದ ಚರಂಡಿ–ಒಳಚರಂಡಿ

ಮೈಸೂರು, ಮೇ 26(ಎಂಕೆ ಬಿಎಲ್‌ಯು)– ಮೈಸೂರಿನಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಸೋಮವಾರ ಸುರಿದ ಧಾರಾಕಾರ ಮಳೆಗೆ 3 ಮರಗಳು ಧರೆಗುರುಳಿ, ಆಟೋ ಮತ್ತು ಬೈಕ್ ಜಖಂಗೊಂಡಿವೆ.

ಬೆಳಗ್ಗೆಯಿಂದ ಮೋಡ ಕವಿದ ವಾತಾವರಣದ ನಡುವೆ ತುಂತುರು ಮಳೆ, ಮಧ್ಯಾಹ್ನದ ನಂತರ ಜೋರಾಯಿತು. ಗಾಳಿ ರಭಸಕ್ಕೆ ಬನ್ನಿಮಂಟಪದ ಟಿಪ್ಪು ಮಸೀದಿ ಬಳಿ ಮರವೊಂದು ಮುರಿದು ಬಿದ್ದಿದ್ದು, ಮರದ ಕೆಳಗೆ ನಿಲ್ಲಿಸಿದ್ದ 1 ಬೈಕ್ ಹಾಗೂ 1 ಆಟೋ ಜಖಂಗೊಂಡಿವೆ. ಹಾಗೆಯೇ ಅಶೋಕಪುರಂನ ಕೆ.ಆರ್. ವನಂನಲ್ಲಿ 1, ಸಿದ್ದಾರ್ಥನಗರದ ಬನ್ನೂರು ಮುಖ್ಯ ರಸ್ತೆ (ಜಿಲ್ಲಾಧಿಕಾರಿ ಕಚೇರಿ ಸಮೀಪ) ಬದಿಯಲ್ಲಿ 1 ಮರ ಸೇರಿ 3 ಮರಗಳು ಬುಡ ಸಮೇತ ಧರೆಗುರುಳಿವೆ. ಹಾಗೆಯೇ ಕುವೆಂಪುನಗರದ ಎಂ.ಬ್ಲಾಕ್‌ನಲ್ಲಿ ಮರದ ಕೊಂಬೆ ಮುರಿದು ಬಿದ್ದಿದೆ.

ಒಂದು ವಾರದಲ್ಲಿ 169 ವಿದ್ಯುತ್ ಕಂಬ ನೆಲಸಮ...!

ಕಳೆದ ಒಂದು ವಾರದಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸುರಿದ ಭಾರಿ ಮಳೆಯಿಂದಾಗಿ 169 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಮೈಸೂರು ತಾಲೂಕಿನಲ್ಲಿ 19 ರಿಂದ 20 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ನಗರ ವ್ಯಾಪ್ತಿಯಲ್ಲಿಯೂ 5–10 ವಿದ್ಯುತ್ ಕಂಬಗಳು ಮುರಿದಿವೆ. ಎಂದು ಚೆಸ್ಕಾಂ ಹಿರಿಯ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.




ವಿಷಯ ತಿಳಿದು ಸ್ಥಳಕ್ಕಾಮಿಸಿದ ಪಾಲಿಕೆ ಅಭಯ–3 ತಂಡದ ಖಾಸಿಫ್, ರಮೀಜ್, ನವೀನ್ ಮತ್ತು ರಾಜು ಮುರಿದು ಬಿದ್ದಿದ್ದ ಮರಗಳನ್ನು ಚೆಸ್ಕಾಂ ಸಿಬ್ಬಂದಿ ಸಹಕಾರದೊಂದಿಗೆ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಹಾಗೆಯೇ ಮೇಟಗಳ್ಳಿ ಆದಿತ್ಯ ಹೋಟೆಲ್ ಬಳಿ 3 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಕೆ.ಸಿ. ಬಡಾವಣೆಯಲ್ಲಿ 1 ಟ್ರಾನ್ಸ್‌ಫಾರ್ಮರ್‌ಗೆ ಹಾನಿಯಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

■6ನೇ ಪುಟಕ್ಕೆ

ಕೇರಳದ ವೈನಾಡಿನಲ್ಲಿ ಮಳೆ ಆರ್ಭಟ; ಕಬಿನಿ ಜಲಾಶಯದ ನೀರಿನ ಪ್ರಮಾಣ ಹೆಚ್ಚಳ

ಕೇರಳದ ವೈನಾಡು ಪ್ರದೇಶದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಹಿನ್ನೆಲೆ ಮೈಸೂರಿನ ಹೆಚ್.ಡಿ.ಕೋಟೆಯ ಕಬಿನಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚಾಗಿದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,263 ಅಡಿಗಳಾಗಿದೆ. ಜಲಾಶಯಕ್ಕೆ 13,037 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 300 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಇದೇ ರೀತಿ ಇನ್ನು ಹತ್ತು ದಿನ ಮಳೆಯಾದರೆ ಕಬಿನಿ ಜಲಾಶಯ ಭರ್ತಿಯಾಗಲಿದೆ.



ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 89.35 ಅಡಿಗಳಾಗಿದೆ. ಜಲಾಶಯಕ್ಕೆ 2053 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 347 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ವರುಣ ಆರ್ಭಟಿಸುತ್ತಿದ್ದು, ತಲಕಾವೇರಿ ಜಲಾವೃತ ಗೊಂಡಿದೆ. ಇದರಿಂದ ಇನ್ನೆರಡು ದಿನದಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಹೆಚ್ಚಾಗಲಿದೆ.

ಹಾಸನ ಮಿತ್ರ

ಹಾಸನ ಬಳಿ ಹೆದ್ದಾರಿಯಲ್ಲಿ ಮಣ್ಣು ಕುಸಿದು ವಿದ್ಯುತ್ ಸಂಪರ್ಕ ಕಡಿತ





ಹಾಸನ: ಜಿಲ್ಲೆಯಲ್ಲಿ ಕಳೆದ 2-3 ದಿನಗಳಿಂದ ಎಡೆಬಿಡದೆ ಮಳೆ ಸುರಿಯುತ್ತಿದ್ದು, ಸೋಮವಾರವೂ ಭಾರಿ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿತ್ತು. ಜಿಲ್ಲೆಯ ಚನ್ನರಾಯಪಟ್ಟಣ, ಸಕಲೇಶಪುರ, ಆಲೂರು, ಬೇಲೂರು, ಅರಕಲಗೂಡು ಮತ್ತು ಹಾಸನ ತಾಲೂಕಿನಲ್ಲಿ ಮಳೆಯ ಅಬ್ಬರದಿಂದಾಗಿ ರೈತರು, ವಾಹನ ಸವಾರರು, ಸಾರ್ವಜನಿಕರು ಪರದಾಡುವಂತಾಗಿದೆ.

ಬೇಲೂರು ತಾಲೂಕಿನ ಕುಪ್ಪೋಡು ಗ್ರಾಮದಲ್ಲಿ ಕೆರೆ ಕೋಡಿ ಒಡೆದು ರೈತರ ಜಮೀನಿಗೆ ನೀರು ನುಗ್ಗಿದ್ದು, 50 ಎಕರೆಗೂ ಅಧಿಕ ಗದ್ದೆ ಮತ್ತು ತೆಂಗಿನಕಾಯಿ ತೋಟಗಳಿಗೆ ಹಾನಿಯಾಗಿದೆ. ತರಕಾರಿ ಬೆಳೆಗಳು ಜಲಾವೃತವಾಗಿದ್ದು, ರೈತರು ನಷ್ಟ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಇಲಾಖೆಯಿಂದ ಸೂಕ್ತ ಪರಿಹಾರ ಒದಗಿಸುವಂತೆ ಒತ್ತಾಯಿಸಿದ್ದಾರೆ.

ಸಕಲೇಶಪುರ ತಾಲೂಕಿನ ರಾಟೆಮನೆ ಬಳಿ ಮೀನನ ಲಾರಿ ಉರುಳಿ ಬಿದ್ದು, ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಕಲೇಶಪುರ ತಾಲ್ಲೂಕಿನ ಬೊಮ್ಮಕೆರೆ ಗ್ರಾಮದ ಬಳಿ, ಕೆಎಸ್ಆರ್‌ಟಿಸಿ ಬಸ್‌ನ ಚಕ್ರವೊಂದು ಮಣ್ಣಿನಲ್ಲಿ ಸಿಲುಕಿ, ಪ್ರಯಾಣಿಕರು ಪರದಾಡುವಂತಾಗಿತ್ತು. ನಂತರ ಟ್ರ್ಯಾಕ್ಟರ್ ಸಹಾಯದಿಂದ ಬಸ್ ಚಕ್ರವನ್ನು ಮೇಲಕ್ಕೆ ಎತ್ತಲಾಯಿತು.

ನೆಲಕ್ಕುರುಳಿದ ಮರ, ವಿದ್ಯುತ್ ಕಂಬ: ಬೆಳಗ್ಗೆಯಿಂದ ಬಿರುಸಿನ ಗಾಳಿಯ ಜೊತೆಗೆ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ಸಕಲೇಶಪುರ, ಬೇಲೂರು ತಾಲೂಕುಗಳ ಹಲವು ಗ್ರಾಮಗಳಲ್ಲಿ ವಿದ್ಯುತ್ ಕಂಬ, ಮರ ನೆಲಕ್ಕುರುಳಿವೆ. ಕೆಲ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಭಾರಿ ಮಳೆಯ ಕಾರಣ ಜನರು ಮನೆಯಿಂದ ಹೊರ ಬರಲಾಗದ ಪರಿಸ್ಥಿತಿಯಲ್ಲಿದ್ದಾರೆ. ಸಕಲೇಶಪುರ ತಾಲೂಕಿನ ಬೆಳಗೋಡು ಹೋಬಳಿ ಹೆಗ್ಗೋವೆ, ಹೊಂಕರವಳ್ಳಿ, ಆಲೂರು ತಾಲೂಕಿನ ಕೆ.ಹೊಸಕೋಟೆ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ವಿಪರೀತ ಮಳೆಯಾಗಿದ್ದು, ಕಾಫಿ ತೋಟ ಸೇರಿದಂತೆ ರಸ್ತೆ ಬದಿಯ ಮರಗಳು ಧರೆಗೆ ಉರುಳಿದೆ. ಕೆಳವಳ್ಳಿ ಬಳಿ ಬಿದಿರಿನ ಸಾಲು ಬಿದ್ದು ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಗ್ರಾಮಸ್ಥರು ಪರದಾಡುವಂತಾಗಿದೆ.

ಹಳ್ಳಗಳು ತುಂಬಿ ಹರಿಯುತ್ತಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಮಲೆನಾಡಿನಲ್ಲಂತೂ ಬೆಳಗ್ಗೆಯಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ಕೃಷಿ ಚಟುವಟಿಕೆ ಸ್ಥಗಿತಗೊಂಡಿದೆ. ಕಾಫಿ ತೋಟಗಳಲ್ಲಿ ಮರಗಳು ಧರೆಗುರುಳಿದ್ದು, ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿದ್ದಾರೆ.

ಸಕಲೇಶಪುರದ ಬಳಿ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳು ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಪಕ್ಕದ ತಡೆಗೋಡೆಯ ಮೇಲೆ ಮಣ್ಣು ಕುಸಿದಿದೆ. ಸಕಲೇಶಪುರ ತಾಲ್ಲೂಕಿನ ಬೊಮ್ಮಕೆರೆ ಗ್ರಾಮದ ಬಳಿ ಕೆಎಸ್‌ಆರ್‌ಟಿಸಿ ಬಸ್‌ನ ಚಕ್ರವೊಂದು ಮಣ್ಣಿನಲ್ಲಿ ಸಿಲುಕಿತ್ತು. ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ ಬೆಂಗಳೂರು-ಮಂಗಳೂರು ಪ್ರಮುಖ ಸಂಪರ್ಕ ರಸ್ತೆಯಾಗಿರುವ ಸಕಲೇಶಪುರ ತಾಲೂಕಿನ ಶಿರಾಡಿ ಘಾಟ್ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಎರಡು ಕಡೆ ಭೂಕುಸಿತ ಉಂಟಾಗಿತ್ತು. ಈ ರಸ್ತೆಯಲ್ಲಿ ತಡೆಗೋಡೆ ಇದ್ದರೂ ಮಣ್ಣು ಕುಸಿಯುತ್ತಿದ್ದು ಒಂದು ಬದಿಯ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು. ವಾಹನ ದಟ್ಟಣೆಯಿಂದಾಗಿ ನೂರಾರು ವಾಹನಗಳು ನಿಂತಲ್ಲಿಯೇ ನಿಂತಿದ್ದವು. ಡಿವೈಎಸ್ಪಿ ಪ್ರಮೋದ್‌ಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ಉಡುಸಲಮ್ಮ ದೇವಿ ಜಾತ್ರಾ ಮಹೋತ್ಸವ



ಅರಸೀಕೆರೆ: ತಾಲೂಕಿನ ಕಸಬಾ ಹೋಬಳಿಯ ಕೆಲ್ಲಂಗೆರೆ ಗ್ರಾಮದ ಉಡುಸಲಮ್ಮ ದೇವಿ ಜಾತ್ರಾ ಮಹೋತ್ಸವವು ತುಂತುರು ಮಳೆಯಲ್ಲೂ ಸಂಭ್ರಮದಿಂದ ಅಪಾರ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಗ್ರಾಮದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಕಳೆದ 4 ದಿನಗಳಿಂದ ದೇವರ ಮೂರ್ತಿಗಳಿಗೆ ವಿವಿಧ ಪುಷ್ಪಾಲಂಕಾರ ಮಾಡಲಾಗಿತ್ತು.

ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾ ಭಕ್ತಿಯಿಂದ ನಡೆದವು. ಭಾನುವಾರ ಬೆಳಗ್ಗೆ ರಥೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ದೇವರ ಮೂರ್ತಿಗಳಿಗೆ ತರಹೇವಾರಿ ಹೂಗಳಿಂದ ಮಾಡಿದ ಅಲಂಕಾರ ಎಲ್ಲರ ಗಮನ ಸೆಳೆಯಿತು.

ನಂತರ ಅಲಂಕೃತ ರಥದಲ್ಲಿ ಉಡುಸಲಮ್ಮ ದೇವಿಯವರನ್ನು ಆರೋಹಣ ಮಾಡಲಾಯಿತು.

ಕ್ಷೇತ್ರದ ಚಿಕ್ಕಯ್ಯಸ್ವಾಮಿ ಹಾಗೂ ದೂತರಾಯ ಸ್ವಾಮಿಯವರು ರಥಕ್ಕೆ ಪೂಜೆ ಸಲ್ಲಿಸಿ ಗಾಲಿಗಳಿಗೆ ತೆಂಗಿನಕಾಯಿ ಒಡೆಯುವುದರ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ದೇವಿ ನಾಮಸ್ಮರಣೆಯೊಂದಿಗೆ ಭಕ್ತರು ತೇರನ್ನು ಭಕ್ತಿಯಿಂದ ಎಳೆದು ಸಂಭ್ರಮಿಸಿದರು.

ಜಾತ್ರೆ ಪ್ರಯುಕ್ತ ಗ್ರಾಮದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ದೇವಸ್ಥಾನವನ್ನು ತಳಿರು ತೋರಣ ಹೂವುಗಳಿಂದ ಅಲಂಕರಿಸಲಾಗಿತ್ತು. ತುಂತುರು ಮಳೆಯಲ್ಲೂ ಭಕ್ತರು ರಥೋತ್ಸವ ಹಾಗೂ ದೇವರ ಕುಣಿತ ವೀಕ್ಷಿಸಿದರು.

ನಿಧನ



ಶ್ರೀಮತಿ ಗೀತಾ ಬಾರ್ಕಿ

ಮೈಸೂರು, ಮೇ 26- ಮೈಸೂರಿನ ಜಯನಗರ ನಿವಾಸಿ ಶ್ರೀಮತಿ ಗೀತಾ ಬಾರ್ಕಿ (56) ಇಂದು ನಗರದ ಖಾಸಗಿ ಆಸ್ಪತ್ರೆಯಲ್ಲಿ ದೀರ್ಘಾವಧಿ ಅನಾರೋಗ್ಯದಿಂದ ನಿಧನರಾದರು. ಮೃತರು ಪತಿ ಮುರಳಿ ಬರ್ಕಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ವರ್ಗ ಅಗಲಿದ್ದಾರೆ. ಇವರು ಶ್ರೀ ಕಾವೇರಿ ಸ್ಕೂಲ್, ವಿಜಯ ವಿಠ್ಠಲ ಶಾಲೆಯಲ್ಲಿ ಶಿಕ್ಷಕರಾಗಿ ಮತ್ತು ಚಿತ್ರಾ ಶಾಲೆಯ ಪ್ರಿನ್ಸಿಪಾಲ್ ಆಗಿ ಸೇವೆ ಸಲ್ಲಿಸಿದ್ದಾರೆ. ಅಂತ್ಯಕ್ರಿಯೆ ನಾಳೆ (ಮೇ 27) ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈರೇಗೌಡ



ಮೈಸೂರು: ಮೈಸೂರಿನ ಪಡುವಾರಹಳ್ಳಿ ನಿವಾಸಿ ಹಾಗೂ ಮೈಸೂರು ವಿವಿ ನಿವೃತ್ತ ನೌಕರರಾದ ಈರೇಗೌಡ(83) ಸೋಮವಾರ ಸಂಜೆ ನಿಧನರಾದರು.

ಮೃತರು ಪತ್ನಿ ಯಶೋಧ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಾಳೆ(ಮೇ 27) ಮಧ್ಯಾಹ್ನ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ನರ್ಸಿಂಗ್ ಕಾಲೇಜು; ಶವಾಗಾರ ಸೇವಾ ವ್ಯವಸ್ಥೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ



ಮೇಟಗಳ್ಳಿಯಲ್ಲಿರುವ ಮೈಸೂರು ಜಿಲ್ಲಾಸ್ಪತ್ರೆ.

ಮೈಸೂರು, ಮೇ 26(ಆರ್‌ಕೆ)- ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಮೇಟಗಳ್ಳಿ ಬಳಿಯ ಜಿಲ್ಲಾಸ್ಪತ್ರೆಯಲ್ಲಿ ನರ್ಸಿಂಗ್ ಕಾಲೇಜು ಮತ್ತು ಶವಾಗಾರ ಸೇವೆ ಒದಗಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದ್ದಾರೆ.

ಶನಿವಾರ ಜಿಲ್ಲಾಸ್ಪತ್ರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕೀಮೋ ಥೆರಪಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವರು, ಬಳಿಕ ಸಂಜೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಈ ವೇಳೆ ಜಿಲ್ಲಾ ಸರ್ಜನ್ ಡಾ.ಟಿ. ಅಮರನಾಥ್, ಜಿಲ್ಲಾಸ್ಪತ್ರೆಯಲ್ಲಿ ನರ್ಸಿಂಗ್ ಕಾಲೇಜು ಮತ್ತು ಮರಣೋತ್ತರ ಪರೀಕ್ಷೆಗೆ ಸುಸಜ್ಜಿತ ಶವಾಗಾರ ವ್ಯವಸ್ಥೆ ಮಾಡಿಸುವಂತೆ ಪ್ರಸ್ತಾವನೆ ಸಲ್ಲಿಸಿದರು.

ಜಿಲ್ಲೆಯಾದ್ಯಂತ ಎಂಎಲ್‌ಸಿ ಪ್ರಕರಣಗಳಲ್ಲಿ ಸಾವನ್ನಪ್ಪಿದವರ ದೇಹಗಳನ್ನು ಶೈತ್ಯಾಗಾರದಲ್ಲಿರಿಸಲು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ&ಆರ್‌ಐ) ಶವಾಗಾರವನ್ನೇ ಅವಲಂಬಿಸಬೇಕಾಗಿರುವುದರಿಂದ ಅಲ್ಲಿ ಒತ್ತಡ ಜಾಸ್ತಿಯಾಗಿರುವ ಕಾರಣ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಸಚಿವರಿಗೆ ಮಾಹಿತಿ ನೀಡಿದರು.

ಅದಕ್ಕೂ ಪೂರಕವಾಗಿ ವಿಷಯ ಮಂಡಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, 300 ಹಾಸಿಗೆ ಸಾಮರ್ಥ್ಯವುಳ್ಳ ಜಿಲ್ಲಾಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ರೋಗಿಗಳಿಗೆ ಉತ್ತಮ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದರು.

ನರ್ಸಿಂಗ್ ಸಿಬ್ಬಂದಿಗೆ ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಜಿಲ್ಲಾಸ್ಪತ್ರೆಯಡಿ ನರ್ಸಿಂಗ್ ತರಬೇತಿ ಕಾಲೇಜು ಮಂಜೂರು ಮಾಡಿಕೊಡುವಂತೆಯೂ ಮನವಿ ಮಾಡಿದಾಗ ಇದಕ್ಕೆ ಸ್ಪಂದಿಸಿದ ಸಚಿವರು, ಈ ಎರಡೂ ಯೋಜನೆಗಳಿಗೆ ಸಮಗ್ರ ವರದಿ (ಡಿಪಿಆರ್) ಸಲ್ಲಿಸುವಂತೆ ಸೂಚಿಸಿದರು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ತಿಳಿಸಿದ್ದಾರೆ.

ತಾವು, ನರ್ಸಿಂಗ್ ಕಾಲೇಜು ಮತ್ತು ಶವಾಗಾರಕ್ಕೆ ಅಗತ್ಯವಿರುವ ಸ್ಥಳಾವಕಾಶ, ಇನ್ನಿತರ ಮೂಲ ಸೌಲಭ್ಯಗಳಿಗೆ ತಗಲುವ ವೆಚ್ಚದ ಬಗ್ಗೆ ಅಂದಾಜಿನೊಂದಿಗೆ ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುತ್ತೇವೆ. ಜಿಲ್ಲಾಸ್ಪತ್ರೆ ಅಭಿವೃದ್ಧಿಗೂ ಎಲ್ಲಾ ರೀತಿಯ ಕ್ರಮ ಕೈಗೊಳ್ಳುವುದಾಗಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಿರುದ್ಯೋಗಿಗಳ ಯುವನಿಧಿ!

ಮೈಸೂರು, ಮೇ 26- ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಲ್ಲಿ ಒಂದಾದ 'ಯುವ ನಿಧಿ' ಕಾರ್ಯಕ್ರಮವು ನಿರುದ್ಯೋಗಿ ಅಭ್ಯರ್ಥಿಗಳ ಆಶಾಕಿರಣವಾಗಿದ್ದು, ಪದವೀಧರರು, ಡಿಪ್ಲೊಮದಾರರ ನಿರುದ್ಯೋಗಿ ಅಭ್ಯರ್ಥಿಗಳು 2023-2024ರ ಸಾಲಿನಲ್ಲಿ ತೇರ್ಗಡೆಯಾದಂತಹ ಅಭ್ಯರ್ಥಿಗಳಿಗೆ ಯುವ ನಿಧಿ ಕಾರ್ಯಕ್ರಮದ ಅಡಿಯಲ್ಲಿ ಪದವೀಧರರಿಗೆ ಮಾಸಿಕ 3,000 ಹಾಗೂ ಡಿಪ್ಲೊಮಾದಾರರಿಗೆ ಮಾಸಿಕ 1,500 ರೂ. ನೀಡುತ್ತಿದ್ದು, ಇದರ ಸದುಪಯೋಗವನ್ನು ಜಿಲ್ಲೆಯ ನಿರುದ್ಯೋಗಿ ಅಭ್ಯರ್ಥಿಗಳು ಪಡೆಯುವಂತೆ ಕೋರಿದೆ. ಮೈಸೂರು ಜಿಲ್ಲೆಯ 2023-2024ರಲ್ಲಿ ತೇರ್ಗಡೆಯಾದ ಪದವಿ/ಡಿಪ್ಲೊಮಾ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ನಂ.323, 10ನೇ ಮೇನ್, ಸನ್ಮಾರ್ಗ, ಸಿದ್ಧಾರ್ಥನಗರ, ಮೈಸೂರು-11 ಇಲ್ಲಿ ಉಚಿತವಾಗಿ ನೋಂದಣಿ ಮಾಡಿಕೊಡಲಾಗುವುದು. ಆಸಕ್ತ ಅಭ್ಯರ್ಥಿಗಳು ಮಾಹಿತಿಗಾಗಿ ದೂಸಂಖ್ಯೆ 0821-2489972 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕಿ ಡಿ.ಎಂ.ರಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಖಂಡ ಮೌನ, ರಾಜಯೋಗ ಧ್ಯಾನ, ವ್ಯಕ್ತಿತ್ವ ವಿಕಸನ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿಯಲ್ಲಿ ಅಖಂಡ ಮೌನ, ರಾಜಯೋಗ ಧ್ಯಾನ, ವ್ಯಕ್ತಿತ್ವ ವಿಕಸನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಮೇ 26- ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಅಂತರ ರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ 21 ದಿನಗಳ ಅಖಂಡ ಮೌನ, ರಾಜಯೋಗ ಧ್ಯಾನ ಹಾಗೂ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪ್ರಾಂಶುಪಾಲರಾದ ರಾಜಯೋಗಿ ಬ್ರಹ್ಮಕುಮಾರ ರಂಗನಾಥ ಶಾಸ್ತ್ರೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಮಾತು ಬೆಳ್ಳಿ, ಮೌನ ಬಂಗಾರ ಎನ್ನುವ ಹಾಗೆ ಮೌನವು ಮಾನವನ ಅಂತರಂಗದ ಸಂಶೋಧನೆಗೆ ಒಳಪಡುತ್ತದೆ. ಆಂತರಿಕ ಶಕ್ತಿಗಳು ವೃದ್ಧಿಯಾಗುತ್ತವೆ. ಅವಗುಣಗಳು ದೂರವಾಗುತ್ತವೆ. ಮನುಷ್ಯ ಚಾರಿತ್ರ್ಯವಂತನಾಗುತ್ತಾನೆ. ನಡವಳಿಕೆಗಳು ಸುಧಾರಣೆಯಾಗುತ್ತದೆ, ವ್ಯಕ್ತಿತ್ವ ವಿಕಸನವಾಗುತ್ತದೆ. ಮೂಲ ನಿಶಕ್ತತೆಗಳು ದೂರವಾಗುತ್ತವೆ. ಜೊತೆಗೆ ಮುಖದಲ್ಲಿ ದಿವ್ಯ ತೇಜಸ್ಸು ಮೂಡಿ, ಸರ್ವತೋಮುಖ ಬೆಳವಣಿಗೆ ಹೊಂದುತ್ತಾರೆ. ಸಂಪೂರ್ಣ ಆರೋಗ್ಯವಂತರಾಗುತ್ತಾರೆಂದು ತಿಳಿಸಿದರು.

ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ ಮಾತನಾಡಿ, 21 ದಿನಗಳಲ್ಲಿ ಒಂದೊಂದು ಕ್ಷಣವೂ ಅಮೂಲ್ಯವಾಗಿದ್ದು, ರಾಜಯೋಗ ಧ್ಯಾನ, ಜ್ಞಾನ ಧ್ಯಾನ ತಪಸ್ಸಿಗೆ ವಿಶೇಷವಾಗಿ ಒತ್ತು ನೀಡಿ ಇದರ ಪೂರ್ಣ ಲಾಭ ಮಾಡಿಕೊಳ್ಳುವಂತೆ ಕರೆ ನೀಡಿದರು.

ರಿಟ್ರೀಟ್ ಸೆಂಟರ್‌ನ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಶಾರದಾಜಿ ಮಾತನಾಡಿ, 21 ದಿನಗಳ ದಿನಚರಿಯ ಪೂರ್ಣ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಪ್ರಭಾಮಣೀಜೀ, ಸ್ವಾಮಿ ವಿವೇಕಾನಂದ ಸದ್ಭಾವನಾ ರಾಜ್ಯ ಪ್ರಶಸ್ತಿ ಪುರಸ್ಕೃತೆ ರಾಜ ಯೋಗಿನಿ ಬ್ರಹ್ಮಕುಮಾರಿ ದಾನೇಶ್ವರೀಜೀ, ಮಣಿಅಣ್ಣ, ಸಂತೋಷ, ಕುಮಾರ ಇತರರು ಹಾಜರಿದ್ದರು.

ದತ್ತಪೀಠಾಧಿಪತಿಯವರಿಗೆ ವರ್ಧಂತ್ಯುತ್ಸವ ಶುಭಾಶಯ



ಮೈಸೂರಿನ ದತ್ತಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ವರ್ಧಂತಿ ಮಹೋತ್ಸವ ದತ್ತಪೀಠದಲ್ಲಿ ಆಚರಿಸಲಾಯಿತು. ಈ ವೇಳೆ ಬ್ರಾಹ್ಮಣ ಬಂಧು-ಬಾಂಧವರು ಶ್ರೀಗಳಿಗೆ ಫಲಪುಷ್ಪ, ಸ್ಮರಣಿಕೆ ನೀಡಿ, ಆಶೀರ್ವಾದ ಪಡೆದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಎಚ್.ವಿ. ರಾಜೀವ್, ನಂ.ಶ್ರೀಕಂಠಕುಮಾರ್, ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮೀದೇವಿ, ಡಿ.ಟಿ.ಪ್ರಕಾಶ್, ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ, ವಿಪ್ರ ಮುಖಂಡರಾದ ಶಂಕರನಾರಾಯಣ, ಸುನಿಲ್‌ಕುಮಾರ್, ಎಂಎಸ್ ಚಂದ್ರಶೇಖರ್, ಮುರಳಿ, ಶೇಷ ಪ್ರಸಾದ್, ರಘು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರು ಮೌಲ್ಯಮಾಪನ: ಮನಸ್ವಿಗೆ 613 ಅಂಕ



ಮೈಸೂರು, ಮೇ 26- ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯ ವಿದ್ಯಾರ್ಥಿನಿ ಯು.ಮನಸ್ವಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ 613 ಅಂಕ ಗಳಿಸಿದ್ದಾರೆ. ಇವರು ಅಶೋಕಪುರಂ ನಿವಾಸಿ, ನಗರಪಾಲಿಕೆ ವಲಯ ಕಚೇರಿ-2ರ ವ್ಯವಸ್ಥಾಪಕ ಉಮೇಶ್ ಮತ್ತು ಜಗದೀಶ್ವರಿ ದಂಪತಿ ಪುತ್ರಿ, ಮನಸ್ವಿ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾದಾಗ 609 ಅಂಕ ಪಡೆದಿದ್ದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಹುಟ್ಟುಹಬ್ಬದ ಅಂಗವಾಗಿ ಗೋಸೇವೆ




ನಂಜುಮಳಿಗೆಯಲ್ಲಿ ಗೋಪೂಜೆ ಸಲ್ಲಿಸಿ, ನಂತರ ಮೇವು ವಿತರಿಸಲಾಯಿತು.

ಮೈಸೂರು, ಮೇ 26- ಅರಿವು ಸಂಸ್ಥೆ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಭಕ್ತವೃಂದದ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ 83ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಂಜುಮಳಿಗೆಯಲ್ಲಿ ಗೋಪೂಜೆ ಸಲ್ಲಿಸಿ, ನಂತರ ಅವುಗಳಿಗೆ ಮೇವು ವಿತರಿಸಿದರು.

ಈ ವೇಳೆ ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು ಮೈಸೂರಿನ ಹೆಮ್ಮೆಯ ಧಾರ್ಮಿಕ ಆಸ್ತಿ. ಇಂದು ಅವರ 83ನೇ ಜನ್ಮದಿನವನ್ನು ನಾವುಗಳು ಗೋಸೇವೆ ಮೂಲಕ ಆಚರಿಸುತ್ತಿದ್ದೇವೆ. ಈ ಹಿಂದೆ ರಾಜ-ಮಹಾರಾಜರು ಅನೇಕ ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ತೆರೆದಿದ್ದರು. ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು ನಾಡಿನ ಜನತೆಗೆ ಧಾರ್ಮಿಕ ಹಾಗೂ ಧರ್ಮ ಜಾಗೃತಿ ಉಂಟು ಮಾಡುತ್ತಿದ್ದಾರೆ. ನೂರು ಕಾಲ ಹೀಗೆ ಮಾರ್ಗದರ್ಶನ ನೀಡುತ್ತಿರಲೆಂದು ಆಶಿಸುತ್ತೇವೆ ಎಂದರು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ಮಾತನಾಡಿ, ನಮ್ಮ ಧಾರ್ಮಿಕ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುವ ಮೂಲಕ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಸಮಾಜಕ್ಕೆ ಅಪಾರ ಕೊಡುಗೆ ನೀಡಿದೆ ಎಂದು ಕೊಂಡಾಡಿದರು. ಈ ಸಂದರ್ಭದಲ್ಲಿ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ಕಶ್ಯಪ್, ಗೌರಿಶಂಕರ್ ನಗರ ಶಿವು, ಮಲ್ಲೇಶ್, ಚಕ್ರಪಾಣಿ, ಜತ್ತಿಪ್ರಸಾದ್, ಚಂದ್ರು, ಮಹದೇವಸ್ವಾಮಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.05.2025 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ 25.05.2025ರಿಂದ 07.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣೆ, ಮೂತ್ರ ಪಿಂಡ (ಕಿಡ್ನಿ) ಕಾಯಿಲೆಗೆ, ಆರೋಗ್ಯಾಯುಷ್ಯ ಆರೋಗ್ಯವರ್ಧಕ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಭುಜ ನೋವು, ದುಷ್ಟವ್ರಣ/ಮಾಯದ ಗಾಯ, ಮಾನಸಿಕ ಒತ್ತಡ ನಿವಾರಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, .ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಟಿಪ್ಪು ಸುಲ್ತಾನ್ ವೆಲ್‌ಫೇರ್ ಅಂಡ್ ಉರುಸ್ ಕಮಿಟಿ :** 233ನೇ ಉರುಸ್-ಇ-ಷರೀಫ್ ಆಫ್ ಹಜರತ್ ಟಿಪ್ಪು ಸುಲ್ತಾನ್ ಶಾಹೀದ್, ಮುಖ್ಯ ಅತಿಥಿಗಳು : ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಶರೀಫ್ ಸಾಹೇಬ್, ಶಾಸಕರಾದ ತನ್ವೀರ್ ಸೇಠ್, ಹರೀಶ್‌ಗೌಡ, ಕೆಪಿಸಿಸಿ ವಕ್ತಾರ ಲಕ್ಷ್ಮಣ್, ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಆರ್. ಹೊಯ್ಸಳ, ಟಿಪ್ಪು ಸುಲ್ತಾನ್ ಉರುಸ್ ಕಮಿಟಿ ಅಧ್ಯಕ್ಷ ಎಂ.ಎಸ್. ಮುಕರ್ರಮ್, ಮೊಹಮ್ಮದ್ ಹ್ಯಾರೀಸ್ ಸಿದ್ದಿಖಿ, ಜಬ್ಬೀರ್ ಸಿದ್ದಿಖಿ, ಮಜೀದ್ ಅಹಮದ್, ಸ್ಥಳ: ಅಲ್ಲಾ ಮಾಲೀಕ್ ಹೌಸ್, ಸಾಡೇ ರಸ್ತೆ, ಮೀನಾ ಬಜಾರ್, ಬೆಳಗ್ಗೆ 11ಕ್ಕೆ.

■ **ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ :** ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರೇಣುಕಾಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ದುರ್ಗಾ ಫೌಂಡೇಷನ್ ಅಧ್ಯಕ್ಷ ರೇಖಾ ಶ್ರೀನಿವಾಸ್, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಅವಧೂತ ದತ್ತ ಪೀಠ :** ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನಾಚರಣೆ, ಬೆಳಗ್ಗೆ 8ಕ್ಕೆ ಶ್ರೀ ಚಕ್ರ ಪೂಜಾ, ನಂತರ ಪದ್ಮಾವತಿ ಅಭಿಷೇಕ, ಲಕ್ಷ್ಮೀ ಹೋಮ ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ, ಮಧ್ಯಾಹ್ನ 3ಕ್ಕೆ ಕಲ್ಪನಾ ಸುಮಂತ್ ರಾಘವೇಂದ್ರ ಅವರಿಂದ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ, ಸಂಜೆ 5 ಕ್ಕೆ ಹನುಮದ್ ವಾಹನ ಉತ್ಸವ ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ, ಸಂಜೆ 7ಕ್ಕೆ ವಿದ್ವಾನ್ ಕುನ್ನಕುಡಿ ಬಾಲಮುರಳಿ ಕೃಷ್ಣ ಅವರಿಂದ ಕರ್ನಾಟಕ ಸಂಗೀತ, ಸ್ಥಳ: ಅವಧೂತ ದತ್ತಪೀಠ, ನಂಜನಗೂಡು ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ-ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಎನ್. ಹೇಮಾ, ಸಿ. ವಿಶ್ವನಾಥ್, ಕೆ.ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ-ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕರೆಗೊಂದು ಗೀತೆ-ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಿಲಯದ ಕಲಾವಿದರಿಂದ ವಾದ್ಯವೃಂದ, 10.30 ಕಥೆಯಲ್ಲಿದೆ ಉತ್ತರ ಕಾರ್ಯಕ್ರಮ ಒಂದು ವರ್ಷ ಪೂರೈಸಿದ ಸಂದರ್ಭದಲ್ಲಿ ಕೇಳುಗರೊಂದಿಗೆ ನೇರ ಸಂವಾದ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ ಎಸ್. ಹಾಗೂ ಕಾರ್ತಿಕ್. ಎಂ. ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ-ಕಥೆ-ಪರಿವರ್ತನೆ ಜಗದ ನಿಯಮ-ಅರ್ಥಶಾಸ್ತ್ರ ಉಪನ್ಯಾಸಕಿ, ಕವಯತ್ರಿ ಎನ್. ಆರ್. ರೂಪಶ್ರೀ ಅವರಿಂದ, 12.35 ದೇವರನಾಮ, 12.45 ದಿಲೀಪ್ ಎನ್. ಕೆ. ಅವರಿಂದ ಸಣ್ಣಕಥೆ-ಕುಂಟು ಸೇತುವೆ, 1.00 ಪ್ರಗತಿಪಥ - ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು-ಎಂ. ಎಸ್. ಶೀಲಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ.ಎಂ. ಬಾಲಮುರಳಿ ಕೃಷ್ಣ-ಹಾಡುಗಾರಿಕೆ, 4.00 ಕಥಾಕಾಲಕ್ಷೇಪ-ರಾಮಾಯಣದ ಕಿಷ್ಕಿಂದಾ ಮತ್ತು ಸುಂದರ ಕಾಂಡ, ಪ್ರಸ್ತುತಿ-ವಿದ್ವಾನ್. ಆರ್. ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ -ಕಿಸಾನ್‌ವಾಣಿ-ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಅಡಿಕೆ ತೋಟದ ನಿರ್ವಹಣೆ ಕುರಿತು ಮೈಸೂರು ತಾಲೂಕು ಯಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಆರ್. ಸಿದ್ಧಪ್ಪ ಅವರೊಂದಿಗೆ ಸಂದರ್ಶನ, ಸಂದರ್ಶಕರು - ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್-ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ-ಜುಗಲ್‌ಬಂದಿ-ಲಾಲ್ ಗುಡಿ ಬಿ ಜಯರಾಮನ್ ಮತ್ತು ಅಮ್ಜದ್ ಅಲಿಖಾನ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ-ಎ.ಕೆ.ಸಿ. ನಟರಾಜನ್-ಕ್ಲಾರಿಯೋನೆಟ್ ವಾದನ, 10.00 ಚೈತ್ರವನ-ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ-ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು-ಹಳೆಯ ಕನ್ನಡ ಚಿತ್ರಗೀತೆಗಳು

ನಮ್ಮ ಸಹೋದರಿಯರ ಸಿಂಧೂರ ಅಳಿಸಲು ಬಂದವರ ಅಂತ್ಯ ಖಚಿತ

ಪ್ರಧಾನಿ ಮೋದಿ ಗುಡುಗು



ಗುಜರಾತ್, ಮೇ 26– ಭಾರತವನ್ನು ದ್ವೇಷಿಸುವುದೇ ಪಾಕಿಸ್ತಾನದ ಉದ್ದೇಶವಾಗಿದ್ದು, ಹಾನಿ ಮಾಡುವ ಮಾರ್ಗಗಳ ಕುರಿತೇ ಯೋಚಿಸುತ್ತದೆ. ಆದರೆ, ನಾವು ದೇಶದ ಬಡತನವನ್ನು ಹೋಗಲಾಡಿಸಿ, ಆರ್ಥಿಕ ಅಭಿವೃದ್ಧಿ ತರುವ ಗುರಿ ಹೊಂದಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಿಳಿಸಿದರು.

ದಾಹೋದ್‌ನಲ್ಲಿ ಬೃಹತ್ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯನ್ನು ಪ್ರಶಂಸಿಸಿದರು. ನಮ್ಮ ಸಹೋದರಿಯರ ಸಿಂಧೂರವನ್ನು ಅಳಿಸಿಹಾಕುವ ದುಸ್ಸಾಹಸ ಮಾಡಿದವರಿಗೆ ಅಂತ್ಯವು ಸನ್ನಿಹಿತವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದರು.

ಇಬ್ಭಾಗಗೊಂಡ ಬಳಿಕ ಹುಟ್ಟಿಕೊಂಡ ದೇಶವೊಂದು ಭಾರತವನ್ನು ದ್ವೇಷಿಸುವುದನ್ನೇ ವೃತ್ತಿಯಾಗಿಸಿಕೊಂಡಿದೆ. ಭಾರತಕ್ಕೆ ಹಾನಿ ಮಾಡುವುದನ್ನೇ ಬಯಸುತ್ತದೆ. ಆದರೆ, ಭಾರತವು ಆರ್ಥಿಕ ಅಭಿವೃದ್ಧಿ ಮೂಲಕ ಬಡತನವನ್ನು ಹೋಗಲಾಡಿಸುವ ಗುರಿ ಹೊಂದಿದೆ. ಆ ಮೂಲಕ ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಬದಲಾಯಿಸುತ್ತಿದೆ. ಹಿಂದುಳಿದ ಪ್ರದೇಶಗಳಿಗೆ ಅಭಿವೃದ್ಧಿ ಕೊಂಡೊಯ್ಯುವುದೇ ಸರ್ಕಾರದ ನೀತಿಯಾಗಿದೆ ಎಂದು ಮೋದಿ ತಿಳಿಸಿದರು.

ಡಿಜಿ–ಐಜಿಪಿ ಎಂ.ಎ. ಸಲೀಂ ನೇಮಕ ಪ್ರಶ್ನಿಸಿ ವಕೀಲೆಯಿಂದ ಸಿಎಸ್‌ಗೆ ಪತ್ರ



ಎಂ.ಎ ಸಲೀಂ

ಬೆಂಗಳೂರು, ಮೇ 26– ಕರ್ನಾಟಕದ ಪ್ರಭಾರಿ ಡಿಜಿ–ಐಜಿಪಿಯಾಗಿ ನೇಮಕವಾಗಿರುವ ಎಂ.ಎ.ಸಲೀಂ ಅವರಿಗೆ ಸಂಕಷ್ಟ ಎದುರಾಗಿದೆ. ಕನ್ನಡಿಗ, ಹಿರಿಯ ಐಪಿಎಸ್ ಅಧಿಕಾರಿ ಡಾ. ಎಂ.ಎ ಸಲೀಂ ಅವರನ್ನು ರಾಜ್ಯದ ಪೊಲೀಸ್ ಮಹಾನಿರ್ದೇಶಕರನ್ನಾಗಿ (ಪ್ರಭಾರ) ನೇಮಕ ಮಾಡಿ ರಾಜ್ಯ ಸರ್ಕಾರ ಕಳೆದ ಬುಧವಾರ (ಮೇ.21) ಆದೇಶ ಹೊರಡಿಸಿತ್ತು. ಈ ಆದೇಶ ಹಿಂಪಡೆಯುವಂತೆ ವಕೀಲೆ ಸುಧಾ ಕಟ್ವಾ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಸುಪ್ರೀಂ ಕೋರ್ಟ್‌ನ ಆದೇಶದಂತೆ ಪ್ರಭಾರ ಡಿಜಿ–ಐಜಿಪಿ ನೇಮಿಸುವಂತಿಲ್ಲ. ಯಾವುದೇ ವಿಶೇಷ ಕಾರಣ ನೀಡದೆ, ಅವಧಿ ಉಲ್ಲೇಖಿಸದೆ ಡಿಜಿ–ಐಜಿಪಿ ನೇಮಕ ಮಾಡಲಾಗಿದೆ. ಈ ಮೂಲಕ ಸಂವಿಧಾನ ಮತ್ತು ಕಾನೂನು ಉಲ್ಲಂಘಿಸಲಾಗಿದೆ. ಹೀಗಾಗಿ. ಡಾ. ಎಂ.ಎ.ಸಲೀಂ ಅವರ ನೇಮಕಾತಿ ಹಿಂಪಡೆಯಬೇಕು. ಸುಪ್ರೀಂಕೋರ್ಟ್ ಮಾರ್ಗಸೂಚಿಯಂತೆ ನೇಮಕ ಮಾಡಲಿ. ಏಳು ದಿನಗಳಲ್ಲಿ ನಿಯಮ ಪಾಲಿಸದಿದ್ದರೆ ಪಿಐಎಲ್ ಸಲ್ಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಸರ್ಕಾರದಿಂದ ಬಿಜೆಪಿ ವಿರುದ್ಧ ಮಾನನಷ್ಟ ಮೊಕದ್ದಮೆ

ಬೆಂಗಳೂರು, ಮೇ 26– ನಮ್ಮ ಸರ್ಕಾರದ ಮೇಲೆ ತಪ್ಪು ಮಾಹಿತಿ ಕೊಡುವುದು. ಅಪಪ್ರಚಾರ ಮಾಡುತ್ತಿರುವ ಹಿನ್ನಲೆಯಲ್ಲಿ ಬಿಜೆಪಿ ವಿರುದ್ಧ ಸರ್ಕಾರ ಮಾನನಷ್ಟ ಮೊಕದ್ದಮೆ ಹೂಡಿದೆ ಎಂದು ಕಾನೂನು ಸಚಿವ ಹೆಚ್.ಕೆ ಪಾಟೀಲ್ ತಿಳಿಸಿದರು. ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಸುಳ್ಳು ಮಾಹಿತಿ ಕೊಡುತ್ತಿದ್ದಾರೆ. ಸರ್ಕಾರದ ವಿರುದ್ಧ ತಪ್ಪು ಅಭಿಪ್ರಾಯ ಬರುವ ಹಾಗೆ ಮಾಡುತ್ತಿದ್ದಾರೆ. ಹೀಗಿರುವಾಗ ಸುಮ್ಮನೆ ಇರೋದಕ್ಕೆ ಸಾಧ್ಯನಾ? ಹೀಗಾಗಿ ಕೇಸ್ ಹಾಕಲಾಗಿದೆ. ಸರ್ಕಾರದ ವಿರುದ್ಧ ಮಾತನಾಡಿದರೆ ಸುಮ್ಮನೆ ಇರೋಕೆ ಸಾಧ್ಯವಿಲ್ಲ. ಅದಕ್ಕೆ ಕೇಸ್ ಹಾಕಲಾಗಿದೆ ಎಂದು ಸ್ಪಷ್ಟಪಡಿಸಿದರು.

ನಿಮ್ಮ ಕಡೆ ಕರೆಂಟ್ ಇಲ್ವಾ...; ಇವರಿಗೆ ಕರೆ ಮಾಡಿ!

ಮೈಸೂರು, ಮೇ 26– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ವಿ.ವಿ ಮೊಹಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯಲ್ಲಿ ವಿ.ವಿ ಮೊಹಲ್ಲಾ, ಕುವೆಂಪು ನಗರ, ಹೂಟಗಳ್ಳಿ ಮತ್ತು ರಾಮಕೃಷ್ಣ ನಗರ ಉಪ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು. ಈಗಾಗಲೇ ಮಳೆಗಾಲ ಆರಂಭವಾಗಿರುವುದರಿಂದ ಮಳೆ–ಗಾಳಿಯ ಸಂದರ್ಭಗಳಲ್ಲಿ ವಿದ್ಯುತ್ ವಿಫಲವಾದಲ್ಲಿ ಹಾಗೂ ವಿದ್ಯುತ್ ಮಾರ್ಗಗಳ ಜಾಲದಲ್ಲಿ ವ್ಯತ್ಯಯಗಳು ಸಂಭವಿಸಿದಲ್ಲಿ ಹಾಗೂ ವಿದ್ಯುತ್ ಸಂಬಂಧಿತ ದೂರುಗಳಿಗೆ ಸಾರ್ವಜನಿಕರು ತುರ್ತಾಗಿ ಈ ಕೆಳಕಂಡ ಆಯಾ ವ್ಯಾಪ್ತಿಯ ಚಾವಿಸನಿನಿಯ ನಿಗಮದ ಸಾರ್ವಜನಿಕ ಸೇವಾ ಕೇಂದ್ರಗಳು ಮತ್ತು ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), 9449598644, ವಿ.ವಿ ಮೊಹಲ್ಲಾ ಉಪವಿಭಾಗ ವ್ಯಾಪ್ತಿಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), 9448994744, ಜಯಲಕ್ಷ್ಮಿ ಪುರಂ ಶಾಖಾ ವ್ಯಾಪ್ತಿ ಪ್ರದೇಶದ ಸಹಾಯಕ ಇಂಜಿನಿಯರ್(ವಿ), 9448994766 ಜಯಲಕ್ಷ್ಮಿ ಪುರಂ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994877, ಎಂ.ಜಿ ಕೊಪ್ಪಲು ಶಾಖಾ ವ್ಯಾಪ್ತಿ ಪ್ರದೇಶದ ಸಹಾಯಕ ಇಂಜಿನಿಯರ್(ವಿ),9449598555, ಎಂ.ಜಿ.ಕೊಪ್ಪಲು ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 94489 94929, ಒಂಟಿಕೊಪ್ಪಲು ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9448994767, ಒಂಟಿಕೊಪ್ಪಲು ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994768, ಸರ್ವೀಸ್ ಸ್ಟೇಷನ್ ನಂಬರ್ 0821–2510702 ಮತ್ತು 9449598599, ಮೇಟಗಳ್ಳಿ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9448994769 ಮೇಟಗಳ್ಳಿ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994770, ಸರ್ವೀಸ್ ಸ್ಟೇಷನ್ ನಂಬರ್ 0821–2581570 & 9448994852.


ಹೂಟಗಳ್ಳಿ ಉಪವಿಭಾಗವ್ಯಾಪ್ತಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), 9449598639, ಹೂಟಗಳ್ಳಿ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9449598640 ಹೂಟಗಳ್ಳಿ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 94808 41175, ಸರ್ವೀಸ್ ಸ್ಟೇಷನ್ ನಂಬರ್ 0821–2404922 &9449598699. ಬೋಗಾದಿ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 94495 98553 , ಬೋಗಾದಿ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994771, ಸರ್ವೀಸ್ ಸ್ಟೇಷನ್ ನಂಬರ್ 0821–2343711 & 9480844844, ಇಲವಾಲ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ),9449598529, ಇಲವಾಲ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994784, ಸರ್ವೀಸ್ ಸ್ಟೇಷನ್ ನಂಬರ್ 0821–2402853 & 9449596800. ಬೀರಿಹುಂಡಿ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 94489 94783 ಸರ್ವೀಸ್ ಸ್ಟೇಷನ್ ನಂಬರ್ 0821–2459576 & 9141209851. ರೂಪನಗರ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9480810387 ಸರ್ವೀಸ್ ಸ್ಟೇಷನ್ ನಂಬರ್ 0821–2952441 & 8123070044.

ಕುವೆಂಪುನಗರ ಉಪವಿಭಾಗ ವ್ಯಾಪ್ತಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), 9448994743, ಸರಸ್ವತಿಪುರಂ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ),9448994762, ಸರಸ್ವತಿಪುರಂ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994763, ಅರವಿಂದ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9448994764, ಅರವಿಂದ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994765, ನಿವೇದಿತಾ ನಗರ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9449598574, ನಿವೇದಿತಾ ನಗರ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 94495 98575, ಸರ್ವೀಸ್ ಸ್ಟೇಷನ್ ನಂಬರ್ 94489 94866 ಮತ್ತು 0821–2560211.

ರಾಮಕೃಷ್ಣನಗರ ಉಪವಿಭಾಗ ವ್ಯಾಪ್ತಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), 9448994596, ವಿವೇಕಾನಂದ ನಗರ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 94495 98572, ವಿವೇಕಾನಂದ ನಗರ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9449598573, ಸರ್ವೀಸ್ ಸ್ಟೇಷನ್ ನಂಬರ್ 0821–2340292 & 9449598581. ಜಯಪುರ ಶಾಖಾ ವ್ಯಾಪ್ತಿ ಪ್ರದೇಶ ಸಹಾಯಕ ಇಂಜಿನಿಯರ್(ವಿ), 9448994787 ಜಯಪುರ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9480057637, ಸರ್ವೀಸ್ ಸ್ಟೇಷನ್ ನಂಬರ್ 0821–2595844 & 9480816972, ಹಾರೋಹಳ್ಳಿ ಶಾಖಾ ವ್ಯಾಪ್ತಿ ಪ್ರದೇಶ ಕಿರಿಯ ಇಂಜಿನಿಯರ್(ವಿ), 9448994844, ಸರ್ವೀಸ್ ಸ್ಟೇಷನ್ ನಂಬರ್ 9480816971 & 9141209414 ಅನ್ನು ಸಂಪರ್ಕಿಸುವಂತೆ ಸೆಸ್ಕ್ ಪ್ರಕಟಣೆ ತಿಳಿಸಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮ ದಿನ

ಮೈಸೂರಿನ ಅವಧೂತ ದತ್ತಪೀಠದಲ್ಲಿ ನಾನಾ ಧಾರ್ಮಿಕ ಕಾರ್ಯ; ಸಾಧಕರಿಗೆ ವಿವಿಧ ಬಿರುದು–ಬಾವಲಿ ಪ್ರದಾನ



ಮೈಸೂರಿನ ಅವಧೂತ ದತ್ತಪೀಠದ ನಾದಮಂಟಪದಲ್ಲಿ ಸೋಮವಾರ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜನ್ಮ ದಿನದ ಕಾರ್ಯಕ್ರಮದಲ್ಲಿ ಆಶ್ರಮದ ವತಿಯಿಂದ ವಿವಿಧ ಬಿರುದನ್ನು ಶ್ರೀಗಳು ಪ್ರದಾನ ಮಾಡಿದರು.

ಮೈಸೂರು, ಮೇ 26(ಎಂಟಿವೈ)– ಮೈಸೂರಿನ ಅವಧೂತ ದತ್ತ ಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮ ದಿನದ ಅಂಗವಾಗಿ ವಿವಿಧ ಕಾರ್ಯಕ್ರಮ ನೆರವೇರಿದವು.

ಸೋಮವಾರ ಬೆಳಗ್ಗೆಯಿಂದ ಸಂಜೆವರೆಗೂ ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಪಾಲ್ಗೊಂಡರು. ದೇಶ–ವಿದೇಶಗಳಿಂದ ಆಗಮಿಸಿದ್ದ ಅಪಾರ ಸಂಖ್ಯೆಯ ಭಕ್ತರು ಮಳೆ ನಡುವೆಯೂ ಶ್ರೀಗಳ ಜನ್ಮದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಭಕ್ತಿ ಮೆರೆದರು.

ಬೆಳಗ್ಗೆ 8ಗಂಟೆಗೆ ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ರುದ್ರ ಹೋಮ, ಆಯುಷ್ಯ ಹೋಮ, ರುದ್ರ ಅಭಿಷೇಕ ನೆರವೇರಿಸಲಾಯಿತು. ನಂತರ ಗಣಪತಿ ಸಚ್ಚಿದಾನಂದ ಶ್ರೀಗಳನ್ನು ಅಲಂಕೃತ ಸಾರೋಟ್‌ನಲ್ಲಿ ಪ್ರಾರ್ಥನಾ ಮಂದಿರದಿಂದ ನಾದಮಂಟಪದವರೆಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ನಾದ ಮಂಟಪದಲ್ಲಿ ಶ್ರೀ ಚಕ್ರ ಪೂಜೆ ನೆರವೇರಿಸಲಾಯಿತು. ನಂತರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪ್ರತ್ಯಕ್ಷ ಪಾದ ಪೂಜೆ ನೆರವೇರಿಸಿ, ಪುಷ್ಪ ನಮನ ಸಲ್ಲಿಸಿದರು.

ವಿಶೇಷ ನಾಣ್ಯ ಬಿಡುಗಡೆ: ಇದೇ ವೇಳೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಜನ್ಮ ದಿನದ ಅಂಗವಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹೊರ ತಂದಿರುವ ವಿಶೇಷ ನಾಣ್ಯವನ್ನು ಶ್ರೀಗಳು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಆರ್‌ಬಿಐನ ಹೈದರಾಬಾದ್ ಶಾಖೆಯ ವ್ಯವಸ್ಥಾಪಕರಾದ ಪಿ.ವಿಜಯಲಕ್ಷ್ಮಿ ನಾಣ್ಯಗಳನ್ನು ಸ್ವಾಮೀಜಿಯವರಿಗೆ ಸಮರ್ಪಿಸಿದರು.

ಮಂತ್ರ ಪಠಣದಿಂದ ಒಳಿತಾಗುತ್ತದೆ: ಇದೇ ವೇಳೆ ಭಕ್ತರಿಗೆ ಆಶೀರ್ವಚನ ನೀಡಿದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ಹರಿಃ ಓಂ ನಮಃ ಶಿವಾಯ ಮಂತ್ರ ಪಠಣ ಮಾಡಿದರೆ ಎಲ್ಲರಿಗೂ ಒಳಿತಾಗುತ್ತದೆ. ನಾವು ಯಾರಿಗೂ ಅನ್ಯಾಯ ಮಾಡಬಾರದು. ಸಕಲ ಜೀವರಾಶಿಗೂ ಒಳಿತನ್ನೇ ಬಯಸಬೇಕು. ನಾವು ಸನಾತನ ಧರ್ಮವನ್ನು ರಕ್ಷಿಸಬೇಕು. ಧರ್ಮ ಮಾರ್ಗದಲ್ಲಿ ನಡೆಯುವವರನ್ನು ಭಗವಂತ ರಕ್ಷಿಸುತ್ತಾನೆ. ಅಧರ್ಮದ ಮಾರ್ಗದಲ್ಲಿ ಸಾಗುವವರನ್ನು ಶಿಕ್ಷಿಸುತ್ತಾನೆ. ನಿನ್ನೆಯಷ್ಟೇ ಭಾರತ ಸೇನೆಗೆ 25 ಲಕ್ಷ ಕಾಣಿಕೆ ಸಮರ್ಪಿಸಿದ್ದೇವೆ. ಕಷ್ಟಗಳು ಬರುತ್ತವೆ, ಹಾಗೇ ಸರಿದು ಹೋಗುತ್ತವೆ. ಭಗವಂತನನ್ನು ನಂಬಿ, ಪ್ರಾರ್ಥಿಸಿದರೆ ಎಲ್ಲವೂ ಪರಿಹಾರವಾಗುತ್ತದೆ ಎಂದು ತಿಳಿಸಿದರು.

ಆಶ್ರಮದಿಂದ ಬಿರುದು ಪ್ರದಾನ: ನಾದ ಮಂಟಪದಲ್ಲಿ ನಡೆದ ಸಚ್ಚಿದಾನಂದ ಶ್ರೀಗಳ ಜನ್ಮ ದಿನದ ಕಾರ್ಯಕ್ರಮದಲ್ಲಿ ವಿವಿಧ ಬಿರುದು ಪ್ರದಾನ ಮಾಡಲಾಯಿತು. ವಿಷ್ಣುಭಟ್ಟ ಲಕ್ಷ್ಮೀ ನಾರಾಯಣ ಘನಪಾಠಿ ಅವರಿಗೆ ವೇದ ನಿಧಿ, ಕುಪ್ಪ ವಿಶ್ವನಾಥ ಶಾಸ್ತ್ರಿ – ಶಾಸ್ತ್ರ ನಿಧಿ, ಪಂ. ವಿನಾಯಕ ತೊರವಿ–ನಾದ ನಿಧಿ, ವಿದ್ವಾನ್ ಶಶಾಂಕ್ ಸುಬ್ರಮಣ್ಯಂ– ನಾದ ನಿಧಿ, ವಿದುಷಿ ಟಿ.ಎಸ್. ಶ್ರೀಲಕ್ಷ್ಮಿ ಅವರಿಗೆ ನಾಟ್ಯ ನಿಧಿ, ಕೃಷ್ಣ ಮೂರ್ತಿ –ಆಸ್ಥಾನ ಶಿಲ್ಪಿ, ಗಂಗಾವರಂ ವೇದಾವತಿ ಮತ್ತು ಗೀತಾ ಪ್ರಂಜಾಲ ಅವರಿಗೆ ಜಯಲಕ್ಷ್ಮಿ ಪುರಸ್ಕಾರ, ಕಮಲ್ ಕಪೂರ್, ಸಂಪತ್ ಕುಮಾರ್ ಆಚಾರ್, ಶ್ರೀ ಕಂಟೇಟಿ ಶ್ರೀನಿವಾಸ್ ಹಾಗೂ ಮೈಸೂರಿನ ಎಸ್. ನಾಗರಾಜ್ ಅವರಿಗೆ ದತ್ತಪೀಠ ಬಂಧು ಹಾಗೂ ಸುಚಿತಾ ರೆಡ್ಡಿ ಅವರಿಗೆ ಸಸ್ಯ ಬಂಧು ಬಿರುದು ಪ್ರದಾನ ಮಾಡಿ ಶ್ರೀಗಳು ಆಶೀರ್ವದಿಸಿದರು.

ಧರ್ಮ ಪಾಲಿಸಿದರೆ ದೇಶದಲ್ಲಿ ಶಾಂತಿ ನೆಲೆಗೊಳ್ಳಲಿದೆ

- ಸುತ್ತೂರು ಶ್ರೀಗಳ ಅಭಿಮತ
- ದತ್ತಪೀಠದ ನಾದಮಂಟಪದ 27ನೇ ವಾರ್ಷಿಕೋತ್ಸವ ಉದ್ಘಾಟನೆ
- ಗಣಪತಿ ಸಚ್ಚಿದಾನಂದ ಶ್ರೀಗಳ ಸಾಧನೆಗೆ ಶ್ಲಾಘನೆ



ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದ 27ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭಕ್ತರನ್ನುದ್ದೇಶಿಸಿ ಮಾತನಾಡುತ್ತಿರುವುದು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಮೈಸೂರು, ಮೇ 26(ಎಂಕೆ)– ಭಾರತ ಆಧ್ಯಾತ್ಮಿಕವಾಗಿ ಸಂಪದ್ಭರಿತವಾದ ದೇಶವಾಗಿದ್ದು, ನಾವೆಲ್ಲರೂ ಧರ್ಮವನ್ನು ಪಾಲಿಸುವ ಕೆಲಸ ಮಾಡಿದರೆ ಇಡೀ ದೇಶದಲ್ಲಿ ಶಾಂತಿ ನೆಲೆಸಲಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ಅವಧೂತ ದತ್ತಪೀಠದ ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಶ್ರೀಗಳು, ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ದಾಳಿ ಅತ್ಯಂತ ಖಂಡನೀಯ. ನಮ್ಮನ್ನೆಲ್ಲ ರಕ್ಷಿಸಲು ಹೋರಾಟ ಮಾಡುತ್ತಿರುವ ಯೋಧರನ್ನು ಗೌರವಿಸುವುದರ ಜೊತೆಗೆ ಆರೋಗ್ಯಕ್ಕಾಗಿ ಪ್ರಾರ್ಥನೆ ಸಲ್ಲಿಸುವಂತೆ ಕರೆ ನೀಡಿದರು.

ಜಗತ್ತಿನಲ್ಲಿ ಈಗ ನಡೆಯುತ್ತಿರುವ ಎಷ್ಟೋ ಸಂಶೋಧನೆಗಳನ್ನು ಭಾರತೀಯರು ಬಹಳ ಹಿಂದೆಯೇ ಕೊಟ್ಟಿದ್ದಾರೆ. ಭಾರತಕ್ಕೆ ಭವ್ಯ ಪರಂಪರೆಯ ಇತಿಹಾಸವಿದೆ. ಜೀವ ನದಿಗಳು ಹರಿಯುವಂತೆ ದೇಶದ ಧಾರ್ಮಿಕ ಪರಂಪರೆಯನ್ನು ಗಣಪತಿ ಶ್ರೀಗಳು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಜಗತ್ತಿನಾದ್ಯಂತ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆಗಳು ಇದ್ದು, ಅವರ ದರ್ಶನ ಮಾಡಿದರೆ ಎಷ್ಟೋ ಸಂತೃಪ್ತಿ ಸಿಗುತ್ತದೆ ಎಂದು ಭಕ್ತರು ನಂಬಿದ್ದಾರೆ. ಜಗತ್ತಿನಲ್ಲಿ ಶಾಂತಿ–ನೆಮ್ಮದಿ ನೆಲೆಸಬೇಕೆಂಬ ಮಹಾದಾಸೆಯನ್ನು ಗಣಪತಿ ಶ್ರೀಗಳು ಇಟ್ಟುಕೊಂಡಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ನಿಕಟ ಸಂಬಂಧ: ಗಣಪತಿ ಸಚ್ಚಿದಾನಂದ ಆಶ್ರಮ ಮತ್ತು ಸುತ್ತೂರು ಮಠಗಳು ಮಾನಸಿಕವಾದಂತಹ ನಿಕಟ ಸಂಬಂಧ ಹೊಂದಿದ್ದು, ಈ ಎರಡೂ ಆಶ್ರಮಗಳು ಮಧುರ ಬಾಂಧವ್ಯದ ಸಂಕೇತವಾಗಿವೆ. ಗಣಪತಿ ಸ್ವಾಮೀಜಿ ಯವರು ಭಕ್ತರಿಗೆ ಅನುಗ್ರಹಿಸಿದರೆ, ಅದೇ ಭಕ್ತ ವೃಂದವು ಸ್ವಾಮೀಜಿಗಳ ಆರೋಗ್ಯ ಮತ್ತು ಆಯುಷ್ಯ ವೃದ್ಧಿಗಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತಾರೆ. ಸಚ್ಚಿದಾನಂದ ಮೂಲ ಆಶ್ರಮ ಮೈಸೂರಿನಲ್ಲಿ ಇರುವುದು ಮೈಸೂರಿಗರ ಹೆಮ್ಮೆಯಾಗಿದೆ ಎಂದರು. ಇದೇ ವೇಳೆ ಸುತ್ತೂರು ಶ್ರೀಗಳು, ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಗೌರವ ಸಮರ್ಪಿಸಿ, ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರನ್ನು ಅಭಿನಂದಿಸಿದರು.

ಅಭಿನಂದನೆ...



ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದ ದ್ಯಾವಪ್ಪ ನಾಯಕ ಅವರನ್ನು ನಂಜನಗೂಡು ವಿದ್ಯಾನಗರದ ಸಮೃದ್ಧಿ ಗೆಳೆಯರ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕ ಕಲ್ಮಳ್ಳಿ ನಟರಾಜು, ಕೊಳ್ಳೇಗಾಲದ ಬಸವೇಶ್ವರ ನೌಕರರ ಸಂಘದ ಸಂಸ್ಥಾಪಕ ಮಧುವನಹಳ್ಳಿ ಸಿದ್ದಲಿಂಗಸ್ವಾಮಿ, ನಿವೃತ್ತ ಶಿಕ್ಷಕ ಲಿಂಗರಾಜು, ಪ್ರಭಾಕರ ಹುಣಸೂರು, ಸತ್ಯ ನಾರಾಯಣ, ರಾಜು ಮಾರ್ಕೆಟ್ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯಗಳ ಶಿಕ್ಷಣದ ಗುಣಮಟ್ಟ ಸುಧಾರಿಸಲು ಡಿಸಿಎಂ ನೇತೃತ್ವದಲ್ಲಿ ಸಂಪುಟ ಉಪಸಮಿತಿ ರಚನೆ

ಬೆಂಗಳೂರು, ಮೇ.26– ಕರ್ನಾಟಕದಾದ್ಯಂತದ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಗುಣಮಟ್ಟದ ಒಟ್ಟಾರೆ ಸುಧಾರಣೆಯ ಕುರಿತು ಅಧ್ಯಯನ ಮಾಡಿ ಸಂಪುಟಕ್ಕೆ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿಯನ್ನು ರಚಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ಸಂಪುಟ ಉಪಸಮಿತಿ ಈಗಾಗಲೇ ಎರಡು ಸಭೆಗಳನ್ನು ನಡೆಸಿದ್ದು, ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಸಮಿತಿಯು ತನ್ನ ವರದಿಯನ್ನು ಸಂಪುಟಕ್ಕೆ ಸಲ್ಲಿಸುವ ಮೊದಲು ಒಂದು ಅಥವಾ ಎರಡು ಸಭೆಗಳನ್ನು ನಡೆಸಬಹುದು ಎಂದು ಅವರು ಹೇಳಿದರು. ಸಮಿತಿಯು ಎಲ್ಲಾ ವಿಶ್ವವಿದ್ಯಾಲಯಗಳ ಪ್ರಸ್ತುತ ಸ್ಥಿತಿಯನ್ನು, ಅವುಗಳ ಹಣಕಾಸು ಮತ್ತು ಶೈಕ್ಷಣಿಕ ಪರಿಸ್ಥಿತಿಗಳು ಮತ್ತು ಬ್ಯಾಕ್‌ಲಾಗ್ ಮತ್ತು ನಿಯಮಿತ ಹುದ್ದೆಗಳು ಸೇರಿದಂತೆ ಖಾಲಿ ಹುದ್ದೆಗಳ ಬಗ್ಗೆ ಅಧ್ಯಯನ ಮಾಡುತ್ತದೆ.

ಕೆಲವು ವಿಶ್ವವಿದ್ಯಾಲಯಗಳಲ್ಲಿ ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ ಮತ್ತು ವಿಶ್ವವಿದ್ಯಾಲಯಗಳಲ್ಲಿನ ಕೆಲವು ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಸಚಿವರು ಹೇಳಿದರು. ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಮಂಜೂರಾದ ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದನ್ನು ಮತ್ತು ಹೊಸ ಕೋರ್ಸ್‌ಗಳಿಗೆ ಹೆಚ್ಚಿನ ಹುದ್ದೆಗಳನ್ನು ರಚಿಸುವುದನ್ನು ಸಮಿತಿಯು ಅಧ್ಯಯನ ಮಾಡಬೇಕು.

ಪ್ರಸ್ತುತ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಹುದ್ದೆಗಳಿಗೆ 3,000 ಹುದ್ದೆಗಳು ಖಾಲಿ ಇವೆ. ಸಂಪುಟ ಉಪಸಮಿತಿಯು ಸಂಪುಟಕ್ಕೆ ಸಮಗ್ರ ವರದಿಯನ್ನು ನೀಡಬೇಕಾಗಿದೆ. ಈ ಉದ್ದೇಶಕ್ಕಾಗಿ, ಹಣಕಾಸು ಇಲಾಖೆಯ ತಜ್ಞರನ್ನು ಸಹ ಸಮಿತಿಯಲ್ಲಿ ಸೇರಿಸಲಾಗಿದೆ. ಸಂಸ್ಥೆಗಳನ್ನು ನಡೆಸಲು ಯುಜಿಸಿಯಿಂದ ಹಸಿರು ನಿಶಾನೆ ಪಡೆಯಲು ಅಗತ್ಯವಾದ ಅಧ್ಯಾಪಕರ ನೇಮಕಾತಿಯ ಕುರಿತು ಸಮಿತಿಗೆ ಮತ್ತು ಹಣಕಾಸು ಇಲಾಖೆಯ ತಜ್ಞರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ ಎಂದು ಸುಧಾಕರ್ ಹೇಳಿದರು.

ರೈಲ್ವೆ ವರ್ಕ್‌ಶಾಪ್‌ನಲ್ಲಿ ಲೈಂಗಿಕ ಕಿರುಕುಳ ಆರೋಪ ಪ್ರಕರಣ

ಕೆಲಸದ ಸ್ಥಳದಲ್ಲಿ ಹೆಚ್ಚುವರಿ ಸಿಸಿಟಿವಿ ಕ್ಯಾಮರಾ ಸೇರಿ ವಿವಿಧ ಕ್ರಮ

ಮೈಸೂರು,ಮೇ 26(ಪಿಎಂ)– ಮೈಸೂರಿನ ಅಶೋಕಪುರಂನ ಕೇಂದ್ರ ರೈಲ್ವೆ ವರ್ಕ್‌ಶಾಪ್‌ನ ನಾಲ್ವರು ಉದ್ಯೋಗಿ ಗಳ ವಿರುದ್ಧ ಲೈಂಗಿಕ ಕಿರುಕುಳ ಆರೋಪದಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಸಂಬಂಧ ನೈರುತ್ಯ ರೈಲ್ವೆ ಅನೇಕ ಕ್ರಮಗಳನ್ನು ಕೈಗೊಂಡಿದೆ ಎಂದು ನೈರುತ್ಯ ರೈಲ್ವೆಯ ಹಿರಿಯ ಕಾನೂನು ಅಧಿಕಾರಿ ಹಾಗೂ ಸಾರ್ವಜನಿಕ ಸಂಪರ್ಕ ಅಧಿಕಾರಿ (ಎರಡನೇ) ಎಸ್.ಶ್ರೀಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಕರಣದಲ್ಲಿ ಆರೋಪಿಗಳಾಗಿರುವ ಉದ್ಯೋಗಿಗಳನ್ನು ಮತ್ತೊಂದು ಘಟಕಕ್ಕೆ ವರ್ಗಾಯಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಅಲ್ಲದೆ, ಸುರಕ್ಷಿತ ಕೆಲಸ ವಾತಾವರಣ ಖಾತರಿಗಾಗಿ ಹೆಚ್ಚುವರಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಜೊತೆಗೆ ದೂರುದಾರರಿಗೆ ಹಿರಿಯ ಮಹಿಳಾ ಅಧಿಕಾರಿಯೊಬ್ಬರು ಸಮಾಲೋಚನೆ ನಡೆಸಿದ್ದಾರೆ. ಅಲ್ಲದೆ, ಯಾವುದೇ ಪಕ್ಷಪಾತವಿಲ್ಲದಂತೆ ನ್ಯಾಯಸಮ್ಮತ ವಿಚಾರಣೆ ನಡೆಸಲಾಗುತ್ತಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹೊರವಲಯದ ವಿವಿಧೆಡೆ ಸರಣಿ ಕಳವು: ಲಕ್ಷಾಂತರ ಮೌಲ್ಯದ ಚಿನ್ನಾಭರಣ, ನಗದು ದೋಚಿ ಪರಾರಿ

ಕ್ರೈಂ ಬಾಕ್ಸ್

ಮೈಸೂರು, ಮೇ 26– ಮೈಸೂರು ನಗರ ಹಾಗೂ ಸುತ್ತಮುತ್ತ ಮೂರ‍್ನಾಲ್ಕು ದಿನಗಳಲ್ಲಿ ಮನೆ ಹಾಗೂ ಅಂಗಡಿಗಳಲ್ಲಿ ಸರಣಿ ಕಳ್ಳತನವಾಗಿದೆ.

ವಿಜಯನಗರ ಹಾಗೂ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮನೆಗಳ್ಳತನ ಹಾಗೂ ಜಯಪುರ ಹಾಗೂ ಇಲವಾಲ ಠಾಣೆ ವ್ಯಾಪ್ತಿಯಲ್ಲಿ ಮಳಿಗೆಗಳಲ್ಲಿ ಕಳ್ಳತನವಾಗಿದೆ. ಹೊಂಚು ಹಾಕಿ ಕೈಚಳಕ ತೋರಿರುವ ಖದೀಮರು ನಗ–ನಾಣ್ಯ ದೋಚಿ ಪರಾರಿಯಾಗಿದ್ದಾರೆ. ಮೂರ‍್ನಾಲ್ಕು ದಿನಗಳಲ್ಲಿ ನಾಲ್ಕು ಕಡೆ ಕಳ್ಳತನವಾಗಿರುವುದು ಸಾರ್ವಜನಿಕರ ಆತಂಕ ಹೆಚ್ಚಿಸಿದೆ.

ಮನೆಗೆ ನುಗ್ಗಿದ ಖದೀಮರು: ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕೂರ್ಗಳ್ಳಿ ಗ್ರಾಮದ ಶಿವನಗರ ನಿವಾಸಿ ಟಿ.ಎಸ್.ರವಿ ಅವರ ಮನೆಯಲ್ಲಿ 5.30 ಲಕ್ಷ ನಗದು ಹಾಗೂ 3.28 ಲಕ್ಷ ಮೌಲ್ಯದ 41 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಲಾಗಿದೆ.

ಹೆಬ್ಬಾಳ ಮುಖ್ಯರಸ್ತೆ ಸಂಜೀವಿನಿ ವೃತ್ತದ ಬಳಿ ಗೋಬಿ ಅಂಗಡಿ ಇಟ್ಟುಕೊಂಡಿರುವ ರವಿ ಅವರು ಪತ್ನಿ ಹಾಗೂ ಮಕ್ಕಳೊಂದಿಗೆ ಗ್ರಾಮ ದೇವತೆ ಹಬ್ಬಕ್ಕೆಂದು ಹೊಳೆನರಸೀಪುರ ತಾಲೂಕಿನಲ್ಲಿರುವ ಸ್ವಗ್ರಾಮ ತಿಪ್ಪನಕೊಪ್ಪಲಿಗೆ ಮೇ 23ರಂದು ತೆರಳಿದ್ದರು. ಅವರೊಂದಿಗೆ ಗೋಬಿ ಅಂಗಡಿಯಲ್ಲಿ ಸಹಾಯ ಮಾಡುವ ಸಂಬಂಧಿ ಮಹೇಶ್, ಮೇ 24ರಂದು ಊರಿಗೆ ತೆರಳಿ ಮನೆ ಕೀಯನ್ನು ರವಿ ಅವರಿಗೆ ನೀಡಿದ್ದರು. ರವಿ ಅವರ ಕುಟುಂಬ ಮೇ 25ರಂದು ವಾಪಸ್ಸಾದಾಗ ಮುಂಬಾಗಿಲಿನ ಬೀಗ ಮುರಿದಿತ್ತು ಗಾಬರಿಯಿಂದ ಒಳಹೋಗಿ ನೋಡಿದಾಗ ಕಬೋರ್ಡ್‌ನ ಡ್ರಾಯರ್‌ನಲ್ಲಿದ್ದ ಚಿನ್ನಾಭರಣ ಹಾಗೂ ಹಣ ಕಳುವಾಗಿರುವುದು ತಿಳಿಯಿತು. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೈಚೈನು, ವಾಚ್ ಕಳವು: ಮತ್ತೊಂದು ಪ್ರಕರಣದಲ್ಲಿ ಇಲವಾಲ ಗ್ರಾಮ, ಅಲೋಕ ರಸ್ತೆ ನಿವಾಸಿ ಸಂಜಯ್‌ಕುಮಾರ್ ಮನೆಗೆ ನುಗ್ಗಿರುವ ಖದೀಮರು, 61 ಸಾವಿರ ಮೌಲ್ಯದ ಚಿನ್ನದ ಕೈಚೈನು ಹಾಗೂ 8 ಸಾವಿರ ಬೆಲೆಯ ಕೈಗಡಿಯಾರವನ್ನು ದೋಚಿದ್ದಾರೆ. ಸಂಜಯ್‌ಕುಮಾರ್ ಮೇ 19ರಂದು ಪತ್ನಿ ಹಾಗೂ ಮಕ್ಕಳೊಂದಿಗೆ ಹಾಸನದ ಪರಸನಹಳ್ಳಿ ಗ್ರಾಮಕ್ಕೆ ತೆರಳಿದ್ದರು. ಮೇ 25ರಂದು ವಾಪಸ್ಸಾದಾಗ ಕಬ್ಬಿಣ ಹಾಗೂ ಮರದ ಬಾಗಿಲುಗಳು ತೆರೆದಿದ್ದವು. ಒಳಹೋಗಿ ನೋಡಿದಾಗ ಬೀರುವಿನಲ್ಲಿದ್ದ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಲಾಕರ್‌ನಲ್ಲಿದ್ದ ಚಿನ್ನದ ಕೈಚೈನು ಹಾಗೂ ಬೆಲೆಬಾಳುವ ಕೈಗಡಿಯಾರ ಕಳುವಾಗಿದ್ದವು. ಈ ಸಂಬಂಧ ಇಲವಾಲ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶೆಲ್ಟರ್ ಮುರಿದು ಕಳ್ಳತನ: ಮೈಸೂರು ತಾಲೂಕು ಬೀರಿಹುಂಡಿ ಗ್ರಾಮ ಹಾಗೂ ಬೀರಿಹುಂಡಿ ಸರ್ಕಲ್‌ನಲ್ಲಿರುವ ಎರಡು ಅಂಗಡಿಗಳಲ್ಲಿ ಒಂದೇ ದಿನ ರಾತ್ರಿ ಕಳ್ಳತನವಾಗಿದೆ. ಬೀರಿಹುಂಡಿ ಗ್ರಾಮದ ರಘು, ಮೈಸೂರು–ಗದ್ದಿಗೆ ಮುಖ್ಯ ರಸ್ತೆಯ ಬೀರಿಹುಂಡಿ ಸರ್ಕಲ್‌ನಲ್ಲಿ ಹರ್ಷ ಮೊಬೈಲ್ ಸ್ಟೋರ್ ಇಟ್ಟುಕೊಂಡಿದ್ದು, ಮೇ 23ರಂದು ರಾತ್ರಿ 9 ಗಂಟೆಗೆ ಅಂಗಡಿ ಬಾಗಿಲು ಮುಚ್ಚಿ ಮನೆಗೆ ಹೋಗಿದ್ದರು. ಮರುದಿನ ಬೆಳಗ್ಗೆ 7.30ಕ್ಕೆ ಅಂಗಡಿ ತೆರೆಯಲು ಬಂದಾಗ ರೋಲಿಂಗ್ ಶೆಲ್ಟರ್ ಅನ್ನು ಯಾರೋ ಮೀಟಿದ್ದರು. ಒಳಹೋಗಿ ಪರಿಶೀಲಿಸಿದಾಗ ಸಿಸಿಟಿವಿ ಕ್ಯಾಮರಾದ ಡಿವಿಆರ್ ಹಾಗೂ 3 ಸಾವಿರ ರೂ. ಹಣವನ್ನು ದುಷ್ಕರ್ಮಿಗಳು ಕಳ್ಳತನ ಮಾಡಿರುವುದು ತಿಳಿಯಿತು. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೆಡಿಕಲ್ ಸ್ಟೋರ್: ಅದೇ ದಿನ ರಾತ್ರಿ ಬಿಳಿಕೆರೆ ಹೋಬಳಿ, ಧರ್ಮಾಪುರ ನಿವಾಸಿ ರಮೇಶ್, ಬೀರಿಹುಂಡಿ ಗ್ರಾಮದ ಜಯಪುರ ರಸ್ತೆಯಲ್ಲಿ ನಡೆಸುತ್ತಿರುವ ಶ್ರೀ ರಾಘವೇಂದ್ರ ಮೆಡಿಕಲ್ಸ್ ಅಂಗಡಿಯಲ್ಲೂ ಕಳ್ಳತನವಾಗಿದೆ. ಮೇ 23ರಂದು ರಾತ್ರಿ 9.30ಕ್ಕೆ ಅಂಗಡಿ ಬಂದ್ ಮಾಡಿ ಮನೆಗೆ ಹೋಗಿದ್ದ ರಮೇಶ್, ಮರುದಿನ ಬೆಳಗ್ಗೆ 8.30ಕ್ಕೆ ಅಂಗಡಿ ಬಳಿ ಬಂದಾಗ ವಿಷಯ ತಿಳಿದಿದೆ. ಖದೀಮರು ರೋಲಿಂಗ್ ಶೆಲ್ಟರ್ ಮುರಿದು, ಸಿಸಿಟಿವಿ ಕ್ಯಾಮರಾದ ಡಿವಿಆರ್ ಲಿಂಕ್ ತುಂಡರಿಸಿದ ನಂತರ ಮಳಿಗೆಯೊಳಗೆ ನುಗ್ಗಿ 15 ಸಾವಿರ ರೂ. ನೋಟುಗಳು ಹಾಗೂ 3 ಸಾವಿರ ರೂ. ಚಿಲ್ಲರೆ ಸೇರಿ ಒಟ್ಟು 18 ಸಾವಿರ ಹಣವನ್ನು ದೋಚಿದ್ದಾರೆ. ಬಳಿಕ ಪಕ್ಕದಲ್ಲಿರುವ ಮಹದೇವಸ್ವಾಮಿ ಅವರ ಪ್ರಾವಿಷನ್ ಸ್ಟೋರ್‌ಗೂ ನುಗ್ಗಲು ಪ್ರಯತ್ನಿಸಿದ್ದಾರೆ. ಆದರೆ ಅದರ ರೋಲಿಂಗ್ ಶೆಲ್ಟರ್ ಮೀಟಲು ಸಾಧ್ಯವಾಗದೆ ವಾಪಸ್ಸಾಗಿದ್ದಾರೆ. ಈ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿ.ನಾರಾಯಣಗೌಡರಿಗೆ 'ಆತಿಥ್ಯ ರತ್ನ' ಪ್ರಶಸ್ತಿ



ಮೈಸೂರು, ಮೇ 26(ಎಂಕೆ)– ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ ಕೊಡ ಮಾಡುವ ಪ್ರತಿಷ್ಠಿತ 'ಆತಿಥ್ಯ ರತ್ನ' ಪ್ರಶಸ್ತಿಗೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ಸಿ.ನಾರಾಯಣಗೌಡ ಭಾಜನರಾಗಿದ್ದಾರೆ.

ಹಲವು ದಶಕಗಳಿಂದ ಹೋಟೆಲ್ ಉದ್ಯಮಿಯಾಗಿರುವ ಸಿ.ನಾರಾಯಣಗೌಡ ಅವರು, ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸಲ್ಲಿಸಿರುವ ಸೇವೆ ಪರಿಗಣಿಸಿ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮೇ 29ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ರುವ ಸರ್ ಎಂ.ವಿ.ಆಡಿಟೋರಿಯಂನಲ್ಲಿ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿದೆ ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವಥ್ ನಾರಾಯಣ್ ಭಾಗವಹಿಸಲಿದ್ದು, ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ ಅಧ್ಯಕ್ಷ ಜಿ.ಕೆ.ಶೆಟ್ಟಿ, ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಇಂಗ್ಲೀಷ್ ಪೇಪರ್ ಓದುತ್ತಾ... ರೀ ಕನ್ನಡದಲ್ಲಿ ಅದೆಂತಾ ಸಿನಿಮಾ ತೆಗಿತಾರ್‍ರಿ...! ಇಲ್ಲಿ ನೋಡಿ, 'ಬೀಡಿ ಸೇದಿ ಬಂದ' ಅಂತ ಇದೊಂದೆಸ್ರಾ...!!

ಗಂಡ : ಅಯ್ಯೋ ಅದು 'ಬಿಡಿಸದ ಬಂಧ' ಕಣೆ...!!

ಮೈಸೂರು ಮಿತ್ರ

ಮಂಗಳವಾರ, 27 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮನಸ್ಸಿಗೆ ಅನಿಸಿದ್ದು ಹೇಳೋದು ತಪ್ಪಲ್ಲ. ಆದರೆ ಮನಸ್ಸಲ್ಲಿ ಒಂದು ಬಾಯಲ್ಲಿ ಒಂದು ಹೇಳೋದು ತಪ್ಪು. – ನುಡಿಮುತ್ತು

ವೇದ ಸುಳ್ಳಾದರೂ	ತಾಯಿಯಂತೆ ಮಗಳು
ಗಾದೆ ಸುಳ್ಳಾಗದು	ನೂಲಿನಂತೆ ಸೀರೆ

ನಿಮ್ಮ ಪತ್ರಗಳು

ಸ್ಪೀಕರ್ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್, 18 ಮಂದಿ ಬಿಜೆಪಿ ಶಾಸಕರ ಅಮಾನತು ಆದೇಶವನ್ನು ರದ್ದುಪಡಿಸಿರುವುದು ಸ್ವಾಗತಾರ್ಹ ಸಂಗತಿ. ಕಳೆದ ವಿಧಾನ ಸಭೆ ಅಧಿವೇಶನದಲ್ಲಿ ಸ್ಪೀಕರ್ ಪೀಠಕ್ಕೆ ಅಗೌರವ ತೋರಿಸಿದ್ದಾರೆಂಬ ಕಾರಣಕ್ಕೆ ಬಿಜೆಪಿಯ 18 ಮಂದಿ ಶಾಸಕರನ್ನು 6 ತಿಂಗಳ ಕಾಲ ಸದಸ್ಯತ್ವದಿಂದ ಅಮಾನತುಗೊಳಿಸಲಾಗಿತ್ತು. ಇದರ ವಿರುದ್ದ ಎಲ್ಲಾ ಶಾಸಕರು, ರಾಜ್ಯಪಾಲರಿಗೆ ಮನವಿ ಸಲ್ಲಿಸಿ, ತಮ್ಮ ಅಮಾನತನ್ನು ರದ್ದುಗೊಳಿಸುವಂತೆ ವಿಧಾನಸಭೆಯ ಅಧ್ಯಕ್ಷರಿಗೆ ಸೂಚಿಸಬೇಕೆಂದು ಮನವಿ ಮಾಡಿದ್ದರು. ರಾಜ್ಯಪಾಲರು ಸಹ ಇದರ ಬಗ್ಗೆ ಮುಖ್ಯಮಂತ್ರಿ ಹಾಗೂ ವಿಧಾನಸಭಾಧ್ಯಕ್ಷರಿಗೆ ಪತ್ರ ಬರೆದು ಬಿಜೆಪಿ ಶಾಸಕರ ಮನವಿಯನ್ನು ಸಕಾರಾತ್ಮಕವಾಗಿ ಪರಿಗಣಿಸುವಂತೆ ಸೂಚಿಸಿ ಪತ್ರ ಬರೆದಿದ್ದರು. ಇವರ ಪೈಕಿ ಕೆಲವು ಶಾಸಕರು ಸ್ಪೀಕರ್ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದ ಮೊರೆ ಹೋಗಲು ಸಿದ್ದತೆ ನಡೆಸುತ್ತಿದ್ದರು ಎನ್ನಲಾಗಿದೆ.

ಇದೀಗ ಈ ಎಲ್ಲಾ ಶಾಸಕರ ಅಮಾನತನ್ನು ವಿಧಾನಸಭಾಧ್ಯಕ್ಷರು ರದ್ದುಗೊಳಿಸುವ ಮೂಲಕ ಪ್ರಕರಣಕ್ಕೆ ತೆರೆ ಎಳೆದಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಬೆಳವಣಿಗೆಗಳು ಸರ್ವೇ ಸಾಮಾನ್ಯ. ಆಡಳಿತ ಮತ್ತು ವಿರೋಧ ಪಕ್ಷಗಳ ಅಂತಿಮ ಗುರಿ ಜನತಾ ಕಲ್ಯಾಣ. ಇದಕ್ಕಾಗಿ ಅವು ಶ್ರಮಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ತಪ್ಪು ಮಾಡುವ ಗಂಡು, ಹೆಣ್ಣಿಗೆ ಶಿಕ್ಷೆ ತಾರತಮ್ಯವೇಕೆ?

ಮಾನ್ಯರೆ,

ಹಾಸನದಲ್ಲಿ ಎಲ್ಲಾ ಸಿದ್ಧತೆಗಳೊಂದಿಗೆ ಅಲಂಕೃತಗೊಂಡ ಕಲ್ಯಾಣ ಮಂಟಪದಲ್ಲಿ ನಡೆಯಬೇಕಿದ್ದ ಮದುವೆ ದಿಢೀರ್ ಎಂದು ರದ್ದಾಯಿತು. ಕಾರಣ, ವಧುವಿನ ಪ್ರೇಮ ಕಥೆ. ನೂರಾರು ಕನಸುಗಳನ್ನು ಕಾಣುತ್ತಿದ್ದ ಮಧು ಮಗನಿಗೆ ನಿರಾಸೆಯಾಯಿತು. ಬಂಧು ಬಳಗದವರಿಗೆ ಸಂಭ್ರಮದ ಆ ಕ್ಷಣ ಕರಗಿ, ನೋವನ್ನು ಅನುಭವಿಸುವಂತೆ ಆಯಿತು. ಕಲ್ಯಾಣ ಮಂಟಪವು ಕ್ಷಣ ಮಾತ್ರದಲ್ಲಿ ಮೌನವಾಯಿತು. ಹುಡುಗಿಯಿಂದಲೇ ಮದುವೆ ರದ್ದಾಯಿತು. ಅದೇ ಹುಡುಗ ಈ ತರಹ ಮಾಡಿದ್ದರೆ ಬಿಡುತ್ತಿದ್ದರೆ. ಕಲ್ಯಾಣ ಮಂಟಪದಲ್ಲಿ ಯುದ್ಧವೇ ನಡೆದು ಹೋಗುತ್ತಿತ್ತು. ವರನನ್ನು ಪೊಲೀಸರು, ಸಾರ್ವಜನಿಕರು ಬಡಿದು ಸ್ಟೇಷನ್‌ನಲ್ಲಿ ಕೂರಿಸುತ್ತಿದ್ದರು. ಈ ವಿಷಯದಲ್ಲಿ ಹುಡುಗಿಗೆ ಒಂದು ನ್ಯಾಯ, ಹುಡುಗನಿಗೆ ಒಂದು ನ್ಯಾಯ ಸರಿನಾ. ಹುಡುಗನ ಭಾವನೆಗಳೊಂದಿಗೆ ಆಟವಾಡಿ, ನೋವು ಕೊಟ್ಟು ಹುಡುಗನಿಗೆ ಮೋಸ ಮಾಡಿದ ಹುಡುಗಿಯರಿಗೂ ಶಿಕ್ಷೆ ನೀಡಿ. ಶಿಕ್ಷೆ ನೀಡುವಲ್ಲಿ ಏಕೆ ಈ ತಾರತಮ್ಯ. ಇನ್ನಾದರೂ ಶಿಕ್ಷೆಯು ಏಕರೂಪವಾಗಿರಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಸುಣ್ಣದಕೇರಿಯಲ್ಲಿ ಒಳಚರಂಡಿ ಅವ್ಯವಸ್ಥೆ ಸರಿಪಡಿಸಿ



ಮಾನ್ಯರೆ,


ಮೈಸೂರಿನ ಸುಣ್ಣದಕೇರಿ 5ನೇ ಕ್ರಾಸ್, 10ನೇ ಕ್ರಾಸ್, 8ನೇ ಕ್ರಾಸ್ ಸಿದ್ದಪ್ಪಾಜಿ ದೇವಾಲಯದ ಬಳಿ ಯುಜಿಡಿ ಮ್ಯಾನ್‌ಹೋಲ್‌ಗಳಲ್ಲಿ ಇದ್ದಕ್ಕಿದ್ದಂತೆ ಒಳಚರಂಡಿ ಕೊಳಚೆ ನೀರು ಉಕ್ಕಿ ಹರಿಯುತ್ತಿದ್ದು, ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗಿದೆ. ಇದರಿಂದ ಆ ಪ್ರದೇಶವೆಲ್ಲಾ ಸಹಿಸಲಸಾಧ್ಯವಾದ ದುರ್ನಾತದಿಂದ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆಯಲ್ಲಿ ಓಡಾಡುವ ಪ್ರಯಾಣಿಕರು, ಕಾಲೇಜು ವಿದ್ಯಾರ್ಥಿಗಳು ಈ ಸಮಸ್ಯೆಯಿಂದ ಉಸಿರಾಡುವುದೇ ಕಷ್ಟವೆನಿಸಿದಂತಾಗಿದೆ. ರಸ್ತೆಯ ಮೇಲೆ ಕೊಳಕು ನೀರು ಹರಿಯುತ್ತಿರುವುದರಿಂದ ವಾಹನಗಳ ಓಡಾಟದಿಂದ ಇಡೀ ರಸ್ತೆಯೆಲ್ಲ ಹರಡಿದ್ದಲ್ಲದೇ, ದುರ್ನಾತದಿಂದ ಸಾರ್ವಜನಿಕರು ತೀವ್ರ ಕಿರಿಕಿರಿ ಅನುಭವಿಸುವಂತಾಗಿದೆ.

ಈ ಬಗ್ಗೆ ತಕ್ಷಣವೇ ನಿವಾಸಿಗಳು ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ಆಸೀಫ್ ಅವರ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ತಿಳಿಸುವ ಪ್ರಯತ್ನ ಮಾಡಿದರಾದರೂ ಆಯುಕ್ತರು ಕರೆ ಸ್ವೀಕರಿಸಲಿಲ್ಲ. ಮಾಧ್ಯಮದವರ ಗಮನ ಸೆಳೆದ ಸಾರ್ವಜನಿಕರೊಬ್ಬರು ಕೊನೆಗೆ ನಗರ ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಚಿತ್ರ ಸಹಿತ ಮಾಹಿತಿ ಕಳುಹಿಸಿದರೂ ಏನೂ ಪ್ರಯೋಜನವಾಗಿಲ್ಲ. ಅಧಿಕಾರಿಗಳು ಯುಜಿಡಿ ಸಮಸ್ಯೆ ಪರಿಹಾರಕ್ಕೆ ಮೀನಾಮೇಷ ಎಣಿಸುತ್ತಿದ್ದಾರೆ. 50ನೇ ವಾರ್ಡ್‌ನಲ್ಲಿ ಇದಕ್ಕೆ ಶಾಶ್ವತ ಪರಿಹಾರ ನೀಡುವಂತೆ ಸ್ಥಳೀಯರು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

– ನೊಂದ ನಿವಾಸಿಗಳು, ಸುಣ್ಣದಕೇರಿ, ಮೈಸೂರು.

ಈ ಹಾವಳಿ ತಪ್ಪಿಸದಿದ್ದರೆ ಅನಾಹುತ ಗ್ಯಾರಂಟಿ

ಮಾನ್ಯರೆ,



ಮೈಸೂರು–ಹುಣಸೂರು ರಸ್ತೆಯ ಐಶ್ವರ್ಯ ಪೆಟ್ರೋಲ್ ಬಂಕ್ ಬಳಿಯ ಸಿಗ್ನಲ್‌ನಲ್ಲಿ ಹುಣಸೂರು ಕಡೆಯಿಂದ ಬರುವ ಮಾರ್ಗದಲ್ಲಿ ರೆಡ್‌ಲೈಟ್ ಇತ್ತು ಎಂದರೆ ಅತ್ತ ಕಡೆಯಿಂದ ಬರುವ ದ್ವಿಚಕ್ರ ವಾಹನ, ಆಟೋ, ಕಾರು ಹಾಗೂ ಇನ್ನಿತರೆ ಲಘು ವಾಹನಗಳು ಯೋಗನರಸಿಂಹಸ್ವಾಮಿ ದೇವಸ್ಥಾನ ಕಡೆ ತಿರುಗಿಸಿ, ಸ್ವಲ್ಪ ಮುಂದೆ ಬಂದು ಮತ್ತೆ ಪಕ್ಕದ ಬದಿಗೆ ತಿರುಗಿಸಿಕೊಂಡು ಹುಣಸೂರು ರಸ್ತೆಯತ್ತ ಹಾದು ಹೋಗುತ್ತಾರೆ. ಇಲ್ಲಿ ಬ್ಯಾರಿಕೇಡ್ ಹಾಕಿದ್ದರೂ ಅದನ್ನು ಸುತ್ತಿಕೊಂಡೇ ಹೋಗುತ್ತಾರೆ. ಆಗ ಕಾಳಿದಾಸ ರಸ್ತೆ ಹಾಗೂ ಯೋಗನರಸಿಂಹಸ್ವಾಮಿ ದೇವಸ್ಥಾನದ ಕಡೆಯಿಂದ ಬರುವ ವಾಹನ ಸವಾರರು ಪರಿತಪಿಸಬೇಕಾದ ಪರಿಸ್ಥಿತಿ ನಿತ್ಯವೂ ಇದೆ. ಅಲ್ಲಿ ಸಂಚಾರಿ ಪೊಲೀಸ್ ಇದ್ದರೂ ಅವರ ಪಾಡಿಗೆ ಅವರು ಎಲ್ಲೋ ಒಂದು ಕಡೆ ಕೂತಿರುತ್ತಾರೆ. ಒಂದು ನಿಮಿಷ ಕಾಯಲು ಆಗದಂತಹ ಅವಿವೇಕಿ ವಾಹನ ಸವಾರರಿಂದ ಅನಾಹುತವಾಗುವುದನ್ನು ತಡೆಯಲು ಮನವಿ. –ವೀಣಾ ವಿಜಯನಗರ ಮೊದಲ ಹಂತ, ಮೈಸೂರು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ನ್ಯಾಷನಲ್ ಹೆರಾಲ್ಡ್ ಹಗರಣ: ಏನಿದು ಪ್ರಕರಣ?

ಭಾರತೀಯ ತನಿಖಾ ಸಂಸ್ಥೆಗಳು, ಒಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಮುಖವಾಣಿಯಾಗಿದ್ದ ನ್ಯಾಷನಲ್ ಹೆರಾಲ್ಡ್ ಹಗರಣಗಳ ತನಿಖೆಯನ್ನು ಚುರುಕುಗೊಳಿಸಿವೆ. ಅಕ್ರಮ ಹಣ ವರ್ಗಾವಣೆಯ ಈ ಪ್ರಕರಣದಲ್ಲಿ ಕಾಂಗ್ರೆಸ್‌ಶಾಹಿ ಪರಿವಾರದ ಸೋನಿಯಾ ಮತ್ತು ರಾಹುಲ್ ಗಾಂಧಿಗೆ ಸಂಬಂಧಿಸಿದ ಆಸ್ತಿಗಳ ಸ್ವಾಧೀನಕ್ಕೆ ಪಡೆಯಲು ಜಾರಿ ನಿರ್ದೇಶನಾಲಯ (ಇಡಿ) ಕ್ರಮ ಕೈಗೊಂಡಿದೆ. ಅಸೋಸಿಯೇಟೆಡ್ ಜನರಲ್ಸ್ ಲಿಮಿಟೆಡ್‌ನ (ಎಜೆಎಲ್) ದಿಲ್ಲಿ, ಮುಂಬೈ ಮತ್ತು ಲಕ್ನೋಗಳಲ್ಲಿರುವ ಆಸ್ತಿಗಳನ್ನು ಸೋನಿಯಾ–ರಾಹುಲ್ ಒಡೆತನದ ಯಂಗ್ ಇಂಡಿಯಾ ಲಿಮಿಟೆಡ್ (ವೈಐಎಲ್) ಕಂಪನಿಯು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಈ ನಗರಗಳ ಕಂಪನಿಯ ಪ್ರಾಪರ್ಟಿ ರಿಜಿಸ್ಟ್ರಾರ್‌ಗಳಿಗೆ ಕೇಂದ್ರೀಯ ತನಿಖಾ ಸಂಸ್ಥೆ ಏಪ್ರಿಲ್ 11ರಂದು ನೋಟಿಸ್ ನೀಡಿತ್ತು.

ಮುಂಬೈನ ಹೆರಾಲ್ಡ್ ಹೌಸ್‌ನಲ್ಲಿರುವ ಪ್ರಸ್ತುತ ಬಾಡಿಗೆದಾರ ಕಂಪನಿಗೆ ಮುಂದಿನ ಎಲ್ಲಾ ಬಾಡಿಗೆಗಳನ್ನು ನೇರವಾಗಿ ಇಡಿಗೆ ಜಮಾ ಮಾಡುವಂತೆ ಪ್ರತ್ಯೇಕ ನೋಟಿಸ್ ನೀಡಲಾಗಿದೆ. ಕಾಂಗ್ರೆಸ್‌ನ ಪ್ರಶ್ನಾತೀತ ನಾಯಕರು ತಮಗಿರುವ ರಾಜಕೀಯ ಪ್ರಾಬಲ್ಯ ಹಾಗೂ ಆರ್ಥಿಕ ಸಾಮರ್ಥ್ಯ ಬಳಸಿಕೊಂಡು ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ತನಿಖಾ ಸಂಸ್ಥೆ ಆರೋಪಿಸಿದೆ. ಈ ಬೆಳವಣಿಗೆಗಳಿಂದಾಗಿ ಗಾಂಧಿ ಪರಿವಾರ ಹಾಗೂ ಕಾಂಗ್ರೆಸ್ ನಾಯಕರು ಕಂಗಾಲಾಗಿದ್ದಾರೆ.

ಈ ಹಗರಣದಲ್ಲಿ ಸೋನಿಯಾ ಮತ್ತು ರಾಹುಲ್ ಗಾಂಧಿಯವರು ಪ್ರಮುಖ ಆರೋಪಿಗಳೆನ್ನಲಾಗಿದೆ. ಈ ಕಂಪನಿಗಳ ಹಣಕಾಸು ವ್ಯವಹಾರಗಳ ದಾಖಲೆಗಳನ್ನು ತನಿಖಾ ಸಂಸ್ಥೆಗಳು ಪರಿಶೀಲಿಸಬಾರದೆಂದು ಗಾಂಧಿಗಳು ಬಯಸುತ್ತಿದ್ದಾರೆ. ತನಿಖೆಯಿಂದ ಪಾರಾಗಲು ಸೋನಿಯಾ–ರಾಹುಲ್ ಗಾಂಧಿಯವರು ಕಳೆದ 9 ವರ್ಷದಿಂದ ಜಾಮೀನಿನ ಮೇಲೆ ಓಡಾಡುತ್ತಿದ್ದಾರೆ.

ಗಾಂಧಿ ಪರಿವಾರಕ್ಕೆ ಸಂಬಂಧಿಸಿದಂತೆ ಕಾಂಗೆಸ್ಸಿಗರು, ಜೀ ಹುಜೂರ್ ಮಾನಸಿಕತೆಯಿಂದ ಬಳಲುತ್ತಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸುವ ಬಗ್ಗೆ ದಿ.10–09–2016ರಲ್ಲಿ ನ್ಯಾಯಾಲಯದ ನಿರ್ಣಯ ಬರುವುದಿತ್ತು. ಆದರೆ ಕಾಂಗ್ರೆಸ್ ಅದೇ ದಿನ ದೇಶವ್ಯಾಪಿ ಬಂದ್‌ಗೆ ಕರೆ ನೀಡಿತ್ತು. 2022ರಲ್ಲಿ ಸೋನಿಯಾ, ರಾಹುಲ್‌ರಿಗೆ ವಿಚಾರಣೆಗೆ ಹಾಜರಾಗುವಂತೆ ಇಡಿ ನೋಟಿಸ್ ಜಾರಿಗೊಳಿಸಿದಾಗಲೂ ಇದು ರಾಜಕೀಯ ಸೇಡಿನ ಕ್ರಮ ಎಂದು ಕಾಂಗ್ರೆಸ್ಸಿಗರು ಟೀಕಿಸಿದ್ದರು. ದೇಶಾದ್ಯಂತ ಇರುವ ಇಡಿ ಕಚೇರಿಗಳ ಎದುರು ಪ್ರದರ್ಶನಗಳನ್ನು ನಡೆಸಿದ್ದರು. ಪ್ರಾಯಶಃ ಇದೊಂದು ರೀತಿಯಲ್ಲಿ ಸತ್ಯವನ್ನು ಮುಚ್ಚಿ ಹಾಕಲು ಮಾಡಿದ ಆಗ್ರಹವಾಗಿತ್ತು.

ಪ್ರಕರಣದಲ್ಲಿ ವಂಚನೆಯ ಪ್ರಮಾಣ

ಇದು ಎರಡು ಸಾವಿರ ಕೋಟಿ ವಂಚನೆಯ ಪ್ರಕರಣ ಎಂದು ಹೇಳಲಾಗುತ್ತದೆ. ಲಾಭರಹಿತ ಕಂಪನಿಯೊಂದರ ಮೂಲಕ ಗಾಂಧಿ ಪರಿವಾರವು ಕೋಟ್ಯಾಂತರ ರೂ. ಬೆಲೆಬಾಳುವ ಆಸ್ತಿಗಳನ್ನು ಲಪಟಾಯಿಸಿದ್ದಾರೆಂಬುದು ಆರೋಪ. ಸಾಮಾನ್ಯ ರೀತಿಯಲ್ಲಾದರೆ ಈ ಪ್ರಕರಣವನ್ನು ಈ ರೀತಿ ವ್ಯಾಖ್ಯಾನಿಸಬಹುದು; ಓರ್ವ ವ್ಯಕ್ತಿ ಇನ್ನೊಬ್ಬನಿಗೆ ಜುಜುಬಿ ಮೊತ್ತ ನೀಡಿ ಅವನ ಕೋಟ್ಯಾಂತರ ರೂ. ಮೌಲ್ಯದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಂತಿದೆ. ಕಾಂಗ್ರೆಸ್‌ನ ಉನ್ನತ ನಾಯಕತ್ವ ಯಾವತ್ತೂ ಅಲ್ಪ ಮೊತ್ತದ ಹಗರಣ ನಡೆಸಿಲ್ಲ ಎಂಬ ಅಭಿಪ್ರಾಯವಿದೆ. ಜನಸಾಮಾನ್ಯರ ಊಹೆಗೂ ನಿಲುಕದ, ನಂಬಲಾಗದ ಮೊತ್ತದ ಹಗರಣಗಳು ಕಾಂಗ್ರೆಸ್ ಕಾಲದಲ್ಲೇ ನಡೆದಿದ್ದವು. ನ್ಯಾಷನಲ್ ಹೆರಾಲ್ಡ್ (ಎನ್‌ಹೆಚ್) ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಗಾಂಧಿಗಳ ಮೇಲಿನ ಆರೋಪ ಮೇಲ್ನೋಟಕ್ಕೆ ಸಾಬೀತಾಗಿದೆಯೆಂದು ಇಡಿಯು ದಿಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಇದರಲ್ಲಿ ನಕಲಿ ಕಂಪನಿಗಳಿವೆ, ಮೊತ್ತಗಳಲ್ಲಿ ಮೋಸವಿದೆ ಹಾಗೂ ಎಲ್ಲ ರೀತಿಯ ಕಾನೂನು ನಿಯಮಗಳ ಉಲ್ಲಂಘನೆ, ದುರ್ಬಳಕೆಯಾಗಿದೆ ಎಂಬ ಆರೋಪಗಳಿವೆ.

ಎನ್‌ಹೆಚ್ ಹಗರಣ ಹೇಗಾಯಿತು?

ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂರವರು 1938ರಲ್ಲಿ ಎ.ಜೆ.ಎಲ್. ಹೆಸರಿನ ಕಂಪನಿ ರಚಿಸಿದರು. ಈ ಕಂಪನಿಯಲ್ಲಿ ಆ ಸಂದರ್ಭದಲ್ಲಿ ಕಾಂಗ್ರೆಸ್‌ನ ಅನೇಕ ದಿಗ್ಗಜ ನಾಯಕರನ್ನು ಸೇರಿಸಿಕೊಳ್ಳಲಾಯಿತು. ಕಂಪನಿಯು ಮೂರು ಪತ್ರಿಕೆಗಳನ್ನು ಪ್ರಕಟಿಸಿತು. ಹಿಂದಿಯಲ್ಲಿ **'ನವಜೀವನ'**, ಉರ್ದುನಲ್ಲಿ **'ಕ್ವಾಮಿ ಆವಾಜ್'** ಹಾಗೂ ಆಂಗ್ಲ ಭಾಷೆಯಲ್ಲಿ **'ನ್ಯಾಷನಲ್ ಹೆರಾಲ್ಡ್'** ಅನೇಕರು ಕಂಪನಿಯಲ್ಲಿ ಹೂಡಿಕೆ ಮಾಡಿ ಪಾಲುದಾರರಾದರು. ಸ್ವಾತಂತ್ರ್ಯಾ ನಂತರ ಕಾಂಗ್ರೆಸ್‌ಗೆ ಜನರಿಂದ ದೊರೆತ ದೇಣಿಗೆಯಿಂದ ಕಂಪನಿ ಮುಂದುವರೆಸಲಾಯಿತು. ಕಂಪನಿಯಲ್ಲಿ ಐದು ಸಾವಿರ ಸ್ವಾತಂತ್ರ್ಯ ಹೋರಾಟಗಾರರನ್ನು ಷೇರುದಾರರಾಗಿ ಮಾಡಲಾಯಿತು. ಆರಂಭಿಕ ದಶಕಗಳಲ್ಲಿ ಸರಕಾರಿ ನಿವೇಶನಗಳನ್ನು ಉಡುಗೊರೆಯಾಗಿ (ಗಿಫ್ಟ್) ಕಂಪನಿಗೆ ನೀಡಲಾಯಿತು. ಪ್ರಾಯಶಃ ದೇಶದಲ್ಲಿ ಸರಕಾರಗಳು ಯಾವುದೇ ಪತ್ರಿಕೆಗಳಿಗೆ ಈ ರೀತಿ ದೇಶದ ಪ್ರಮುಖ ನಗರಗಳ ಪ್ರೈಮ್ ಪ್ರದೇಶಗಳಲ್ಲಿನ ಸರಕಾರಿ ನಿವೇಶನಗಳನ್ನು ಉಡುಗೊರೆಯಾಗಿ ನೀಡಿದ ನಿದರ್ಶನಗಳಿಲ್ಲ. ಕಾಲಕ್ರಮೇಣ ಈ ಪತ್ರಿಕಾ ಕಂಪನಿಯನ್ನು ಸಾವಿರಾರು ಕೋಟಿ ರೂ.ನ ರಿಯಲ್ ಎಸ್ಟೇಟ್ ಕಂಪನಿಯಾಗಿ ಪರಿವರ್ತಿಸಲಾಯಿತು. ಹಾಗೂ ಚಿಲ್ಲರೆ ಕಾಸಿನ ಬೆಲೆಗೆ ಸೋನಿಯಾ–ರಾಹುಲ್‌ರಿಗೆ ನೀಡಲಾಯಿತು.



> 2002ರ ಗುಜರಾತ್ ಗಲಭೆಗಳಿಗೆ ಸಂಬಂಧಪಟ್ಟಂತೆ ಆಗ ಮುಖ್ಯಮಂತ್ರಿಯಾಗಿದ್ದ ಪ್ರಧಾನಿ ಮೋದಿಯವರನ್ನು ತನಿಖಾ ಸಂಸ್ಥೆಗಳು ವಿಚಾರಣೆಗೆ ಕರೆದಾಗಲೆಲ್ಲಾ ಸಾಮಾನ್ಯ ನಾಗರಿಕರಂತೆ ಅವರು ತನಿಖೆಗೆ ಹಾಜರಾಗುತ್ತಿದ್ದರು. ತನಿಖಾ ಸಂಸ್ಥೆಗಳ ವಿರುದ್ಧ ಟೀಕೆಗಳನ್ನಾಗಲಿ, ಅಪಶಬ್ದಗಳನ್ನಾಗಲಿ ಬಳಸದೇ ಪ್ರಬುದ್ಧತೆ ಮರೆದಿದ್ದರು. ಕಾಂಗ್ರೆಸಿಗರು, ಗಾಂಧಿ ಪರಿವಾರದವರು ತಮ್ಮನ್ನು ಈ ನೆಲದ ಕಾನೂನುಗಳು ಪ್ರಶ್ನಿಸುವಂತಿಲ್ಲ. ತನಿಖಾ ಸಂಸ್ಥೆಗಳು ವಿಚಾರಣೆಗೆ ಒಳಪಡಿಸುವಂತಿಲ್ಲ ಎಂಬ ದರ್ಪದ ಮಾನಸಿಕತೆಯಿಂದ ಹೊರಬಂದು ಪ್ರಧಾನಿ ಮೋದಿಯವರಂತೆ ತನಿಖೆಗೆ ಸಹಕರಿಸಬೇಕಾಗಿದೆ.

ಪತ್ರಿಕೆಯ ಹಿಂದಿದ್ದ ಕಪಟ ಕಾರ್ಯಸೂಚಿ

ನೆಹರೂರವರು ಈ ಪತ್ರಿಕೆಯನ್ನು ಪಕ್ಷದಲ್ಲಿ ತಮ್ಮ ವಿರುದ್ಧ ಧ್ವನಿ ಎತ್ತುವವರನ್ನು ಹತ್ತಿಕ್ಕಲು ಹಾಗೂ ತಮ್ಮ ವೈಯಕ್ತಿಕ ವರ್ಚಸ್ಸನ್ನು ವೃದ್ಧಿಸಲು ಧಾರಾಳವಾಗಿ ಬಳಸಿದರು. ನೆಹರೂರವರು ಪರೋಕ್ಷವಾಗಿ ಪತ್ರಿಕೆಯ ಸಂಪಾದಕರಾಗಿದ್ದರು ಮತ್ತು ಪ್ರಧಾನಿಯಾಗುವವರೆಗೂ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದರು. ನೆಹರು ನಂತರ ಇಂದಿರಾಜಿಯವರು ಎನ್‌ಹೆಚ್‌ನ ಮುಖ್ಯಸ್ಥೆಯಾದರು. ಈ ಪತ್ರಿಕೆ ರಾಷ್ಟ್ರಹಿತಕ್ಕೆ ಆದ್ಯತೆ ನೀಡುವುದಾಗಿ ಅವರು ಹೇಳುತ್ತಿದ್ದರು. ಆದರೆ ಕಾಂಗ್ರೆಸ್–ವಾಮ ಪಂಥೀಯರು ಸೇರಿ ಈ ಪತ್ರಿಕೆಯಲ್ಲಿ ದೇಶದ ಹಿತಕ್ಕೆ ವಿರುದ್ಧವಾದುದನ್ನೇ ಪ್ರಕಟಿಸುತ್ತಿದ್ದರು. ಪರಿಣಾಮ ಸ್ವರೂಪ ಅರವತ್ತರ ದಶಕದಲ್ಲೇ ಪತ್ರಿಕೆಯ ಓದುಗರ ಸಂಖ್ಯೆಯಲ್ಲಿ ಭಾರೀ ಇಳಿಮುಖವಾಗಿತ್ತು. 2008ರಲ್ಲಿ ಪತ್ರಿಕೆಯನ್ನು ಸ್ಥಗಿತಗೊಳಿಸಿ ಕೇವಲ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ ನಿರ್ಣಯಿಸಲಾಯಿತು. ನಂತರ ಎ.ಜೆ ರಿಯಲ್ ಎಸ್ಟೇಟ್ ಕಂಪನಿಯಾಯಿತು. ದೇಶದ ಪ್ರಮುಖ ನಗರಗಳಲ್ಲಿ ಪತ್ರಿಕೆಗಾಗಿ ಸರಕಾರಗಳು ಉಡುಗೊರೆಯಾಗಿ ನೀಡಿದ ಸರ್ಕಾರಿ ನಿವೇಶನಗಳಲ್ಲಿ ಶಾಪಿಂಗ್ ಮಾಲ್‌ಗಳು, ಗಗನ ಚುಂಬಿ ಕಟ್ಟಡಗಳನ್ನು ನಿರ್ಮಿಸಿ ಕಂಪನಿಯು ರಿಯಲ್ ಎಸ್ಟೇಟ್ ವ್ಯವಹಾರ ಆರಂಭಿಸಿತು. ಇಂತಹ ಕಟ್ಟಡಗಳಲ್ಲಿ ಅನೇಕ ಕಂಪನಿಗಳ ಕಚೇರಿಗಳಿಗೆ ಲಕ್ಷಾಂತರ ರೂ. ಬಾಡಿಗೆ ನಿಗದಿಪಡಿಸಲಾಗುತ್ತಿತ್ತು. ಆದರೂ ಕಂಪನಿ ನಷ್ಟದಲ್ಲಿದ್ದು, 90 ಕೋಟಿ ರೂ. ಸಾಲವಿದೆಯೆಂದು ತೋರಿಸಲಾಗುತ್ತಿತ್ತು. ಬೆಲೆಬಾಳುವ ಆಸ್ತಿಗಳ ಒಂದು ಚಿಕ್ಕ ಭಾಗವನ್ನು ಮಾರಾಟ ಮಾಡಿದ್ದೂ ಸಾಲ ತೀರಿಸಬಹುದಿತ್ತು. ಆದರೆ ಕಂಪನಿ ಸಾಲ ಉಳಿಸಿಕೊಂಡಿರುವುದರ ಹಿಂದೆ ಅವರ ದೂ(ದು)ರಾಲೋಚನೆ ಇರುವುದು ಸ್ಪಷ್ಟವಾಗಿತ್ತು.

ಯುಪಿಎ ಸರಕಾರದ ಎರಡನೇ ಅವಧಿಯಲ್ಲಿ ಸೋನಿಯಾ–ರಾಹುಲ್‌ರು ಅಧಿಕಾರದ ಉತ್ತುಂಗದಲ್ಲಿದ್ದರು. ಆಗ ಎ.ಜೆ.ಎಲ್ ಅನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆ ರೂಪಿಸಿದರು. ದಿ. 23.11.2010 ರಂದು ಐದು ಲಕ್ಷ ರೂ. ಬಂಡವಾಳದೊಂದಿಗೆ ಯಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನ ಕಂಪನಿ ಆರಂಭಿಸಲಾಯಿತು. ಇದರಲ್ಲಿ ಶೇ.7ರಷ್ಟು ಪಾಲುಗಳನ್ನು ಸೋನಿಯಾ–ರಾಹುಲ್ ಖರೀದಿಸಿದರೆ, ಗಾಂಧಿ ಪರಿವಾರಕ್ಕೆ ಅತ್ಯಾಪ್ತರೆನಿಸಿದ ಮೋತಿಲಾಲ ವೋರಾ ಹಾಗೂ ಆಸ್ಕರ್ ಫರ್ನಾಂಡೀಸ್ ತಲಾ ಶೇ.12 ಪಾಲು ಬಂಡವಾಳ ಹೊಂದಿದ್ದರು. ಹೂಡಿಕೆ ಪ್ರಮಾಣ ಗಮನಿಸಿದರೆ ಇದು ಶಾಹಿ ಪರಿವಾರದ ಖಾಸಗಿ ಕಂಪನಿಯಾಗಿತ್ತು. ಮೂರು ತಿಂಗಳ ನಂತರ ದಿ. 26.02.2011ರಲ್ಲಿ ಸಂಭವಿಸಿದ ಅದ್ಭುತ ವ್ಯವಹಾರದಲ್ಲಿ ಕಾಂಗ್ರೆಸ್ ಪಕ್ಷವು ಹೊಸ ಹೊಸ ಕಂಪನಿಗೆ 90 ಕೋಟಿ ರೂ. ಸಾಲ ನೀಡಿತು. ರಾಜಕೀಯ ಪಕ್ಷವೊಂದು ಖಾಸಗಿ ಕಂಪನಿಗೆ ಬಡ್ಡಿರಹಿತ ಸಾಲ ನೀಡಿದ್ದು, ಊಹೆಗೂ ನಿಲುಕದ ಸಂಗತಿಯಾಗಿತ್ತು. ಬಳಿಕ ಯಂಗ್ ಇಂಡಿಯಾ ಲಿಮಿಟೆಡ್ ಕಂಪನಿಯು, ಎಜೆಎಲ್ ಕಂಪನಿಯ ಸುಮಾರು 90 ಕೋಟಿ ರೂ. ನಷ್ಟ ಸಾಲವನ್ನು ಪಾವತಿಸಿತು. ಈ ರೀತಿ ಪ್ಲಾನ್ ಮಾಡಿ ಎರಡು ಸಾವಿರ ಕೋಟಿ ರೂ. ಆಸ್ತಿ ಹೊಂದಿರುವ ಎಜೆಎಲ್ ಕಂಪನಿಯನ್ನು ಸ್ವಾಧೀನಕ್ಕೆ ಪಡೆಯುತ್ತದೆ. ತದನಂತರ ಯಂಗ್ ಇಂಡಿಯಾ ಕಂಪನಿಯು ಪಡೆದ ಸಾಲದಲ್ಲಿ ರೂ.50 ಲಕ್ಷವನ್ನು ಕಾಂಗ್ರೆಸ್ ಪಕ್ಷಕ್ಕೆ ಮರು ಪಾವತಿಸುತ್ತದೆ. ಕಾಂಗ್ರೆಸ್ ಪಕ್ಷವು, ತಾಯಿ–ಮಗ ಕಾಂಗ್ರೆಸ್‌ಗೆ, ದೇಶಕ್ಕೆ ಮಾಡಿದ ಸೇವೆಗಾಗಿ, ತ್ಯಾಗಕ್ಕಾಗಿ ಬಾಕಿ ಉಳಿದ ರೂ.89.50 ಕೋಟಿ ಸಾಲವನ್ನು ಮನ್ನಾ ಮಾಡುತ್ತದೆ. ಮೇಲ್ನೋಟಕ್ಕೆ ಎಜೆಎಲ್ ಆಸ್ತಿಯನ್ನು ಪಡೆಯಲು ದುರುದ್ದೇಶದಿಂದಲೇ ಸೋನಿಯಾ–ರಾಹುಲ್ ಒಡೆತನದ ಯಂಗ್ ಇಂಡಿಯಾ ಕಂಪನಿಯನ್ನು ಹುಟ್ಟು ಹಾಕಿದಂತೆ ಕಂಡು ಬರುತ್ತದೆ. ಹೊಸ ಕಂಪನಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು ಸಾಲ ಮನ್ನಾ ಮಾಡಿತು. ವಿಶೇಷವೆಂದರೆ ಎಜೆಎಲ್‌ನ ಸಾವಿರಾರು ಕೋಟಿ ರೂ. ಬೆಲೆಬಾಳುವ ಆಸ್ತಿಯನ್ನು ಲಪಟಾಯಿಸಲು ಸೋನಿಯಾ ಕುಟುಂಬವು ಸ್ವಂತ ಹಣಕ್ಕೆ ಬದಲಾಗಿ ಪಕ್ಷದ ಹಣವನ್ನೇ ಬಳಸಿಕೊಂಡದ್ದು ಎಷ್ಟು ಸರಿ? 2010ರವರೆಗೆ ಎಜೆಎಲ್‌ನಲ್ಲಿ 1057 ಜನರು ಷೇರುಗಳನ್ನು ಹೊಂದಿದ್ದರು. ಕಂಪನಿಯು ನಷ್ಟದಲ್ಲಿದ್ದ ಕಾರಣ 2011ರಲ್ಲಿ ಅದರ ಎಲ್ಲ ಆಸ್ತಿ, ಸಾಲ, ಷೇರುಗಳನ್ನು ಯಂಗ್ ಇಂಡಿಯಾ ಕಂಪನಿಗೆ ವರ್ಗಾಯಿಸಲಾಯಿತು.

ಈ ರೀತಿ ಯಂಗ್ ಇಂಡಿಯಾ ಕಂಪನಿಯು ಎಜೆಎಲ್‌ನ ಆಸ್ತಿಗಳನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದೆಯೆಂದು ಇಡಿ ಆರೋಪಿಸಿದೆ. ಇಡಿ ಪ್ರಕಾರ ಎಜೆಎಲ್–ಯಂಗ್ ಇಂಡಿಯಾ ನೆಟ್‌ವರ್ಕ್‌ಅನ್ನು ನಕಲಿ ದೇಣಿಗೆಗಳ ಮೂಲಕ 18 ಕೋಟಿ ರೂ., ಮುಂಗಡ ಬಾಡಿಗೆ 38 ಕೋಟಿ ರೂ. ಮತ್ತು ಜಾಹೀರಾತುಗಳ ಮೂಲಕ 29 ಕೋಟಿ ರೂ.ಗಳಷ್ಟು ಅಕ್ರಮವಾಗಿ ಹಣ ಗಳಿಸಲು ಬಳಸಲಾಗಿದೆ ಎಂದು ಆರೋಪ ಮಾಡಲಾಗಿದೆ.

ಇಡಿ ಪ್ರಕಾರ ಎಜೆಎಲ್ ಆಸ್ತಿಗಳಿಗೆ ಸಂಬಂಧಿತ 988 ಕೋಟಿ ರೂ. ಅಕ್ರಮ ಆದಾಯವೆಂದು ಬಹಿರಂಗವಾದ ನಂತರ ಆಸ್ತಿ ಮುಟ್ಟುಗೋಲು ಹಾಕಿದೆ. ಈ ಪ್ರಕ್ರಿಯೆ ನಂತರ ದಿ. 15.04.2025 ರಂದು ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಸಂಬಂಧ ಸೋನಿಯಾ–ರಾಹುಲ್ ಗಾಂಧಿ ಹಾಗೂ ಸ್ಯಾಮ್ ಪಿತ್ರೋಡ, ಸುಮನ್ ದುಬೆ ವಿರುದ್ಧ ಇಡಿಯು ಆರೋಪ ಪಟ್ಟಿ ಸಲ್ಲಿಸಿದೆ.

ಆರೋಪ ಪಟ್ಟಿ ಸಲ್ಲಿಕೆಯಾಗುತ್ತಿದ್ದಂತೆ ರಾಹುಲ್ ಗಾಂಧಿ ಎಂದಿನ ಶೈಲಿನಲ್ಲಿ 'ಮೋದಿಯವರ ತನಿಖಾ ಏಜೆನ್ಸಿಗಳ ಕುರಿತಂತೆ ನಮಗೆ ಯಾವ ಹೆದರಿಕೆಯೂ ಇಲ್ಲ' ಎಂದಿದ್ದಾರೆ. ದಿಲ್ಲಿ ರೂಸ್ ಅವೆನ್ಯೂ ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಕೆಯ ನಂತರ ಕಾಂಗ್ರೆಸ್ಸಿಗರು ಆಕ್ರೋಶ ವ್ಯಕ್ತಪಡಿಸಲಾರಂಭಿಸಿದ್ದಾರೆ.

ಪೋಷಕರು ಮಕ್ಕಳಿಗೆ ಮಾದರಿಯಾಗಬೇಕು...!

> ಇತ್ತೀಚೆಗೆ ಹುಬ್ಬಳ್ಳಿಯಲ್ಲಿ 6ನೇ ತರಗತಿ ಓದುತ್ತಿರುವ ಬಾಲಕ 9ನೇ ತರಗತಿಯ ತನ್ನ ಸಹಪಾಠಿಯನ್ನು ಇರಿದು ಕೊಂದಂತಹ ಘಟನೆ ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿತ್ತು. ಹುಬ್ಬಳ್ಳಿಯ ಗುರು ಸಿದ್ದೇಶ್ವರ ನಗರದಲ್ಲಿ ಈ ಘಟನೆ ನಡೆದಿತ್ತು. ಸಾಮಾನ್ಯ ಜನರು ಮಾತ್ರವಲ್ಲ, ಪೊಲೀಸ್ ಇಲಾಖೆಯು ಈ ಘಟನೆ ಬಗ್ಗೆ ಆತಂಕಗೊಂಡಿತ್ತು. ಹುಬ್ಬಳ್ಳಿಯ ಉಪ ಪೊಲೀಸ್ ಆಯುಕ್ತ (ಡಿಸಿಪಿ)ಸಿ.ಆರ್. ರವೀಶ ಅವರು ಈ ಪ್ರಕರಣದ ಬಗ್ಗೆ ಸಾಮಾಜಿಕ ಜಾಲ ತಾಣದಲ್ಲಿ ತಮ್ಮ ದುಗುಡವನ್ನು ಹಂಚಿಕೊಂಡಿದ್ದರು. ಅದನ್ನು ಸಾವಿರಾರು ಜನ ಸಹಮತಿಸಿ ಹಂಚಿಕೊಂಡಿದ್ದಾರೆ. ಮಕ್ಕಳನ್ನು ಬೆಳೆಸುವ ರೀತಿ–ನೀತಿಯ ಬಗ್ಗೆ ರವೀಶ್‌ರವರ ಕಿವಿಮಾತನ್ನು ನಮ್ಮ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ. –ಸಂ.



ಸಿ.ಆರ್. ರವೀಶ

12ನೇ ವರ್ಷದ ವಯಸ್ಸಿನ ಹುಡುಗ, ಮತ್ತೊಂದು 15 ವರ್ಷದ ಹುಡುಗನಿಗೆ ಚಾಕು ಹಾಕುತ್ತಾನೆ ಎಂದರೆ ಇದು ಅತ್ಯಂತ ಆತಂಕ, ಜೊತೆಗೆ ನೋವಿನ ಸಂಗತಿ. ನಾವೆಲ್ಲಾ ಓದುವ ಸಂದರ್ಭದಲ್ಲಿ ನಮಗೆ ಚಾಕು–ಚೂರಿ ಇವೆಲ್ಲಾ ಗೊತ್ತೇ ಇರಲಿಲ್ಲ. ಮನೆಯಲ್ಲಿ ನಮ್ಮ ತಾಯಿ ತರಕಾರಿ ಹಚ್ಚುವುದಕ್ಕೆ ಚಾಕು ತರಲು ಹೇಳಿದರೆ ನಾವು ಅದನ್ನು ತರಲು ಭಯಪಡುತ್ತಿದ್ದೆವು. ಅಂದರೆ, ಆಗೆಲ್ಲಾ ಅಷ್ಟೊಂದು ಪ್ರಜ್ಞಾವಂತಿಕೆಯಿಂದ ಮಕ್ಕಳನ್ನು ಬೆಳೆಸಲಾಗುತ್ತಿತ್ತು.

ಒಂದು ಮಗುವಿನ ಬೆಳವಣಿಗೆಯಲ್ಲಿ ತಂದೆ–ತಾಯಿಯ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಬಸವಣ್ಣನವರು ವಚನದಲ್ಲಿ ಹೇಳುತ್ತಾರೆ:

ಬೆಲ್ಲದ ಕಟ್ಟೆಯ ಕಟ್ಟಿ
ಬೇವಿನ ಬೀಜವ ಬಿತ್ತಿ
ಆಕಳ ಹಾಲನೆರೆದು
ಜೇನು ತುಪ್ಪ ಸುರಿದೊಡೆ
ಕಹಿಯಾಗಬಲ್ಲುದು ಸಿಹಿಯಾಗಬಹುದೆ

ನವ್ಯ ಕಾವ್ಯದಲ್ಲಿ 'ಬೇವು ಬಿತ್ತಿ ಮಾವು ಬೆಳೆವ ತವಕ ಬೇಡ ಮಾನವ' ಎಂದು ಬರೆದಿದ್ದಾರೆ.

ಯಾವುದೇ ಮಗು ಜನಿಸಿದಾಗ ಖಾಲಿ ಗಣಕಯಂತ್ರ (Empty computer)ದ ಹಾಗೆ ಇರುತ್ತದೆ. ಅದರಲ್ಲಿ ಯಾವ ರೀತಿಯ ಪ್ರೋಗ್ರ್ಯಾಮಿಂಗ್ ಮಾಡುತ್ತೇವೆ ಎಂಬುದು ಬಹಳ ಮುಖ್ಯ. ಕಂಪ್ಯೂಟರ್‌ಗೆ ಪ್ರೋಗ್ರಾಮಿಂಗ್ ಮಾಡಿದಂತೆ ಮಕ್ಕಳಿಗೆ ನಾವು ಏನೆಲ್ಲಾ ಕಲಿಸುತ್ತೇವೆಯೋ ಅದರ ಮೇಲೆ ಅವರ ಭವಿಷ್ಯ ನಿರ್ಧಾರವಾಗುತ್ತದೆ. ಖಾಲಿ ಕಂಪ್ಯೂಟರ್ ರೀತಿಯ ಮಕ್ಕಳಿಗೆ ಪ್ರೋಗ್ರ್ಯಾಮಿಂಗ್ ಮಾಡೋರು ಮುಖ್ಯವಾಗಿ ತಂದೆ–ತಾಯಿ. ಅವರ ನಡವಳಿಕೆ, ಅವರು ಬಳಸುವ ಭಾಷೆ, ಮತ್ತೊಬ್ಬರ ಬಗ್ಗೆ ಅವರು ಮಾತನಾಡುವ ರೀತಿ, ಅನ್ಯಾಯದ ಬದುಕು, ಇತರರ ಬಗ್ಗೆ ಕೆಟ್ಟ ಯೋಚನೆ ಮತ್ತೊಬ್ಬರ ವಿಚಾರವಾಗಿ ಹೀಯ್ಯಾಳಿಸಿ ಮಕ್ಕಳ



ಮುಂದೆ ಮಾತನಾಡುವುದು... ಇವೆಲ್ಲಾ ಋಣಾತ್ಮಕ ಚಿಂತನೆಗಳು(negative thinks). ಇವೆಲ್ಲವನ್ನೂ ಬಿಟ್ಟು, ಮಗುವಿನಲ್ಲಿ ಧನಾತ್ಮಕ ವಿಚಾರಗಳಾದ ದಯೆ, ಕರುಣೆ, ಪ್ರೀತಿ, ವಿಶ್ವಾಸ, ಬ್ರಾತೃತ್ವ, ಕ್ಷಮೆ ಇಂತಹ ವಿಚಾರಗಳ ಬಗ್ಗೆ ಮಾತನಾಡುತ್ತಾ ಹೋದರೆ ಆ ಮಗುವಿನಲ್ಲಿ ಅದೇ ಗುಣ ಬರುತ್ತದೆ.

ಹೊಲದಲ್ಲಿ ಬಿತ್ತನೆ ಮಾಡಿದ ನಂತರ ಹೇಗೆ ಕಳೆ ತೆಗೆಯುತ್ತೇವೆಯೋ, ಗಿಡ ಚೆನ್ನಾಗಿ ಬೆಳೆಯಲೆಂದು ಶ್ರಮಿಸುತ್ತೇವೆಯೋ ಅದೇ ರೀತಿ ಮಗುವೂ ಒಂದು ಮೊಳಕೆ ಎಂದು ಭಾವಿಸಬೇಕು. ಆ ಮೊಳಕೆ ಉತ್ತಮ ರೀತಿಯಲ್ಲಿ ಬೆಳೆಯಬೇಕಾದರೆ ಅದರ ಸುತ್ತಮುತ್ತಲಿನ ಕಳೆ ತೆಗೆಯಬೇಕು. ಕಳೆ ಎಂದರೆ ತಾಮಸ ಗುಣಗಳು, ನೀರು–ಗೊಬ್ಬರ ರಜಸ್ಸಿನ ಗುಣಗಳು. ತಾಮಸಿತನವನ್ನು ಬಿಟ್ಟು ರಜಸ್ಸಿನ ಗುಣಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಿದರೆ ಅವರಲ್ಲಿ ಒಳ್ಳೆಯತನ ಬೆಳೆದೇ ಬೆಳೆಯುತ್ತದೆ.

ಡಿವಿಜಿಯವರು ಕಗ್ಗದಲ್ಲಿ ಹೇಳಿದ್ದಾರೆ;

ವನ್ಯ–ಮೃಗಗಳ ನಡುವೆ ಗೋವು ಬಂದೇನಹುದು?।
ಪಣ್ಯ ವೀಧಿಯಲಿ ತಾತ್ತ್ವಿಕಗೇನಹುದು?॥
ಅನ್ಯಾಯದುನ್ಮತ್ತ ಕೋಲಾಹಲದ ಲೋಕ
ಪಣ್ಯವನು ಚಿಂತಿಪುದೆ
– ಮಂಕುತಿಮ್ಮ

ಮಕ್ಕಳ ಮುಂದೆ ನಾವು ಯಾವಾಗಲೂ ಅನ್ಯಾಯದ ವಿಚಾರಗಳನ್ನೇ ವೈಭವೀಕರಿಸಿಕೊಂಡು ಮಾತನಾಡಿದರೆ ಅವರ ಮನಸ್ಸು ಅದರ ಬಗ್ಗೆಯೇ ಆಕರ್ಷಿತವಾಗುತ್ತದೆ. ಯಾವುದೇ ಒಂದು ಮಗುವಿನ ಏಳು–ಬೀಳಿಗೆ ಹೆತ್ತ ತಂದೆ–ತಾಯಿಗಳೇ ಕಾರಣ. ಎಲ್ಲದಕ್ಕೂ ಪೊಲೀಸರತ್ತ ಬೊಟ್ಟು ಮಾಡಿ ತೋರಿಸುತ್ತಾರೆ. ಪೊಲೀಸರು ಏನು ಮಾಡಲು ಸಾಧ್ಯ? ಅವರೂ ಮಕ್ಕಳಿರುವ ಮನುಷ್ಯರೇ. ಪೊಲೀಸರು ಕೆಟ್ಟದಾಗಿ ವರ್ತಿಸಿದರೆ ಅವರ ಮಕ್ಕಳೂ ಕೆಟ್ಟವರಾಗಿ ಬೆಳೆಯುತ್ತಾರೆ. ಅದಕ್ಕೆ ಯಾರೂ ಹೊರತಲ್ಲ. ಏಕೆಂದರೆ ಮನುಷ್ಯ ಸಂಘ ಜೀವಿ.

ಮಕ್ಕಳಲ್ಲಿ ನೈತಿಕತೆ ತುಂಬುವ ವ್ಯವಸ್ಥೆಗಳಾಗಬೇಕು. ಅವನ್ನು ಕೇವಲ ಅಂಕಕ್ಕೋಸ್ಕರ ಓದಿ ಎನ್ನುತ್ತಾರೆ. ಜ್ಞಾನ ಎನ್ನುವುದು ಅಂಕವನ್ನು ಮೀರಿ ನೈತಿಕತೆಯ ಬದುಕನ್ನು ಕಟ್ಟಿಕೊಳ್ಳಲು, ಜೀವನದಲ್ಲಿ ಸೋಲಬಾರದು ಎಂಬ ಛಲ ತುಂಬಲಿಕ್ಕೆ ಇರುವ ಮಾರ್ಗ. ಅಂತಹ ಜ್ಞಾನವನ್ನು ಓದುವುದರ ಮೂಲಕ ಗಳಿಸುತ್ತೇವೆ.

ಆದರೆ, ಇವತ್ತು ಓದು ಬ್ಯುಸಿನೆಸ್ ಆಗಿದೆ. ಅಂಕ ಹೆಚ್ಚು ತೆಗೆದವರು ಬುದ್ಧಿವಂತರು, ನೈತಿಕತೆ ಇಟ್ಟುಕೊಂಡವರು ವ್ಯರ್ಥ ಎನ್ನುವಂತಾಗಿದೆ. ಈ ರೀತಿಯ ವ್ಯವಸ್ಥೆ, ಪರಿಸ್ಥಿತಿಯಲ್ಲಿ ಒಳ್ಳೆಯದನ್ನು ಅಪೇಕ್ಷಿಸಲು ಹೇಗೆ ಸಾಧ್ಯ?.

ನಾವು ಒಲೆಯ ಮೇಲೆ ಪಾತ್ರೆಯಿಟ್ಟು, ನೀರು ಸುರಿದು, ಅಕ್ಕಿ ಹಾಕಿ ಬೆಂಕಿ ಇಟ್ಟರೆ ಅನ್ನ ಆಗುತ್ತದೆಯೇ ಹೊರತು ಇಲ್ಲಿ ಅದು ನಮಗೆ ಪಾಯಸ ಆಗಬೇಕು ಎಂದರೆ ಸಾಧ್ಯವೇ? ತಂದೆ–ತಾಯಿ ಒಳ್ಳೆತನವೆಂಬ ಬೆಲ್ಲ ಹಾಕಿದರೆ ಮಾತ್ರ ಮಕ್ಕಳ ಜೀವನದಲ್ಲಿ ಪಾಯಸ ಬರಲು ಸಾಧ್ಯ. ಇವೆಲ್ಲಾ ವಾಸ್ತವ.

ಯಾವತ್ತಿಗೂ ಬೇವನ್ನು ಬಿತ್ತಿ, ಮಾವನ್ನು ಬೆಳೆಯುವ ಸಾಹಸ ಮಾಡಬಾರದು. ಮಕ್ಕಳಿಗೆ ಕಷ್ಟಗಳನ್ನು ತಿಳಿಸಿಕೊಡಬೇಕು. ಜೀವನದ ಒಂದೊಂದು ಕ್ಷಣಗಳನ್ನೂ ಅರ್ಥ ಮಾಡಿಸಬೇಕು. ಮನುಷ್ಯನ ಜನ್ಮ ಸುಲಭವಾಗಿ ಸಿಗುವಂತದ್ದಲ್ಲ, ಜಗತ್ತಿನ ಪ್ರತಿಯೊಬ್ಬ ಮನುಷ್ಯನೂ ಆ ದೇವರ ಆಶೀರ್ವಾದ ದಿಂದಲೇ ಹುಟ್ಟಿರುವುದು. ಹುಟ್ಟುವಾಗಲೇ ಹತ್ತು ಲಕ್ಷ ಜನರೊಂದಿಗೆ ಹೋರಾಡಿ ಬದುಕುಳಿದವನು ಮನುಷ್ಯ. ಹತ್ತು ಲಕ್ಷ ಸ್ಪರ್ಮ್‌ಗಳಲ್ಲಿ ಒಂದು ಮಾತ್ರ ತಾಯಿ ಅಂಡಾಣುವನ್ನ ಸೇರಿ ಸಂಯೋಗ ಗೊಂಡು ಮಗುವಾಗುವುದು. ಹಾಗಾಗಿ ಜೀವ ಅತ್ಯಮೂಲ್ಯ. ಜೀವನ ಬಹಳ ಪ್ರಮುಖವಾದುದು, ಎಲ್ಲದಕ್ಕೂ ಒಂದು ಅರ್ಥವಿದೆ, ಇಲ್ಲಿ ಯಾವುದೂ ವ್ಯರ್ಥವಲ್ಲ. ಹಾಗಾಗಿ ಮಕ್ಕಳನ್ನು ಬೆಳೆಸುವಾಗ ಪೋಷಕರು ಮಾದರಿಯಾಗಬೇಕು. ಪೋಷಕರನ್ನು ನೋಡಿಯೇ ಮಕ್ಕಳು ಬೆಳೆಯುವಂತಹುದು ಕ್ರಮ. ಹಾಗಾಗಿ ತಂದೆ–ತಾಯಿ ಉತ್ತಮರಾಗಿದ್ದರೆ ಮಕ್ಕಳೂ ಉತ್ತಮರಾಗಿರುತ್ತಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಕ್ಷೆ ಉಲ್ಲಂಘನೆಗೆ ದುಪ್ಪಟ್ಟು ತೆರಿಗೆ ವಸೂಲಿ ನಿಯಮಬಾಹಿರ

ಮಾಜಿ ಮೇಯರ್ ಸಂದೇಶ್‌ಸ್ವಾಮಿ


ಸಂದೇಶ್ ಸ್ವಾಮಿ

ಮೈಸೂರು, ಮೇ 26– ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದವರಿಂದ ದುಪ್ಪಟ್ಟು ತೆರಿಗೆ ವಸೂಲಿ ಮಾಡುತ್ತಿರುವುದು ನಿಯಮಬಾಹಿರ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಹೇಳಿದ್ದಾರೆ.

ವಸತಿ ಹಾಗೂ ವಾಣಿಜ್ಯ ಉದ್ದೇಶಿತ ಕಟ್ಟಡಗಳ ನಿರ್ಮಾಣದ ವೇಳೆ ಮಂಜೂರಾದ ನಕ್ಷೆಯನ್ನು ಉಲ್ಲಂಘಿಸಿದ ಕಟ್ಟಡ ಮಾಲೀಕರಿಗೆ ಮೊದಲ ವರ್ಷ ಮಾತ್ರ ದುಪ್ಪಟ್ಟು ತೆರಿಗೆ ವಿಧಿಸಿ, ನಂತರ ನಿಗದಿತ ತೆರಿಗೆಯನ್ನಷ್ಟೇ ಸಂಗ್ರಹಿಸಬೇಕು. ಆದರೆ ಅಧಿಕಾರಿಗಳು ಪ್ರತಿ ವರ್ಷವೂ ದುಪ್ಪಟ್ಟು ತೆರಿಗೆ ವಿಧಿಸುತ್ತಿರುವುದು ಸರಿಯಾದ ಕ್ರಮವಲ್ಲ. ಅಧಿಕಾರಿಗಳು 1964 ಮತ್ತು 1976ರ ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ, 2024ರ ತಿದ್ದುಪಡಿ ಅಧಿನಿಯಮ ಜಾರಿಗೆ ತಂದಿರುವ ರಾಜ್ಯಪತ್ರವನ್ನು ಗಂಭೀರವಾಗಿ ಪರಿಗಣಿಸಿ, ನಂತರ ಕ್ರಮ ವಹಿಸುವುದು ಸೂಕ್ತ ಎಂದು ಆಗ್ರಹಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯ ಅನೇಕ ಸರ್ಕಾರಿ ಕಟ್ಟಡಗಳಿಗೆ ತೆರಿಗೆ ಪಾವತಿಸುತ್ತಿಲ್ಲ. ಆಯಾಯ ಇಲಾಖೆಗಳಿಂದ ತೆರಿಗೆ ವಸೂಲಿ ಮಾಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ. ಇದನ್ನು ಪಾಲಿಕೆ ಆಯುಕ್ತರು ಗಂಭೀರವಾಗಿ ಪರಿಗಣಿಸಿ, ತೆರಿಗೆ ವಸೂಲಿಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮೈಸೂರು ನಗರದಲ್ಲಿ ಅಂಗಡಿಗಳೂ ಸೇರಿ 2 ಲಕ್ಷಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳಿವೆ. ಆದರೆ ಇವರಲ್ಲಿ 17–18 ಸಾವಿರ ವ್ಯಾಪಾರಸ್ಥರು ಮಾತ್ರ ಟ್ರೇಡ್ ಲೈಸೆನ್ಸ್ ಪಡೆದಿರಬಹುದು. ಅರ್ಜಿ ಸಲ್ಲಿಸಿದವರಿಗೂ ಲೈಸೆನ್ಸ್ ನೀಡಲು ವಿಳಂಬ ಮಾಡಲಾಗುತ್ತಿದೆ. ಎಲ್ಲಾ ವಾಣಿಜ್ಯ ಕೇಂದ್ರಗಳಿಗೂ ಕಟ್ಟುನಿಟ್ಟಾಗಿ ಟ್ರೇಡ್ ಲೈಸೆನ್ಸ್ ನೀಡುವ ಮೂಲಕ ಪಾಲಿಕೆ ಆದಾಯ ಹೆಚ್ಚಿಸಿಕೊಳ್ಳಬಹುದಾಗಿದೆ ಎಂದಿದ್ದಾರೆ.

ಮುಖ್ಯವಾಗಿ ರಸ್ತೆ, ಬೀದಿದೀಪ, ನೀರು, ಒಳಚರಂಡಿ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳನ್ನು ಕಲ್ಪಿಸಿರುವ ಕಂದಾಯ ಬಡಾವಣೆಗಳಿಂದ ತೆರಿಗೆ ವಸೂಲಿ ಮಾಡದಿರುವುದು ಪಾಲಿಕೆಗೆ ನಷ್ಟವಾಗುತ್ತಿದೆ. ರೆವಿನ್ಯೂ ಬಡಾವಣೆಗಳಲ್ಲೂ ಮೊದಲ ವರ್ಷ ದುಪ್ಪಟ್ಟು ತೆರಿಗೆ, ನಂತರದಲ್ಲಿ ನಿಗದಿತ ಕಂದಾಯ ವಸೂಲಿ ಮಾಡಲು 2024ರ ಹೊಸ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಟ್ಟಿನಲ್ಲಿ ನಗರಪಾಲಿಕೆ ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಪ್ರವಾಸಿ ಮಾರ್ಗದರ್ಶಿಗಳ ಸಂಸ್ಥೆ ನೂತನ ಪದಾಧಿಕಾರಿಗಳು


ಇತ್ತೀಚೆಗೆ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮೈಸೂರು ಅನುಮೋದಿತ ಪ್ರವಾಸಿ ಮಾರ್ಗದರ್ಶಿಗಳ ಸಂಸ್ಥೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ಎಸ್.ಜೆ.ಅಶೋಕ್, ಅಧ್ಯಕ್ಷರಾಗಿ ಎನ್.ಸುರೇಶ್, ಉಪಾಧ್ಯಕ್ಷರಾಗಿ ಎಸ್.ರಮೇಶ್, ಕಾರ್ಯದರ್ಶಿಯಾಗಿ ಎಸ್.ರಾಘವೇಂದ್ರ, ಖಜಾಂಚಿಯಾಗಿ ಕಿರಣ್‌ಸಿಂಗ್, ನಿರ್ದೇಶಕರಾಗಿ ಖಂಡೋಜಿರಾವ್, ಎಲ್.ಜೆ.ಶೋಭ, ಕೆ.ಆರ್.ಶಶಿಕಲಾ, ಸುನೀಲ್, ಎಂ.ಶೋಭ ಆಯ್ಕೆಯಾಗಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 26–ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್, ಶ್ರೀಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ ವತಿಯಿಂದ ಜೂ.23ರಂದು ಸಂಜೆ 5 ಗಂಟೆಗೆ ಶ್ರೀ ಕೃಷ್ಣಧಾಮದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಮೈಸೂರು ನಗರದ ಪ್ರತಿಭಾವಂತ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2024–25ನೇ ಸಾಲಿನ ಶೈಕ್ಷಣಿಕ ವರ್ಷದ ರಾಜ್ಯ ಪಠ್ಯಕ್ರಮ ಆಧಾರಿತವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.96ಕ್ಕಿಂತ ಹೆಚ್ಚು ಅಂಕ ಹಾಗೂ ಕೇಂದ್ರ ಪಠ್ಯಕ್ರಮದಲ್ಲಿ ಶೇ.94ಕ್ಕಿಂತಲೂ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ಸಮುದಾಯದ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಜೂ.10ರ ಸಂಜೆ 5 ಗಂಟೆಯೊಳಗೆ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ. 0821–2544004, 9481322340, 8088755735 ಸಂಪರ್ಕಿಸಬಹುದು.

ಬಿಜೆಎಸ್‌ನಿಂದ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ


ಭಾರತೀಯ ಜೈನ್ ಸಂಘಟನೆಯಿಂದ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು.

ಮೈಸೂರು, ಮೇ 26–ಮೈಸೂರಿನ ಭಾರತೀಯ ಜೈನ್ ಸಂಘಟನೆ ವತಿಯಿಂದ ವಿದ್ಯಾದಾನ–ಪುಸ್ತಕ ವಿತರಣೆ ಯೋಜನೆಯಡಿ ಮೈಸೂರಿನ ಶ್ರೀತೇರಾ ಪಂಥ್ ಭವನದಲ್ಲಿ 11ನೇ, 12ನೇ, ಪದವಿ (ಎಲ್ಲಾ ವರ್ಷದ), ಇಂಜಿನಿಯರಿಂಗ್, ವಾಣಿಜ್ಯ ಶಾಸ್ತ್ರ, ಸಿಎ, ಸಿಎಸ್, ಸಿಎಟಿ, ನೀಟ್, ಕಾಮೆಡ್–ಕೆ ಮತ್ತು ಎಂಬಿಬಿಎಸ್ ಸೇರಿದಂತೆ ಸುಮಾರು 200 ವಿದ್ಯಾರ್ಥಿಗಳಿಗೆ 1200 ಪುಸ್ತಕಗಳನ್ನು ವಿತರಿಸಲಾಯಿತು.

ಈ ವೇಳೆ ಕರ್ನಾಟಕ ರಾಜ್ಯ ಕಾರ್ಯದರ್ಶಿ ಪ್ರಕಾಶ್ ಗುಲೇಚಾ, ಪ್ರಾದೇಶಿಕ ಅಧ್ಯಕ್ಷ ಸುಖ್‌ರಾಜ್ ವಿನಾಯಕ, ಅಧ್ಯಕ್ಷ ರಾಜನ್ ಬಾಗ್‌ಮಾರ್, ಉಪಾಧ್ಯಕ್ಷರಾದ ಅಮಿತ್ ಚೌಹಾನ್, ನೇಮಿಚಂದ್ ಬಡೌಲಾ, ಖಜಾಂಚಿ ಮನೋಹರ್ ಸಂಕ್ಲಾ, ಕಾರ್ಯದರ್ಶಿಗಳಾದ ರಾಜೇಂದ್ರ ದೇಸರಾಲ, ಸುನೀಲ್ ಪಟ್ವಾ, ನವರತನ್ ಪಿಟ್ಲಿಯಾ, ಪ್ರಾಜೆಕ್ಟ್ ಕೋ ಆರ್ಡಿನೇಟರ್ಸ್ ಹಿಮಾಂಶು ಅಚ್ಚ, ಕೌಶಿಕ್ ಜೈನ್, ಪುನಿತ್ ಜುಗ್‌ರಾಜ್, ಮಹಿಳಾ ಉಪಾಧ್ಯಕ್ಷೆ ಸಂತೋಷ್ ಸಲೇಚಾ, ಸದಸ್ಯರಾದ ರೇಖಾ ಮುತ್ತಾ, ವಿಕ್ರಂ ಕವಾಡ್, ಧರ್ಮಚಂದ್ರ ಮುತ್ತಾ, ಜಂಬು ಮುತ್ತಾ, ಅಕ್ಷಯ್ ವನಿಗೋಟಾ, ದೀಪಕ್ ದೇರಾಸಾರಿಯಾ, ಪ್ರಥಮ್ ಚೋಪ್ರಾ, ನವೀನ್ ನಹರ್ ಇತರರಿದ್ದರು.

ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ ಹುಟ್ಟುಹಬ್ಬ



ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾ ನೆಲೆ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 83ನೇ ಜನ್ಮದಿನದ ಅಂಗವಾಗಿ ನೋಟ್ ಬುಕ್, ಹಣ್ಣು–ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಜನ್ಮದಿನ ಆಚರಿಸಲಾಯಿತು. ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಶಾರದಾ ನೆಲೆಯ ರಾಘವೇಂದ್ರ, ರೇವತಿ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ಹಿರಿಯ ಕ್ರೀಡಾಪಟು ಮಹದೇವ್, ಬಿಜೆಪಿ ಮುಖಂಡ ಪುರುಷೋತ್ತಮ್, ಕ್ರೀಡಾ ತರಬೇತಿದಾರ ಜಗದೀಶ್, ರಾಜೇಶ್‌ಕುಮಾರ್, ಪ್ರೇಮ, ಸುಹೀತ್, ಅಕ್ಷಯ್ ಪ್ರಿಯದರ್ಶನ್, ಹರ್ಷಿತ್ ನಾಗೇಶ್, ದತ್ತ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಸ್ಯಾಂಡಲ್ ಸೋಪ್‌ಗೆ ತಮನ್ನಾ ರಾಯಭಾರಿ ನೇಮಕ ವಿವಾದ

ಕನ್ನಡಿಗರಾದ ರಚಿತಾ ರಾಮ್, ಐಶ್ವರ್ಯ ರೈ, ರಶ್ಮಿಕಾ ಮಂದಣ್ಣ; ಅಷ್ಟೇ ಏಕೆ ಯದುವೀರರನ್ನೇ ನೇಮಿಸಬಹುದಿತ್ತಲ್ವಾ!

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪ್ರಶ್ನೆ

- ಡಾ.ರಾಜ್‌ಕುಮಾರ್ ಕುಟುಂಬದ ಒಬ್ಬರನ್ನು ಆಯ್ಕೆ ಮಾಡಬೇಕಿತ್ತು
- ತಮನ್ನಾಗೆ 2 ಕೋಟಿ; ಉಳಿದ ಹಣ ಸಿದ್ದರಾಮಯ್ಯ ಪಟಾಲಂ ಜೇಬಿಗಾ!?
- ಸರ್ಕಾರದಲ್ಲಿ ನಡೆಯುತ್ತಿರುವ ಲೂಟಿಗೆ ಇದೊಂದು ನಿದರ್ಶನ


ಹೆಚ್.ವಿಶ್ವನಾಥ್

ಮೈಸೂರು, ಮೇ26(ಬಿಎಲ್‌ಯು)– ಕನ್ನಡಿಗರಾದ ರಚಿತಾ ರಾಮ್, ಐಶ್ವರ್ಯ ರೈ, ರಶ್ಮಿಕಾ ಮಂದಣ್ಣ ಅವರಲ್ಲೇ ಒಬ್ಬರನ್ನು ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯನ್ನಾಗಿ ನೇಮಕ ಮಾಡಬಹುದಿತ್ತಲ್ವಾ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪ್ರಶ್ನಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮಲ್ಲೇ ಖ್ಯಾತ ನಟಿಯರು ಇರುವಾಗ, ಬಾಲಿವುಡ್ ನಟಿ ತಮನ್ನಾ ಭಾಟಿಯಾ ನೇಮಕ ಮಾಡಿದ್ದೇಕೆ? ಎಂದು ಮರು ಪ್ರಶ್ನಿಸಿದ್ದಾರೆ.

ಯಾವುದೇ ರೀತಿಯ ಸಂಭಾವನೆ ಪಡೆಯದೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಕೆಎಂಎಫ್‌ಗೆ ರಾಯಭಾರಿಯಾಗಿದ್ದರು. ಹೀಗಿರುವಾಗ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಸೇರಿದಂತೆ ಡಾ.ರಾಜ್‌ಕುಮಾರ್ ಕುಟುಂಬದ ಯಾರನ್ನಾದರೂ ರಾಯಭಾರಿಯಾಗಿ ನೇಮಕ ಮಾಡಬಹುದಿತ್ತಲ್ವಾ ಎಂದು ವಿಶ್ವನಾಥ್ ಕೇಳಿದರು.

ಒಂದು ಐಟಂ ಸಾಂಗ್‌ಗೆ ತಮನ್ನಾ ಭಾಟಿಯಾಗೆ 1 ಕೋಟಿ ರೂಪಾಯಿ ನೀಡುತ್ತಾರೆ. ಆದರೆ ಸೋಪ್‌ನ ಜಾಹಿರಾತು ರಾಯಭಾರಿಗೆ ಆರೂವರೆ ಕೋಟಿ ರೂಪಾಯಿ ನೀಡುವ ಅಗತ್ಯವೇನಿತ್ತು ಎಂದು ರಾಜ್ಯ ಸರ್ಕಾರಕ್ಕೆ ಪ್ರಶ್ನೆಗಳ ಸುರಿಮಳೆಗೈಯ್ದರು. ತಮನ್ನಾ ಭಾಟಿಯಾಗೆ ಎರಡು ಕೋಟಿ ರೂ. ಕೊಟ್ಟು ಉಳಿದ ಹಣವನ್ನು ಸಿದ್ದರಾಮಯ್ಯ ಅಕ್ಕಪಕ್ಕದಲ್ಲಿರುವವರು ಲಪಟಾಯಿಸುತ್ತಾರೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜನರ ತೆರಿಗೆ ಹಣವನ್ನು ಲೂಟಿ ಮಾಡಿ, ರಾಜ್ಯವನ್ನು ಹೇಗೆ ದಿವಾಳಿ ಮಾಡುತ್ತಿದೆ ಎಂಬುದಕ್ಕೆ ಇದೇ ಸ್ಪಷ್ಟ ನಿದರ್ಶನ ಎಂದು ಹೇಳಿದರು.

ಮೈಸೂರು ರಾಜಮನೆತನದ ಬಗ್ಗೆ ಜನರಿಗೆ ಈಗಲೂ ಅಭಿಮಾನವಿದೆ. ಯದುವಂಶದ ಬಗ್ಗೆ ಜನರು ದೊಡ್ಡ ಗೌರವ ಹೊಂದಿದ್ದಾರೆ. ಹೀಗಿರುವಾಗ ಮೈಸೂರು ಸ್ಯಾಂಡಲ್ ಸೋಪ್‌ಗೆ ಯದುವೀರ್ ಅವರನ್ನೇ ರಾಯಭಾರಿಯಾಗಿ ನೇಮಕ ಮಾಡಬಹುದಿತ್ತಲ್ವಾ ಎಂದು ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಕೇಳಿದರು.

ಬೀಗರ ಊಟಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗ್ತಾರೆ, ಆದರೆ ನೀತಿ ಆಯೋಗದ ಸಭೆಗೆ ಗೈರಾಗ್ತಾರೆ

ಬೀಗರ ಊಟಕ್ಕಾದರೆ ಹೆಲಿಕಾಪ್ಟರ್‌ನಲ್ಲಿ ಹೋಗುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ನಡೆಯುವ ನೀತಿ ಆಯೋಗದ ಸಭೆಗೆ ಗೈರಾಗಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ನೀತಿ ಆಯೋಗ ಅಯೋಗ್ಯ ಆಯೋಗ ಎಂಬ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಹೇಳಿಕೆಗೆ ಕಿಡಿಕಾರಿದ ವಿಶ್ವನಾಥ್, ಇಂತಹ ಅಸಂಬದ್ಧ ಮಾತುಗಳಿಂದ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಎಚ್ಚರಿಸಿದರು. ರಾಜಕೀಯ ಕಾರಣಕ್ಕಾಗಿ ಟೀಕೆ ಮಾಡುವುದು ಸರಿಯಲ್ಲ. ಸಿದ್ದರಾಮಯ್ಯ ಅವರಿಗೆ ನೀತಿ ಆಯೋಗದ ಸಭೆಗಿಂತ ಇಂದಿರಾ ಕ್ಯಾಂಟೀನ್ ಉದ್ಘಾಟನೆ ಮುಖ್ಯವಾಗಿತ್ತಾ ಎಂದು ಪ್ರಶ್ನಿಸಿದರು. ನೀತಿ ಆಯೋಗದ ಸಭೆ, ಜಿಎಸ್‌ಟಿ ಮಂಡಳಿ ಸಭೆ ಸೇರಿದಂತೆ ಕೇಂದ್ರ ಸರ್ಕಾರದ ಯಾವುದೇ ಸಭೆಗೆ ನಾನು ಹೋಗುವುದಿಲ್ಲ ಎನ್ನುತ್ತಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರದ ಇಂತಹ ವರ್ತನೆ ಸರಿಯಲ್ಲ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಬಿಜೆಪಿ ಮುಖಂಡ ದಿನೇಶ್‌ಗೌಡ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

ಪೊಲೀಸ್ ಆಯುಕ್ತರಿಗೆ ಕಾಂಗ್ರೆಸ್ ನಿಯೋಗ ದೂರು


ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಬಿಜೆಪಿ ಮುಖಂಡ ದಿನೇಶ್‌ಗೌಡ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್ ಮುಖಂಡರು ಡಿಸಿಪಿ ಎಂ.ಮುತ್ತುರಾಜ್ ಅವರಿಗೆ ದೂರು ನೀಡಿದರು.

ಮೈಸೂರು,ಮೇ 26(ಎಂಟಿವೈ)– ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಮಾನಹಾನಿ ಮತ್ತು ಅವಹೇಳನಕಾರಿ ಹೇಳಿಕೆ ನೀಡಿರುವ ಬಿಜೆಪಿ ಮುಖಂಡ ದಿನೇಶ್‌ಗೌಡ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ನಗರ ಕಾಂಗ್ರೆಸ್ ವಕ್ತಾರ ರಾಜೇಶ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಡಿಸಿಪಿ ಎಂ.ಮುತ್ತರಾಜ್ ಅವರಿಗೆ ದೂರು ನೀಡಿದ್ದಾರೆ.

ಮೈಸೂರಿನ ನಜ್ಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೋಮವಾರ ಕಾಂಗ್ರೆಸ್ ಮುಖಂಡರ ನಿಯೋಗ ದೂರು ನೀಡಿತು. ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ ಸಾಮಾಜಿಕ ಜಾಲತಾಣಗಳು ಹಾಗೂ ಮಾಧ್ಯಮಗಳ ಮೂಲಕ ಎಂ.ಲಕ್ಷ್ಮಣ್ ಅವರ ವಿರುದ್ಧ ನಿಂದಿಸಿರುವುದಲ್ಲದೆ ಅವರ ಕುಟುಂಬದವರಿಗೆ ಜೀವ ಬೆದರಿಕೆಯನ್ನು ಹಾಕುತ್ತಿದ್ದಾರೆ. ಅತ್ಯಂತ ಅವಹೇಳನಕಾರಿ, ಮಾನಹಾನಿಕರ ಮತ್ತು ಶಾಂತಿಗೆ ಭಂಗ ತರುವಂತಹ ಹೇಳಿಕೆಗಳನ್ನು ನೀಡಿದ್ದಾರೆ. ಇಂತಹ ಕೃತ್ಯಗಳು ಜನಾಂಗೀಯ ಸೌಹಾರ್ದತೆಯನ್ನು ಕದಡುವ ಜೊತೆಗೆ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿವೆ. ಇಂತಹ ವ್ಯಕ್ತಿಗಳಿಂದ ಸಮಾಜದಲ್ಲಿ ಅದರಲ್ಲೂ ರಾಜಕಾರಣದಲ್ಲಿರುವ ವ್ಯಕ್ತಿಗಳಿಗೆ ಸೂಕ್ತ ಭದ್ರತೆ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ದಿನೇಶ್‌ಗೌಡ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಮುಂದಿನ ದಿನಗಳಲ್ಲಿ ಎಂ.ಲಕ್ಷ್ಮಣ್ ಅವರಿಗೆ ತೊಂದರೆಯಾದರೆ ಅದಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಸಹ ಕಾರಣ ಎಂದು ಆರೋಪಿಸಿದರು.

ಮೈಸೂರು ಸ್ಯಾಂಡಲ್ ಸೋಪಿನ ರಾಯಭಾರಿ ಟೀಕೆ ಬಾಲಿಷ


ಕೆ.ವಿ.ಮಲ್ಲೇಶ್

ಮೈಸೂರು: ಮೈಸೂರು ಸ್ಯಾಂಡಲ್ ಸೋಪಿನ ರಾಯಭಾರಿಯನ್ನಾಗಿ ಬಹುಭಾಷಾ ನಟಿ ತಮನ್ನಾ ಭಾಟಿಯಾ ಅವರನ್ನು ಆಯ್ಕೆ ಮಾಡಿರುವ ರಾಜ್ಯ ಸರಕಾರದ ದೂರದೃಷ್ಟಿ ಅರಿಯುವಲ್ಲಿ ವಿಫಲರಾಗಿರುವ ವಿಪಕ್ಷಗಳು ಮತ್ತು ಕೆಲವರು ಸುಖಾಸುಮ್ಮನೆ ಟೀಕೆ ಮಾಡುತ್ತಿರುವುದು ಹಾಸ್ಯಾಸ್ಪದ ವಿಚಾರ ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಪ್ರತಿಕ್ರಿಯಿಸಿದ್ದಾರೆ.

ಮೈಸೂರು ಸ್ಯಾಂಡಲ್ ಸೋಪಿನ ಮಾರಾಟ ವಿಸ್ತರಣೆ ಮತ್ತು ಪ್ರಚಾರಕ್ಕೆ ಸೂಕ್ತ ರಾಯಭಾರಿ ಅಗತ್ಯವಿದೆ. ಅದಕ್ಕೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತನಾಮರ ಆಯ್ಕೆ ಸಹಜವೇ ಆಗಿದೆ. ಅದನ್ನು ಅರಿಯದ ಕೆಲವರು ಬಾಲಿಷವಾಗಿ ಆರೋಪ ಮಾಡುತ್ತಿದ್ದಾರೆ. ಕನ್ನಡದ ಅಸ್ಮಿತೆ, ಕನ್ನಡಿಗರಿಗೆ ಅವಕಾಶ ಎಂಬೆಲ್ಲಾ ಮಾತುಗಳು ಕೇಳಿ ಬರುತ್ತಿವೆ. ಆದರೆ, ಔದ್ಯಮಿಕ ದೃಷ್ಟಿಯಿಂದ ಸರ್ಕಾರದ ನಡೆ ಮೆಚ್ಚುವಂತದ್ದು. ಸಚಿವ ಎಂ.ಬಿ. ಪಾಟೀಲ್ ಹೇಳಿರುವಂತೆ ತಮನ್ನಾ ಅವರಿಗೂ ಮುಂಚೆ ಕನ್ನಡದ ಖ್ಯಾತನಾಮರಾದ ದೀಪಿಕಾ ಪಡುಕೋಣೆ, ರಶ್ಮಿಕಾ ಮಂದಣ್ಣ, ಶ್ರೀಲೀಲಾ, ಪೂಜಾ ಹೆಗ್ಡೆ, ಕಿಯ್ಯಾರ ಅಡ್ವಾಣಿ ಅವರನ್ನು ಸಂಪರ್ಕಿಸಿ ಅವರೆಲ್ಲ ಒಲ್ಲೆ ಎಂದ ಮೇಲೆಯೇ ತಮನ್ನಾ ಅವರನ್ನು ಸಂಪರ್ಕಿಸಿ ರಾಯಭಾರತ್ವ ನೀಡಲಾಗಿದೆ. ಕನ್ನಡ ನಟಿಯರು ಬೇರೆ ಬೇರೆ ಸೌಂದರ್ಯ ವರ್ಧಕಗಳಿಗೆ ರಾಯಭಾರಿ ಆಗಿರುವುದರಿಂದ ಇನ್ನೂ 2 ವರ್ಷ ಸಿಗದಿರುವ ಹಿನ್ನೆಲೆ ತಮನ್ನಾ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸ್ವತಃ ಸಚಿವರೇ ಉತ್ತರಿಸಿದರೂ ಟೀಕಿಸುತ್ತಿರುವುದು ಸರಿಯಲ್ಲ ಎಂದರು.

ಮುನ್ನೆಚ್ಚರಿಕಾ ಕ್ರಮವಾಗಿ ದಲಿತಪರ ಸಂಘಟನೆಗಳ ಪ್ರತಿಭಟನೆಗೆ ಅನುಮತಿ ನಿರಾಕರಣೆ


ವಕೀಲ ಎಸ್.ಅರುಣ್‌ಕುಮಾರ್ ಮತ್ತು ಬಿ.ಆರ್. ಭಾಸ್ಕರ್ ಪ್ರಸಾದ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮನವಿ ನೀಡಲು ಜಿಲ್ಲಾಧಿಕಾರಿಗಳ ಕಚೇರಿಗೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್ ನೇತೃತ್ವದಲ್ಲಿ ಮುಖಂಡರು ಆಗಮಿಸಿದ್ದರು.

ಮೈಸೂರು,ಮೇ 26(ಎಂಟಿವೈ)– ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಪಾದ ಯಾತ್ರೆ ಮತ್ತು ಸಂವಿಧಾನ ಪೀಠಿಕೆ ವಿರುದ್ಧ ಹಗುರವಾಗಿ ಮಾತನಾಡಿದ ಆರೋಪ ಎದುರಿಸುತ್ತಿರುವ ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್.ಭಾಸ್ಕರ್ ಪ್ರಸಾದ್ ಹಾಗೂ ವಕೀಲ ಎಸ್.ಅರುಣ್ ಕುಮಾರ್ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ನಡೆಸಲು ಉದ್ದೇಶಿಸಿದ್ದ ಎರಡು ಪ್ರತ್ಯೇಕ ಪ್ರತಿಭಟನೆಗಳಿಗೂ ಸೋಮವಾರ ಪೊಲೀಸರು ಅವಕಾಶ ನೀಡದೆ ಪರಿಸ್ಥಿತಿ ತಿಳಿಗೊಳಿಸಿದರು.

ಎರಡು ಪ್ರತ್ಯೇಕ ಉದ್ದೇಶದಿಂದ ದಲಿತಪರ ಸಂಘಟನೆಗಳು ಪ್ರತಿಭಟನೆಗೆ ಕರೆ ನೀಡಿದ್ದರಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಸಂಘಟನೆಗಳ ಕಾರ್ಯಕರ್ತರ ನಡುವೆ ಸಂಘರ್ಷ ಉಂಟಾಗುವ ಸಾಧ್ಯತೆ ಇತ್ತು. ಈ ಹಿನ್ನೆಲೆಯಲ್ಲಿ ಸಿದ್ಧಾರ್ಥ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ನೂರಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಅಲ್ಲದೆ, ಮುಂಜಾಗ್ರತಾ ಕ್ರಮವಾಗಿ ಎರಡೂ ಸಂಘಟನೆಗಳು ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗೆ ಅನುಮತಿ ನಿರಾಕರಿಸಲಾಯಿತು.

ಭಾಸ್ಕರ್ ಪ್ರಸಾದ್ ಬಂಧನ, ಬಿಡುಗಡೆ: ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲು ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್.ಭಾಸ್ಕರ್ ಪ್ರಸಾದ್ ತಮ್ಮ ಬೆಂಬಲಿಗರೊಂದಿಗೆ ಬನ್ನೂರು ರಸ್ತೆಯ ಗೌತಮ ಬುದ್ಧ ವೃತ್ತಕ್ಕೆ ಆಗಮಿಸಿದರು. ಕೂಡಲೇ ಪೊಲೀಸರು ಅವರನ್ನು ವಶಕ್ಕೆ ಪಡೆದು ಲಕ್ಷ್ಮೀಪುರಂ ಠಾಣೆಗೆ ಕರೆದೊಯ್ದರು.

ಎಡಿಸಿಗೆ ಮನವಿ: ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್ ನೇತೃತ್ವದಲ್ಲಿ ಮುಖಂಡರು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರಿಗೆ ಮನವಿ ಸಲ್ಲಿಸಿದರು. ಸಂವಿಧಾನ ಪೀಠಿಕೆ ಬಗ್ಗೆ ಲಘುವಾಗಿ ಮಾತನಾಡಿ, ಜಾತಿ ಜಾತಿಗಳ ನಡುವೆ ಕೋಮು ಸೌಹಾರ್ದ ಹಾಳು ಮಾಡುತ್ತಿರುವ ಎಸ್.ಅರುಣ್‌ಕುಮಾರ್ ಮತ್ತು ಬಿ.ಆರ್. ಭಾಸ್ಕರ್ ಪ್ರಸಾದ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅವರಿಬ್ಬರೂ ಸಂವಿಧಾನ ಪೀಠಿಕೆ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಬಲಗೈ ಸಮಾಜದ ನಾಯಕರನ್ನು ಗುರಿಯಾಗಿಸಿಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಜಾತಿ ಸಂಘರ್ಷ ಉಂಟು ಮಾಡುತ್ತಾ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿದ್ದಾರೆ. ಒಳ ಮೀಸಲಾತಿ ಹೋರಾಟದಲ್ಲಿ ಬಲಗೈ ಸಮುದಾಯದ ವಿರುದ್ಧ ದ್ವೇಷ ಹರಡಲಾಗುತ್ತಿದೆ. ಇವರಿಬ್ಬರ ವಿರುದ್ಧ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ವಕೀಲ ಎಂ.ವಿ.ಚಂದ್ರಶೇಖರ್, ಮುಖಂಡರಾದ ಎಚ್.ಎಸ್.ಪುಟ್ಟರಸ, ಎ.ಆರ್.ಕಾಂತರಾಜು, ಡಾ.ಜ್ಞಾನಪ್ರಕಾಶ್, ಕೆ.ಗಂಗಾಧರ್, ಎಂ.ಕುಮಾರಸ್ವಾಮಿ, ಎಂ.ಕೆ.ರೇವಣ್ಣ, ಶಿವಶಂಕರಮೂರ್ತಿ, ಎಸ್.ಪಿ.ಮಹೇಶ, ವಿಷ್ಣುವರ್ಧನ್, ಜಿ.ಮಹದೇವ, ಪುಟ್ಟರಾಜು, ಅನಂತ್‌ನಾಗ್, ಸದಾನಂದ ಎನ್, ನಟರಾಜು, ಪುನೀತ್, ಶಂಕರ್, ಮೋಹನ್ ರಾಜು, ವಕೀಲರಾದ ಶ್ರೀನಿವಾಸ ಪ್ರಸನ್ನ, ಎಸ್.ಪ್ರಮೋದ್, ಜೆ.ಎಂ. ಶಿವಶಂಕರ ಮೂರ್ತಿ, ಎಂ.ಕೆ.ರೇವಣ್ಣ, ಶ್ರೀನಿವಾಸ, ಎಂ.ಪುಟ್ಟರಾಜು, ಮಹೇಶ್, ನಿತಿನ್ ಪುಟ್ಟಸ್ವಾಮಿ ಇನ್ನಿತರರಿದ್ದರು.

ಮಹಿಳೆ ನಾಪತ್ತೆ



ಮೈಸೂರು, ಮೇ 26(ಆರ್‌ಕೆ)– ಮೈಸೂರಿನ ವಿವಿ ಮೊಹಲ್ಲಾ, ಆರನೇ ಮೇನ್, ಆರನೇ ಕ್ರಾಸ್ ನಿವಾಸಿ ಎಸ್. ಕೃಷ್ಣಕುಮಾರ್ ಪತ್ನಿ ಧನಲಕ್ಷ್ಮಿ (55) ಮೇ 23ರ ಬೆಳಗ್ಗೆ 6 ಗಂಟೆಯಿಂದ ನಾಪತ್ತೆಯಾಗಿದ್ದಾರೆ ಎಂದು ಅವರ ಮಗ ಕೆ.ಹೇಮಂತ್‌ಕುಮಾರ್ ವಿವಿ ಪುರಂ ಠಾಣೆಗೆ ದೂರು ನೀಡಿದ್ದಾರೆ.

ಧನಲಕ್ಷ್ಮಿ ಅವರ ಎಡ ತೋಳಿನಲ್ಲಿ ಹಳೇ ಸುಟ್ಟ ಗಾಯದ ಗುರುತಿದೆ. ಸುಳಿವು ಪತ್ತೆಯಾದಲ್ಲಿ ವಿವಿ ಪುರಂ ಠಾಣೆ (0821–2418314), ನಗರ ಪೊಲೀಸ್ ಕಂಟ್ರೋಲ್ ರೂಂ (0821–2418339), ಮೊಬೈಲ್ ಸಂಖ್ಯೆ: 9606750088, 9663662773, 998095 6746ಗಳಿಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮೇ 26– ಮೈಸೂರಿನ ಲಕ್ಷ್ಮಿಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 29ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.

ಮಹಾರಾಣಿ ವಾಣಿಜ್ಯ ಕಾಲೇಜಲ್ಲಿ ಇಂದಿರಾ ಕ್ಯಾಂಟೀನ್ ಆರಂಭ

- ವಿಧ್ಯುಕ್ತವಾಗಿ ಉದ್ಘಾಟಿಸಿದ ಶಾಸಕ ಕೆ.ಹರೀಶ್‌ಗೌಡ
- ವಿದ್ಯಾರ್ಥಿನಿಯರೊಂದಿಗೆ ಉಪಾಹಾರ ಸೇವನೆ


ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿ ನೂತನವಾಗಿ ಸ್ಥಾಪಿಸಿರುವ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿದ ಶಾಸಕ ಕೆ.ಹರೀಶ್ ಗೌಡರು, ವಿದ್ಯಾರ್ಥಿನಿಯರೊಂದಿಗೆ ಉಪಾಹಾರ ಸೇವಿಸಿದರು.

ಮೈಸೂರು, ಮೇ 26(ಎಂಟಿವೈ)– ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಇಂದಿರಾ ಕ್ಯಾಂಟೀನ್‌ಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು. ಅಲ್ಲದೆ ವಿದ್ಯಾರ್ಥಿನಿಯರೊಂದಿಗೆ ಉಪಾಹಾರ ಸೇವಿಸಿದರು.

ಮೈಸೂರು ಜಿಲ್ಲೆಯಲ್ಲಿ ಇತ್ತೀಚೆಗೆ ಮತ್ತೆ 9 ಇಂದಿರಾ ಕ್ಯಾಂಟೀನ್ ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಪಡುವಾರಹಳ್ಳಿ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿ ಆರಂಭಿಸಿರುವ ಇಂದಿರಾ ಕ್ಯಾಂಟೀನ್ ಒಂದಾಗಿದೆ. ಇಂದು ಬೆಳಗ್ಗೆ ಶಾಸಕ ಕೆ.ಹರೀಶ್‌ಗೌಡರು ವಿಧ್ಯುಕ್ತವಾಗಿ ಉದ್ಘಾಟಿಸಿ, ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದರು.

ಬಳಿಕ ಶಾಸಕ ಕೆ.ಹರೀಶ್‌ಗೌಡರು ಮಾತನಾಡಿ, ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ವೇಳೆ ಶ್ರಮಿಕ ವರ್ಗದವರಿಗೆ ಕಡಿಮೆ ದರದಲ್ಲಿ ತಿಂಡಿ, ಊಟ ಸಿಗಬೇಕು ಎಂಬ ಮಹತ್ತರ ಉದ್ದೇಶದಿಂದ ಜನಸಂದಣಿಯ ಪ್ರದೇಶಗಳಲ್ಲಿ ಇಂದಿರಾ ಕ್ಯಾಂಟೀನ್ ಯೋಜನೆ ಜಾರಿಗೊಳಿಸಿದರು. ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲೂ ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಿದರು. ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವ ಅವರು ಮೈಸೂರು ಜಿಲ್ಲೆಯಲ್ಲಿ ಮತ್ತೆ 9 ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಿ ಎರಡು ದಿನದ ಹಿಂದಷ್ಟೇ ಸಾಂಕೇತಿಕವಾಗಿ ಉದ್ಘಾಟಿಸಿದರು. ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರ ಬಹು ದಿನದ ಬೇಡಿಕೆ ಈಡೇರಿಸಿದಂತಾಗಿದೆ. ವಿದ್ಯಾರ್ಥಿನಿಯರಿಗಾಗಿ ಇಂದಿರಾ ಕ್ಯಾಂಟೀನ್ ಸ್ಥಾಪನೆಯ ಬಗ್ಗೆ ಕಾಲೇಜಿನ ಅಧ್ಯಾಪಕರು, ಮುಖಂಡರು, ವಿದ್ಯಾರ್ಥಿನಿಯರು ನನಗೆ ಮನವಿ ಸಲ್ಲಿಸಿದ್ದರು. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಮಹಾರಾಣಿ ಕಾಲೇಜಿನ ಆವರಣದಲ್ಲಿ ಇಂದಿರಾ ಕ್ಯಾಂಟೀನ್ ಮಂಜೂರು ಮಾಡಿಕೊಟ್ಟಿದ್ದಾರೆ ಎಂದರು.

ಇದರಿಂದ ಕಾಲೇಜಿನ ವಿದ್ಯಾರ್ಥಿನಿಯರು ಬಹಳ ಖುಷಿಯಾಗಿದ್ದಾರೆ. ಕಡಿಮೆ ವೆಚ್ಚದಲ್ಲಿ ತಿಂಡಿ, ಊಟ ಸಿಗುತ್ತಿರುವುದರಿಂದ ಹರ್ಷ ವ್ಯಕ್ತಪಡಿಸಿದರು.

ಗುಣಮಟ್ಟದ ಆಹಾರ ಪೂರೈಸುವಂತೆ ಹಾಗೂ ಸ್ವಚ್ಛತೆಯನ್ನು ಕಾಪಾಡುವಂತೆ ಸೂಚಿಸಲಾಗಿದೆ. ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಈ ಬಗ್ಗೆ ಆಗಾಗ್ಗೆ ಗಮನ ಹರಿಸುವಂತೆ ತಾಕೀತು ಮಾಡಿದ್ದೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿನಿಯರು, ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಮಾವು, ಹಲಸು ಮೇಳ



ಮಾವು ಮತ್ತು ಹಲಸು ಮೇಳದಲ್ಲಿ ವಿವಿಧ ಮಾವು ವೀಕ್ಷಿಸುತ್ತಿರುವ ಗಣ್ಯರು.

ಮಂಡ್ಯ, ಮೇ 26– ಜಿಲ್ಲೆಯಲ್ಲಿ ಸುಮಾರು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯನ್ನು ರೈತರು ಬೆಳೆಯುತ್ತಿದ್ದು, ಮಾರುಕಟ್ಟೆ ಕಲ್ಪಿಸಲು ಮಾವು ಮತ್ತು ಹಲಸಿನ ಮೇಳವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಹೇಳಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ "ಮಾವು ಮತ್ತು ಹಲಸು ಮೇಳ ಮತ್ತು ಸಸ್ಯ ಸಂತೆ ಪ್ರದರ್ಶನ ಮತ್ತು ಮಾರಾಟ ಮೇಳ–2025" ಅನ್ನು ಉದ್ಘಾಟಿಸಿ ಮಾತನಾಡಿದ ಅವರು ತೋಟಗಾರಿಕೆ ಬೆಳೆಗಳಲ್ಲಿ ಮಾವು ಪ್ರಮುಖವಾದದ್ದು, ಜಿಲ್ಲೆಯಲ್ಲಿ ವಾರ್ಷಿಕ 20 ಸಾವಿರಕ್ಕೂ ಹೆಚ್ಚು ಟನ್ ಮಾವಿನ ಉತ್ಪಾದನೆಯಾಗುತ್ತಿದೆ ಎಂದರು.

ಉತ್ತಮ ಬೆಲೆಗೆ ಗ್ರಾಹಕರಿಗೆ ಗುಣಮಟ್ಟದ ಮಾವಿನ ಹಣ್ಣುಗಳನ್ನು ಕಲ್ಪಿಸಿ, ರೈತರು ಮತ್ತು ಗ್ರಾಹಕರ ನಡುವೆ ಸ್ನೇಹ ಸಂಬಂಧ ಸಾಧಿಸುವ ಜೊತೆಗೆ ಮಾವು ಬೆಳೆಗಾರರಿಗೆ ಉತ್ತೇಜನ ನೀಡಲು ಈ ಮೇಳವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ನಂತರ ಮಾತನಾಡಿದ ಜಿಲ್ಲಾ ಪಂಚಾಯತ್ ಸಿಇಓ ಕೆ.ಆರ್.ನಂದಿನಿ ಅನೇಕ ವರ್ಷಗಳ ಬಳಿಕ ಜಿಲ್ಲೆಯಲ್ಲಿ ಮಾವು ಮತ್ತು ಹಲಸು ಮೇಳವನ್ನು ಆಯೋಜಿಸಲಾಗಿದೆ, ಜೊತೆಗೆ ಉತ್ತಮ ಗುಣಮಟ್ಟದ ಹಣ್ಣಿನ ಗಿಡಗಳನ್ನು ನೀಡಬೇಕೆಂಬ ಸದುದ್ದೇಶದಿಂದ ಸಸ್ಯ ಸಂತೆ ಪ್ರದರ್ಶನ ಮತ್ತು ಮಾರಾಟವನ್ನು ಸಹ ಹಮ್ಮಿಕೊಳ್ಳಲಾಗಿದೆ.

ಮೇಳದಲ್ಲಿ 15ಕ್ಕೂ ಹೆಚ್ಚಿನ ಮಳಿಗೆಗಳನ್ನು ತೆರೆಯಲಾಗಿದ್ದು, ಜಿಲ್ಲೆಯ ಜನತೆಗೆ ಕಾರ್ಬೈಡ್ ಹಾಗೂ ರಾಸಾಯನಿಕ ಮುಕ್ತ ಮಾವಿನ ಹಣ್ಣುಗಳನ್ನು ನೀಡುವ ಉದ್ದೇಶದಿಂದ ಸ್ಥಳೀಯ ರೈತರನ್ನು ಒಳಗೊಂಡಂತೆ ರಾಜ್ಯದ ನಾನಾ ಭಾಗಗಳಿಂದ ವಿವಿಧ ತಳಿಯ 40ಕ್ಕೂ ಹೆಚ್ಚು ಮಾವುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ, ಇದರ ಜೊತೆ 10ಕ್ಕೂ ಹೆಚ್ಚು ವಿಧದ ಹಲಸಿನ ಹಣ್ಣನ್ನು ಇರಿಸಲಾಗಿದ್ದು ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಇದರ ಸದುಪಯೋಗ ಪಡೆದು ಕೊಳ್ಳಬೇಕು ಎಂದು ಹೇಳಿದರು.

40ಕ್ಕೂ ಹೆಚ್ಚಿನ ಮಾವಿನ ಹಣ್ಣುಗಳ ಪ್ರದರ್ಶನ: ರಾಜ್ಯದ ನಾನಾ ಭಾಗಗಳಿಂದ ರೈತರು ತಂದಿದ್ದ ಬಾದಾಮಿ, ರಸಪುರಿ, ಮಲ್ಲಿಕಾ, ಮಲಗೋವಾ, ಸೆಂದೂರ, ಕೇಸರ್, ಸಕ್ಕರೆಗುತ್ತಿ, ಇಮಾಮ್ ಪಸಂದ, ತೋತಾಪುರಿ, ಲಾಂಗ್ರಾ, ದಸಹರಿ, ಚೆಲಕ್ ರಸ, ಅಮ್ರಪಾಲಿ, ಮದನಪಲ್ಲಿ ಸೇರಿದಂತೆ ಇನ್ನೂ ಅನೇಕ ತಳಿಯ ಮಾವಿನ ಹಣ್ಣುಗಳು ಗ್ರಾಹಕರ ಮನಸೆಳೆದವು.

10 ಕ್ಕೂ ಹೆಚ್ಚು ವಿಧದ ಹಲಸಿನ ಹಣ್ಣಿನ ಪ್ರದರ್ಶನ: ಮೇಳದಲ್ಲಿ 10 ಕ್ಕೂ ಹೆಚ್ಚಿನ ವಿವಿಧ ತಳಿ ಹಲಸಿನ ಹಣ್ಣುಗಳನ್ನು ಪ್ರದರ್ಶಿಸಲಾಯಿತು, ಗುಬ್ಬಿ ಬಕ್ಕೆ, ಬಕ್ಕೆ, ಚಂದ್ರ ಬಕ್ಕೆ, ಅಜ್ಜಿ ಹಲಸು, ಸಕ್ಕರೆ ಪಟ್ಟಾ ಒಂಕೆ, ಗುರುಗಳ ತೋಟ,ಚಂದ್ರ ಹಲಸು ಸೇರಿದಂತೆ ಇನ್ನಿತರ ವಿಧದ ಹಲಸಿನ ಹಣ್ಣುಗಳನ್ನು ಗ್ರಾಹಕರು ಕಣ್ತುಂಬಿಕೊಂಡರು.

ಸಸ್ಯಗಳ ಪ್ರದರ್ಶನ: ಗುಣಮಟ್ಟದ ಕಸಿ ಸಸಿಗಳನ್ನು ಇಲಾಖಾ ದರದಲ್ಲಿ ಮಾರಾಟ ಮತ್ತು ಪ್ರದರ್ಶನ ಮಾಡಲಾಯಿತು, ಸಂಬೆ, ಮಾವು, ಸೀಬೆ, ಸಪೋಟ, ನುಗ್ಗೆ, ಅಡಿಕೆ ಸೇರಿದಂತೆ ಇನ್ನಿತರ ಸಸಿಗಳನ್ನು ಮಾರಾಟಕ್ಕೆ ಇಡಲಾಗಿದೆ.

ನಾಗಮಂಗಲದಲ್ಲಿ ಭಾರತೀಯ ಸೇನೆಯನ್ನು ಬೆಂಬಲಿಸಿ ತಿರಂಗ ಯಾತ್ರೆ



ನಾಗಮಂಗಲದಲ್ಲಿ ನಡೆದ ತಿರಂಗ ಯಾತ್ರೆ.

ನಾಗಮಂಗಲ, ಮೇ 26– ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಉಗ್ರರ ನೆಲೆಗಳನ್ನು ಧ್ವಂಸ ಮಾಡಿದ ಭಾರತೀಯ ಸೈನ್ಯದ ಪರಾಕ್ರಮ ಬೆಂಬಲಿಸಿ ತಿರಂಗ ಯಾತ್ರೆ ನಡೆಸಲಾಯಿತು.

ಪಟ್ಟಣದ ಟಿ.ಬಿ ಬಡಾವಣೆಯಿಂದ ಶುರುವಾದ ಯಾತ್ರೆ ಪ್ರಮುಖ ರಸ್ತೆಯಲ್ಲಿ ಸಂಚರಿಸಿ ತಾಲೂಕು ಕಚೇರಿಯವರಿಗೆ ನಡೆದ ತಿರಂಗ ಯಾತ್ರೆಯಲ್ಲಿ ನಿವೃತ್ತ ಸೈನಿಕರು, ಶಾಲಾ ಮಕ್ಕಳು, ಸಾರ್ವಜನಿಕರು ಭಾಗವಹಿಸಿದ್ದರು.

ತಿರಂಗ ಯಾತ್ರೆಗೆ ಶ್ರೀ ಆದಿಚುಂಚನಗಿರಿ ಮಠದ ಶ್ರೀ ಸತ್ ಕೀರ್ತಿನಾಥ ಸ್ವಾಮೀಜಿ ಚಾಲನೆ ನೀಡಿ ಮಾತನಾಡಿದ ಅವರು ಭಾರತದಲ್ಲಿ ಇರುವವರು ಶಾಂತಿಪ್ರಿಯ ಜನರು. ಹಿಂದೂಗಳು ಯಾರ ಮೇಲೂ ಅಕ್ರಮಣವನ್ನು ಮಾಡುವುದಿಲ್ಲ. ನಮ್ಮ ಮೇಲೆ ಅತಿಕ್ರಮಣ ಮಾಡಿದ ಯಾರನ್ನೂ ಬಿಡುವುದಿಲ್ಲ ಎಂಬುದಕ್ಕೆ ಭಾರತ ನಡೆಸಿದ ಆಪರೇಷನ್ ಸಿಂಧೂರ್ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಭಾರತದಲ್ಲಿ ವಾಸಿಸುವ ಎಲ್ಲರ ರಕ್ತದ ಕಣ ಕಣವು ಭಾರತ ಭಾರತ... ಎಂದು ಕೂಗುತ್ತದೆ. ಇಂಥದರ ವಿರುದ್ಧ ನಾವು ನಿಲ್ಲಬೇಕಾದ ಅವಶ್ಯಕತೆ ಎದ್ದು ಕಾಣುತ್ತದೆ ಎಂದರು.

ಮಾಜಿ ಸೈನಿಕ ನಾರಾಯಣ್ ಮಾತನಾಡುತ್ತಾ ನಮ್ಮ ಸೈನಿಕರು ದೇಶದಲ್ಲಿ ನಮ್ಮದೇ ಆದ ಬಲವನ್ನು ಹೊಂದಿದ್ದೇವೆ, ದೇಶದ ರಕ್ಷಣೆಗೋಸ್ಕರ ನಮ್ಮ ಪ್ರಾಣವನ್ನೇ ಮುಡಿಪಾಗಿ ಇಟ್ಟು ಹೋರಾಡಿದಂತಹ ಯೋಧರು ನಾವಾಗಿದ್ದೇವೆ. ದೇಶದ ಜನತೆಯನ್ನು ಕಾಯುವುದಕ್ಕೋಸ್ಕರ ನಾವು ಪಣತೊಟ್ಟು ನಿಂತಿದ್ದೇವೆ ಎಂದು ತಿಳಿಸಿದರು. ಸಣ್ಣ ಪುಟ್ಟ ತಪ್ಪುಗಳನ್ನು ಮಾಡಿದ ಸಂದರ್ಭದಲ್ಲಿ ಸಹಿಸಿಕೊಳ್ಳಬಹುದು. ಆದರೆ ಅವರು ಭಾರತೀಯ ಹೆಣ್ಣು ಮಕ್ಕಳ ಸಿಂಧೂರ ಅಳಿಸುವ ಹೀನಕೃತ್ಯವೆಸಗಿದ ಪರಿಣಾಮವಾಗಿ ದೊಡ್ಡಮಟ್ಟದಲ್ಲಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆದಿದೆ. ಇಡೀ ಜಗತ್ತಿಗೆ ಭಾರತದ ಸೈನ್ಯದ ಶಕ್ತಿ ಪ್ರದರ್ಶನವಾಗಿದೆ. ಪ್ರತಿಯೊಬ್ಬ ಭಾರತೀಯ ನಾಗರಿಕರು ಸೈನಿಕರಿದ್ದಂತೆ ನಾವು ಇದ್ದಲ್ಲೇ ಸೈನ್ಯವನ್ನು ಬೆಂಬಲಿಸುವ ಕೆಲಸವನ್ನು ಮಾಡಬೇಕು. ನಮ್ಮ ಗಡಿಯಲ್ಲಿ ನಾವು ಇದ್ದೇವೆ ಎಂದುಕೊಂಡು ನಮ್ಮ ದೇಶವನ್ನು ಕಾಪಾಡುವ ನಿಟ್ಟಿನಲ್ಲಿ ಎಲ್ಲರೂ ಹೋರಾಟ ಮಾಡಬೇಕು ಎಂದು ತಿಳಿಸಿದರು.

ವೈದ್ಯನಾಥಪುರದ ಕಂಬದ ಜಂಗಮ ಮಠದ ರೇಣುಕಾಚಾರ್ಯ ಸ್ವಾಮೀಜಿ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಮರಿಗೌಡ, ವಕೀಲ ಸಂಘದ ಅಧ್ಯಕ್ಷ ಮಹದೇವಪ್ಪ, ಪುಣ್ಯಕೋಟಿ ರಾಘು, ನಾಗಮಂಗಲ ಮಿಷನ್ ಮೋದಿ ಟೀಂನ ಉಪಾಧ್ಯಕ್ಷ ಬ್ರಹ್ಮದೇವರಹಳ್ಳಿ ಲೋಕೇಶ್ ಸ್ವಾಮಿ, ವಿಶ್ವ ಹಿಂದೂ ಪರಿಷತ್ ಪದಾಧಿಕಾರಿಗಳು ಬಿಜೆಪಿ ಸಿದ್ದಲಿಂಗಸ್ವಾಮಿ ಹಾಗೂ ಎಲ್ಲಾ ಕಾರ್ಯಕರ್ತರು ನಾಗ ಮಂಗಲ ತಿರಂಗ ಮೆರವಣಿಗೆಯಲ್ಲಿ ಭಾಗವಹಿಸಿ ಭಾರತ ಮಾತೆಗೆ ಜಯವಾಗಲಿ ಎಂದು ಘೋಷಣೆಗಳೊಂದಿಗೆ ಪಾಕಿಸ್ತಾನದ ಉಗ್ರರ ವಿರುದ್ಧ ತಿರಂಗ ಯಾತ್ರೆಯನ್ನು ಮಾಡುವ ಮೂಲಕ ಆಪರೇಷನ್ ಸಿಂಧೂರಕ್ಕೆ ಬೆಂಬಲ ಹಾಗೂ ಸಹಮತವನ್ನು ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣದಲ್ಲಿ ಮೊಸಳೆ ಪ್ರತ್ಯಕ್ಷ



ಶ್ರೀರಂಗಪಟ್ಟಣ, ಮೇ 26– ಶ್ರೀರಂಗಪಟ್ಟಣ ತಾಲೂಕು ಚಿಕ್ಕಾಯರಹಳ್ಳಿ ಗ್ರಾಮದ ಬಳಿ ವಿಶ್ವೇಶ್ವರಯ್ಯ ನಾಲೆಯ ಮಡುವಿನಲ್ಲಿ ಭಾನುವಾರ ಬೆಳಗ್ಗೆ ರೈತರೊಬ್ಬರು ಹಸುಗಳಿಗೆ ನೀರು ಕುಡಿಸಲು ಹೋದಾಗ ಮೊಸಳೆಯೊಂದು ಕಂಡು ಬಂದಿದೆ.

ಸತತ ಮಳೆಯಿಂದಾಗಿ ವಿಶ್ವೇಶ್ವರಯ್ಯ ನಾಲೆಯಲ್ಲಿ ನಾಲ್ಕೈದು ದಿನಗಳಿಂದ ನೀರು ನಿಲ್ಲಿಸಲಾಗಿರುವ ಕಾರಣ, ನಾಲೆ ಮಡುವಿನಲ್ಲಿ ಸ್ವಲ್ಪ ಮಟ್ಟಿಗೆ ನೀರಿದ್ದು ಇದರಲ್ಲಿದ್ದ ಮೊಸಳೆ ಬಿಸಿಲು ಕಾಯಲು ಬೆಳಗ್ಗೆ ತೀರಕ್ಕೆ ಬಂದಿರಬಹುದು ಎನ್ನಲಾಗಿದೆ.

ಗ್ರಾಮಸ್ಥರು ನೀಡಿದ ಮಾಹಿತಿ ಮೇರೆಗೆ ಕೆ.ಆರ್.ಸಾಗರ ಪೊಲೀಸ್ ಠಾಣೆಯ ಸಿಬ್ಬಂದಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು, ನಂತರ ನಾಲೆ ನೀರಿನಲ್ಲಿ ಕಂಡು ಬಂದ ಮೊಸಳೆ ಹೊರಬಾರದ ಕಾರಣ ಡಿಆರ್ ಎಫ್‌ಓ ದರ್ಮೇಂದ್ರ ನೇತೃತ್ವದಲ್ಲಿ ಕೂಂಬಿಂಗ್ ನಡೆಸಿದ್ದು ಮೊಸಳೆ ಸಿಗದ ಕಾರಣ, ಮೊಸಳೆ ಹಿಡಿಯಲು ಬೋನ್ ಇಡಲಾಗಿದೆ ಕೆಆರ್.ಸಾಗರ ಅಣೆಕಟ್ಟೆಯಿಂದ ನೀರು ಹೊರ ಬಿಟ್ಟಾಗ ಬಂದಿರುವ ಸಾಧ್ಯತೆ ಇದೆ ಎಂದು ಡಿಆರ್ ಎಫ್‌ಓ ಧರ್ಮೇಂದ್ರ ಹೇಳಿದರು.

ಈ ಸಂದರ್ಭದಲ್ಲಿ ಪಾಂಡವಪುರ ಅರಣ್ಯ ಇಲಾಖೆ ಸಿಬ್ಬಂದಿ ಕುಮಾರ್ ಲಮಾಣಿ, ವಾಚರ್ ಕುಮಾರ್ ಇದ್ದರು. ನಾಲೆಯಲ್ಲಿರುವ ಮೊಸಳೆ ಶೀಘ್ರವಾಗಿ ಸೆರೆ ಹಿಡಿಯಬೇಕಾಗಿದೆ, ದನ, ಹಸುಗಳಿಗೆ ಇಲ್ಲಿನ ಮಡುವಿನಲ್ಲಿ ನೀರು ಕುಡಿಸಲು ಹೋಗುತ್ತೇವೆ, ಪಕ್ಕದಲ್ಲೆ ಸೋಪಾನ ಕಟ್ಟೆಯಿದ್ದು ಮಹಿಳೆಯರು ಬಟ್ಟೆ ಒಗೆಯಲು ಹೋಗುತ್ತಾರೆ. ಪಕ್ಕದಲ್ಲೆ ಮನೆಗಳು ಇದ್ದು ಜಾನುವಾರುಗಳನ್ನು ಸಾಕಿದ್ದೇವೆ. ಅರಣ್ಯ ಇಲಾಖೆ ತುರ್ತಾಗಿ ಮೊಸಳೆ ಹಿಡಿದು ಸ್ಥಳಾಂತರ ಮಾಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗ್ರಾಮಪಂಚಾಯತ್ ಕೆಡಿಪಿ ಸಭೆಗೆ ಅಧಿಕಾರಿಗಳ ಹಾಜರಾತಿ ಕಡ್ಡಾಯ

ಶಾಸಕ ಹೆಚ್.ಟಿ.ಮಂಜು ಖಡಕ್ ಸೂಚನೆ



ಕೆಡಿಪಿ ಸಭೆಯಲ್ಲಿ ಮಾತನಾಡುತ್ತಿರುವ ಶಾಸಕ ಹೆಚ್.ಟಿ.ಮಂಜು.

ಕೆ.ಆರ್.ಪೇಟೆ, ಮೇ 26– ಗ್ರಾಪಂ ಚುನಾಯಿತ ಜನಪ್ರತಿನಿಧಿಗಳನ್ನು ಒಳಗೊಂಡ ಸ್ಥಳೀಯ ಸರ್ಕಾರಗಳಾಗಿವೆ. ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿಗಳು ನಡೆಸುವ ಕೆಡಿಪಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗಿ ತಮ್ಮ ಇಲಾಖೆಯ ಪ್ರಗತಿಯ ವರದಿಯನ್ನು ಮಂಡಿಸಬೇಕು. ಆದರೆ ಕೆಲವು ಇಲಾಖೆಗಳು ಕೆಡಿಪಿ ಸಭೆಗೆ ಹಾಜರಾಗದೇ ಇರುವುದು ಸರಿಯಲ್ಲ. ಇದು ಮುಂದಿನ ದಿನಗಳಲ್ಲಿ ಮರುಕಳಿಸಿದರೆ ನಾನು ಸಹಿಸುವುದಿಲ್ಲ ಎಂದು ಶಾಸಕರಾದ ಹೆಚ್.ಟಿ.ಮಂಜು ಹೇಳಿದರು.

ಅವರು ಕೆಆರ್.ಪೇಟೆ ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ವತಿಯಿಂದ ಚಿಲ್ಲದಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಘನತ್ಯಾಜ್ಯ ಘಟಕ ಉದ್ಘಾಟಿಸಿ, ನಂತರ ಶ್ರೀ ಮರಡಿಲಿಂಗೇಶ್ವರ ಕ್ಷೇತ್ರದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಭಾಂಗಣದಲ್ಲಿ ಆಯೋಜಿಸಿದ್ದ ಕೆ.ಡಿ.ಪಿ ಸಭೆಯನ್ನು ಉದ್ಘಾಟಿಸಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡಿ ಮಾತನಾಡಿದರು.

ಶಾಸಕರು ಶಾಸನ ಸಭೆಯ ಚುನಾಯಿತ ಪ್ರತಿನಿಧಿಗಳಾಗಿರುತ್ತಾರೆ. ಅದೇ ರೀತಿ ಗ್ರಾಮ ಪಂಚಾಯಿತಿ ಸದಸ್ಯರು ಸ್ಥಳೀಯ ಸರ್ಕಾರದ ಚುನಾಯಿತ ಜನಪ್ರತಿನಿಧಿಗಳಾಗಿರುತ್ತಾರೆ. ಶಾಸನ ಸಭೆಗೆ ಎಷ್ಟು ಗೌರವ ಇದೆಯೋ, ಗ್ರಾಮ ಪಂಚಾಯಿತಿಗಳು ನಡೆಸುವ ಕೆಡಿಪಿ ಸಭೆಗೂ ಅಷ್ಟೇ ಗೌರವ ಇರುತ್ತದೆ. ಹಾಗಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳು, ಸಹಕಾರ ಸಂಸ್ಥೆಗಳು, ಸರ್ಕಾರಿ ಅನುಧಾನ ಪಡೆಯುವ ಎಲ್ಲಾ ಸಂಸ್ಥೆಗಳೂ ಸಹ ಕೆಡಿಪಿ ಸಭೆಗೆ ಬಂದು ತಮ್ಮ ಸಂಸ್ಥೆಯ ಪ್ರಗತಿಯ ಬಗ್ಗೆ ವರದಿಯನ್ನು ಮಂಡಿಸಬೇಕು. ಹಾಲು ಉತ್ಪಾದಕರ ಸಹಕಾರ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳು ಸಭೆಗೆ ಬಾರದೇ ಇರುವುದು ಸರಿಯಲ್ಲ. ಸರ್ಕಾರದಿಂದ ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹ ಧನ ಬರುತ್ತದೆ. ಇದನ್ನು ಸರಿಯಾಗಿ ತಲುಪುತ್ತಿದೆಯೋ; ಇಲ್ಲವೋ ಎಂಬುದನ್ನು ಕೇಳುವ ಹಕ್ಕು ಗ್ರಾಪಂ ಕೆಡಿಪಿ ಸಭೆಗೆ ಇದೆ ಹಾಗೂ ತಾಲೂಕು ಮಟ್ಟದಲ್ಲಿ ನಡೆಯುವ ಶಾಸಕರ ನೇತೃತ್ವದ ಸಭೆಗೂ ಇರುತ್ತದೆ ಆದರೂ ಸಭೆಯ ಆಹ್ವಾನದ ನೋಟಿಸ್ ನೀಡಿದ್ದರೂ ಬಾರದೇ ಇರುವ ಹಾಲು ಉತ್ಪಾದಕರ ಸಂಘಗಳ ಕಾರ್ಯದರ್ಶಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡುವಂತೆ ಪಿಡಿಓ ಅವರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅರಣ್ಯ ಇಲಾಖೆಯ ತಾಲೂಕು ಅಧಿಕಾರಿ ಅನಿತಾ, ಕೃಷಿ ಇಲಾಖೆಯ ಅಧಿಕಾರಿ ಶ್ರೀಧರ್, ಚೆಸ್ಕಾಂ ಇಂಜಿನಿಯರ್ ಸುನಿಲ್‌ಕುಮಾರ್, ಗ್ರಾಮ ಆಡಳಿತ ಅಧಿಕಾರಿ ಸುನಿಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಯ ಪ್ರಗತಿಯ ವರದಿಯನ್ನು ಮಂಡಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ. ದಿವಿಕುಮಾರ್ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಸುಷ್ಮಾ, ತಾಲೂಕು ಯೋಜನಾಧಿಕಾರಿ ಮೋದೂರು ಶ್ರೀನಿವಾಸ್, ಜಿಲ್ಲಾ ದಿಶಾ ಸಮಿತಿ ಸದಸ್ಯ ನರಸನಾಯಕ್ ಮತ್ತಿತರರು ಕಾರ್ಯಕ್ರಮ ಕುರಿತು ಮಾತನಾಡಿದರು. ಗ್ರಾಮ ಪಂಚಾಯಿತಿ ಪಿಡಿಓ ಶಿಲ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಚಿಲ್ಲದಹಳ್ಳಿ ಗ್ರಾಮ ಪಂಚಾಯತ್ ಸದಸ್ಯ ಆರ್.ಶ್ರೀ ನಿವಾಸ್ ಚಿಲ್ಲದಹಳ್ಳಿ ಗ್ರಾಮದ ಸಮಸ್ಯೆಗಳು ಸಭೆಯಲ್ಲಿ ಓದಿ ಶಾಸಕರಿಗೆ ಗ್ರಾಮಸ್ಥರೊಡಗೂಡಿ ಮನವಿ ಸಲ್ಲಿಸಿದರು.

ಕೆ.ಬಿ.ಕರೀಗೌಡ ನಿಧನ



ಕೆ.ಆರ್.ಪೇಟೆ, ಮೇ26– ತಾಲೂಕಿನ ಶೀಳನೆರೆ ಗ್ರಾಮದ ಹಿರಿಯ ಮುಖಂಡರಾದ ಕೆ.ಬಿ.ಕರೀಗೌಡ(84)ಅವರು ಅನಾರೋಗ್ಯದಿಂದ ಸೋಮವಾರ ಸಂಜೆ ನಿಧನರಾದರು.

ಮೃತರು ಪತ್ನಿ ಸುಶೀಲಮ್ಮ, ಪುತ್ರರಾದ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಎಸ್.ಕೆ.ಪ್ರಕಾಶ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಸ್.ಕೆ.ರವಿಕುಮಾರ್, ಪುತ್ರಿ ಎಸ್.ಕೆ.ಭಾರತಿ ಸೇರದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆಯನ್ನು ಮೇ.27ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಶೀಳನೆರೆ ಗ್ರಾಮದಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ಆರಂಭದಲ್ಲೇ ಮುಂಗಾರು ಆರ್ಭಟಕ್ಕೆ ನಲುಗಿದ ಮೈಸೂರು

41 ಮಿಲಿ ಮೀಟರ್‌ನಷ್ಟು ದಾಖಲೆ ಮಳೆ

ಕಳೆದ 24 ಗಂಟೆಯಲ್ಲಿ ಮೈಸೂರಿನಲ್ಲಿ ದಾಖಲೆ ಪ್ರಮಾಣದಲ್ಲಿ ಮಳೆಯಾಗಿದೆ. ಮೈಸೂರಿನಲ್ಲಿ 4.6 ಮಿಲಿ ಮೀಟರ್ ವಾಡಿಕೆ ಮಳೆ. ಆದರೆ ಈಗ 41.5 ಮಿಲಿ ಮೀಟರ್ ಸುರಿದಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಭಾರೀ ಮಳೆಯಾಗಿದ್ದು, ಹವಾಮಾನ ಇಲಾಖೆ ಈ ಬಗ್ಗೆ ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿದೆ.

ತಾಲೂಕಿನ ಹೆಸರು	ವಾಡಿಕೆ ಮಳೆ	ಈಗ ಸುರಿದ ಮಳೆ
ಹೆಚ್.ಡಿ.ಕೋಟೆ	6.7 ಎಂ.ಎಂ	61.3 ಎಂ.ಎಂ
ಹುಣಸೂರು	5.5 ಎಂ.ಎಂ	41.9 ಎಂ.ಎಂ
ಕೆ.ಆರ್.ನಗರ	4.7 ಎಂ.ಎಂ	21.9 ಎಂ.ಎಂ
ಮೈಸೂರು	5.2 ಎಂ.ಎಂ	28.6 ಎಂ.ಎಂ
ನಂಜನಗೂಡು	5.5 ಎಂ.ಎಂ	30.6 ಎಂ.ಎಂ
ಪಿರಿಯಾಪಟ್ಟಣ	6.1 ಎಂ.ಎಂ	51.2 ಎಂ.ಎಂ
ತಿ.ನರಸೀಪುರ	5.2 ಎಂ.ಎಂ	17 ಎಂ.ಎಂ.
ಸರಗೂರು	1.8 ಎಂ.ಎಂ	59.5 ಎಂ.ಎಂ
ಸಾಲಿಗ್ರಾಮ	3.5 ಎಂ.ಎಂ	33.8 ಎಂ.ಎಂ

ಜನವರಿ 1 ರಿಂದ ಮೇ 26 ರ ಈ ದಿನದ ತನಕ 187.3 ಮಿಲಿ ಮೀಟರ್ ವಾಡಿಕೆ ಮಳೆಯಾಗಬೇಕು. ಆದರೆ ಈ ಅವಧಿಯಲ್ಲಿ 228.6 ಮಿಲಿ ಮೀಟರ್ ಮಳೆಯಾಗಿದೆ. ಮೈಸೂರು ನಗರದಲ್ಲಿ ಕನಿಷ್ಟ 20 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇದ್ದು, ಗರಿಷ್ಠ 24.9 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಅಲ್ಲಲ್ಲಿ ವಿದ್ಯುತ್ ಕಡಿತ: ನಿರಂತರ ಮಳೆಯಿಂದಾಗಿ ನಗರದ ಹಲವೆಡೆ ವಿದ್ಯುತ್ ಕಡಿತಗೊಳಿಸಿದ್ದರಿಂದ ನಿವಾಸಿಗಳು ಪರದಾಡುವಂತಾಯಿತು. ಕರೆಂಟ್ ಆಗಾಗ ಬಂದು–ಹೋಗುವ ಪರಿಸ್ಥಿತಿಯಿಂದ ಕಿರಿಕಿರಿ ಅನುಭವಿಸುವಂತಾಯಿತು.

ಯುಜಿಡಿ ಬ್ಲಾಕ್: ಸುರಿಯುತ್ತಿರುವ ಮಳೆ ನಗರದ ಬಹುತೇಕ ಕಡೆಗಳಲ್ಲಿ ಯುಜಿಡಿ ಬ್ಲಾಕ್ ಆಗಿದ್ದು, ಮಳೆ ನೀರಿನೊಂದಿಗೆ ಒಳಚರಂಡಿ ಕೊಳಚೆ ನೀರು ಸಹ ಮ್ಯಾನ್‌ಹೋಲ್ ಮೂಲಕ ಉಕ್ಕಿ ಹರಿದಿದೆ. ಬೆಳಗ್ಗೆಯಿಂದ ಸಂಜೆವರೆಗೂ ಯುಜಿಡಿ ಸಮಸ್ಯೆಗಳದ್ದೆ 50–60 ದೂರುಗಳು ಬಂದಿವೆ ಎಂದು ನಗರಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ ತಿಳಿಸಿದ್ದಾರೆ.

ವ್ಯಾಪಾರ–ವಹಿವಾಟು ಕಡಿಮೆ: ಕಳೆದ ಎರಡು ದಿನಗಳಿಂದ ಸುರಿತ್ತಿರುವ ಮಳೆ ನಿರಂತರ ಮಳೆಗೆ ವ್ಯಾಪಾರ–ವಹಿವಾಟು ಕಡಿಮೆಯಾಗಿದೆ. ದೇವರಾಜ ಮಾರುಕಟ್ಟೆ, ಮಂಡಿ ಮಾರುಕಟ್ಟೆ, ಅಗ್ರಹಾರ ಹಾಗೂ ಎಂಜಿ ರಸ್ತೆ ಮಾರುಕಟ್ಟೆಯಲ್ಲೂ ವ್ಯಾಪಾರಿಗಳು ಹಾಗೂ ಗ್ರಾಹಕರ ಸಂಖ್ಯೆ ವಿರಳವಾಗಿತ್ತು. ಡಿ.ದೇವರಾಜ ಅರಸು ರಸ್ತೆ, ಕಾಳಿದಾಸ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಬಹುತೇಕ ವಾಣಿಜ್ಯ ಮಳಿಗೆಗಳು ಬಂದ್ ಆಗಿದ್ದು, ರಸ್ತೆ ಬದಿ ವ್ಯಾಪಾರಿಗಳ ಫಜೀತಿ ಹೇಳತೀರದಾಗಿತ್ತು.

ತಗ್ಗು ಪ್ರದೇಶಗಳಲ್ಲಿ ಆತಂಕ: ಮೈಸೂರಿನ ಗುಂಡೂರಾವ್‌ನಗರ, ಮಧುವನ ಬಡಾವಣೆ, ಅಗ್ರಹಾರ, ಕನಕಗಿರಿ, ಚಾಮುಂಡಿಪುರಂ, ಉದಯಗಿರಿ ಸೇರಿದಂತೆ ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗುವ ಆತಂಕ ಮನೆ ಮಾಡಿದೆ. ಕನಕಗಿರಿಯ ಹಲವು ಮನೆಗಳ ಮನೆಗಳ ಮುಂದು ಮರಳಿನ ಮೂಟೆ, ಮರದ ಪಟ್ಟಿಗಳನ್ನು ಬಾಗಿಲಿಗೆ ಅಡ್ಡಲಾಗಿ ಇರಿಸಿಕೊಂಡು ಮನೆಯೊಳಗೆ ನೀರು ನುಗ್ಗುವುದರಿಂದ ತಾತ್ಕಾಲಿಕವಾಗಿ ನಿವಾಸಿಗಳು ಬಚಾವ್ ಆಗುತ್ತಿದ್ದು, ಯಾವಾಗ ಬೇಕಾದರೂ ನೀರಿನ ರಭಸ ಹೆಚ್ಚಾಗಿ ಮನೆಯೊಳಗೆ ನುಗ್ಗುವ ಆತಂಕ ಹೆಚ್ಚಿದೆ.

ರಸ್ತೆ–ಚರಂಡಿಗಳು ಜಲಾವೃತ: ನಗರದ ಕೆ.ಆರ್.ವೃತ್ತ, ಹಾರ್ಡಿಂಜ್ ವೃತ್ತ, ದೊಡ್ಡಗಡಿಯಾರ ಸೇರಿದಂತೆ ಪ್ರಮುಖ ವೃತ್ತಗಳು ಹಾಗೂ ರಸ್ತೆಗಳು ಮಳೆಯಿಂದ ಜಲಾವೃತವಾಗುತ್ತಿದ್ದು, ವಾಹನ ಸವಾರರು, ಪಾದಚಾರಿಗಳು ಪರದಾಡುವಂತಾಯಿತು. ಅಲ್ಲದೆ ಬಂಬೂಬಜಾರ್ ಎಪಿಎಂಸಿ ಮಾರುಕಟ್ಟೆ ಆವರಣ ಜಲಾವೃತ್ತಗೊಂಡಿದ್ದು, ವ್ಯಾಪಾರಿಗಳನ್ನು ಹೈರಾಣಾಗಿಸಿದೆ.

ಸಾಮಾನ್ಯವಾಗಿ ಮುಂಗಾರು ಮಾರುತ ಜೂನ್ ಮೊದಲ ವಾರದಲ್ಲಿ ಕೇರಳಕ್ಕೆ ಪ್ರವೇಶಿಸುತ್ತಿತ್ತು. ಆದರೆ ಈ ಬಾರಿ ಮೇ. 22 ರಂದೇ ಕೇರಳ ಪ್ರವೇಶಿಸಿದೆ. ಕಳೆದ 16 ವರ್ಷಗಳ ನಂತರ 8 ದಿನಗಳ ಮೊದಲೇ ಮುಂಗಾರು ಪ್ರವೇಶಿಸಿದೆ. 2002 ಮತ್ತು 2009 ರಲ್ಲಿಯೂ ಮುಂಗಾರು ಅವಧಿಗೆ ಮುನ್ನ ಕೇರಳ ಪ್ರವೇಶಿಸಿತ್ತು.

ಮುಂಗಾರು ಕೇರಳವನ್ನು ಪ್ರವೇಶಿಸಿದ ಎರಡೇ ದಿನದಲ್ಲಿ ಕರ್ನಾಟಕವನ್ನು ಪ್ರವೇಶಿಸಿದೆ. ಇದರಿಂದ ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಯಲ್ಲಿ ವರುಣ ಅಬ್ಬರಿಸುತ್ತಿದ್ದಾನೆ. ಗಾಳಿ ಪ್ರಬಲವಾಗಿ ಬೀಸುತ್ತಿರುವ ಹಿನ್ನೆಲೆಯಲ್ಲಿ ಕರಾವಳಿ ಪ್ರದೇಶ ಸೇರಿದಂತೆ ಇಡೀ ಕರ್ನಾಟಕವನ್ನು ಮುಂಗಾರು ಆವರಿಸುತ್ತಿದೆ.

ಜಿಟಿ ಜಿಟಿ ಮಳೆಯ ಕಾರಣ ಶೀತ ವಾತಾವರಣವಿದ್ದು, ಈ ತಿಂಗಳಲ್ಲಿ ಅತ್ಯಂತ ತೇವಾಂಶದಿಂದ ಕೂಡಿರುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮೈಸೂರಿನಲ್ಲಿ ಕಳೆದ 15 ವರ್ಷಗಳ ನಂತರ ಈ ಮೇ ತಿಂಗಳು ಹೆಚ್ಚು ತೇವಾಂಶದಿಂದ ಕೂಡಿದೇ ಎಂದು ಹವಾಮಾನ ಇಲಾಖೆಯ ಹೇಳಿದೆ.

ಇಂದು ಅಂಗನವಾಡಿಗಳಿಗೆ ರಜೆ

ಮೈಸೂರು ಜಿಲ್ಲೆಯಲ್ಲಿ ಸತತವಾಗಿ ಮಳೆ ಬೀಳುತ್ತಿರುವ ಕಾರಣ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ನಾಳೆ (ಮೇ 27) ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ತಿಳಿಸಿದ್ದಾರೆ.

ಲಾರಿ ಡಿಕ್ಕಿ; 3 ವರ್ಷದ ಮಗು ಸಾವು

❝ನಾಯಿ ಕಡಿತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ದ್ವಿಚಕ್ರವಾಹನದಲ್ಲಿ ಕರೆದೊಯ್ಯುತ್ತಿದ್ದಾಗ ಮಗು ಸಾವನ್ನಪ್ಪಿರುವುದು ನನ್ನ ಮನಸ್ಸನ್ನು ಕಲಕಿದೆ. ಸಂಚಾರ ಪೊಲೀಸರು ಕರ್ತವ್ಯದಲ್ಲಿದ್ದಾಗ ಅತ್ಯಂತ ಸೂಕ್ಷ್ಮವಾಗಿ ವರ್ತಿಸಬೇಕು . ವಾಹನ ಸವಾರರನ್ನು ಏಕಾಏಕಿ ತಡೆದು ನಿಲ್ಲಿಸುವುದು ಅಥವಾ ಅವರಿಗೆ ಗಾಬರಿ ಉಂಟುಮಾಡುವ ರೀತಿ ವರ್ತಿಸಬಾರದು. ಪೊಲೀಸರು ಸ್ವಲ್ಪ ಎಚ್ಚರ ವಹಿಸಿದ್ದರೆ ಈ ಸಾವನ್ನು ತಪ್ಪಿಸಬಹುದಾಗಿತ್ತು. ಭವಿಷ್ಯದಲ್ಲಿ ಇಂತಹ ಅಚಾತುರ್ಯ ಘಟನೆಗಳು ನಡೆಯದಂತೆ ಎಚ್ಚರವಹಿಸಬೇಕು. ಸಾರ್ವಜನಿಕರು ಕೂಡ ತಮ್ಮ ಜೀವರಕ್ಷಣೆಗಾಗಿಯೇ ಇರುವ ಸಂಚಾರ ನಿಯಮಗಳನ್ನು ಪಾಲಿಸಬೇಕು ಎಂಬುದು ನನ್ನ ವಿನಮ್ರ ಮನವಿ. ಈ ನಿಟ್ಟಿನಲ್ಲಿ ಪೊಲೀಸರು ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಬೇಕು.

- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು

❝ಪೊಲೀಸ್ ಇಲಾಖೆಯ ನಿರ್ಲಕ್ಷ್ಯದಿಂದ ಮಗು ಸಾವನ್ನಪ್ಪಿದೆ. ಅವರಲ್ಲಿ ಶಿಸ್ತು ಇಲ್ಲದಿರುವುದೇ ಇದಕ್ಕೆ ನೇರ ಕಾರಣ. ಪೊಲೀಸರು ಏಕಾಏಕಿ ರಸ್ತೆಯಲ್ಲಿ ವಾಹನಗಳನ್ನು ಅಡ್ಡಹಾಕುವ ಕೆಲಸ ಮಾಡುತ್ತಾರೆ. ಬೈಕ್‌ನ ಹ್ಯಾಂಡಲ್‌ಗೆ ಪೊಲೀಸರ ಕೈತಗುಲಿ ಕೆಳಗೆ ಬಿದ್ದು ಮಗು ಮೃತಪಟ್ಟಿದೆ ಎಂಬ ಮಾಹಿತಿ ನನಗೆ ಬಂದಿದೆ. ಪೊಲೀಸ ರಿಂದಾಗಿಯೇ ಮಗು ಮೃತಪಟ್ಟಿದ್ದು ರಾಜ್ಯ ಸರ್ಕಾರ ಆಕೆಯ ಕುಟುಂಬಕ್ಕೆ 25 ಲಕ್ಷರೂ. ಪರಿಹಾರ ನೀಡಬೇಕು.

- ಆರ್.ಅಶೋಕ್, ವಿಪಕ್ಷ ನಾಯಕ

❝ಮಗು ಸಾವನ್ನಪ್ಪಿರುವ ಘಟನೆ ಅತ್ಯಂತ ಬೇಸರ ತಂದಿದೆ. ಅದಕ್ಕಾಗಿ ಆಕೆಯ ಕುಟುಂಬಸ್ಥರ ಕ್ಷಮೆ ಕೇಳುತ್ತೇನೆ. ಅವರನ್ನು ಭೇಟಿ ಮಾಡಿ ಮನವಿ ಆಲಿಸುತ್ತೇನೆ. ತಪ್ಪಿತಸ್ಥ ಪೊಲೀಸರನ್ನು ಅಮಾನತು ಮಾಡುವಂತೆ ಜಿಲ್ಲಾ ಎಸ್ಪಿಯವರಿಗೆ ತಿಳಿಸಿದ್ದೇನೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತೇನೆ.

- ರವಿಕುಮಾರ್ ಗಣಿಗ, ಮಂಡ್ಯ ಶಾಸಕ

ಈಕೆ ಮನೆ ಮುಂದೆ ಆಟವಾಡುತ್ತಿದ್ದ ವೇಳೆ ನಾಯಿ ಕಚ್ಚಿದ್ದರಿಂದ ಮೊದಲಿಗೆ ಮದ್ದೂರು ತಾಲೂಕು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್‌ನಲ್ಲಿ ಕರೆತರುತ್ತಿದ್ದರು. ಬೈಕನ್ನು ಮಗುವಿನ ದೊಡ್ಡಪ್ಪ ಬಾಸ್ಕರ್ ಚಾಲನೆ ಮಾಡುತ್ತಿದ್ದರೆ, ಮಗುವನ್ನು ಎತ್ತಿಕೊಂಡು ತಾಯಿ ವಾಣಿ ಹಿಂದೆ ಕುಳಿತ್ತಿದ್ದರು.

ಮಂಡ್ಯದ ಸ್ವರ್ಣಚಂದ್ರ ಬಳಿ ವಾಹನ ತಪಾಸಣೆ ನಡೆಸುತ್ತಿದ್ದ ಪೊಲೀಸರು ಹೆಲ್ಮೆಟ್ ಧರಿಸದ ಕಾರಣಕ್ಕಾಗಿ ಭಾಸ್ಕರ್ ಬೈಕ್ ನಿಲ್ಲಿಸುವಂತೆ ಅಡ್ಡಗಟ್ಟಿದ್ದಾರೆ. ಈ ವೇಳೆ ಮಗುವಿಗೆ ನಾಯಿ ಕಚ್ಚಿದ್ದು ಆಸ್ಪತ್ರೆಗೆ ಹೋಗುತ್ತಿರುವುದಾಗಿ ಭಾಸ್ಕರ್ ಹೇಳಿದಾಗ ಒಬ್ಬರು ಬಿಟ್ಟಿದ್ದಾರೆ. ಆದರೆ ಕೆಲ ಅಡಿಗಳ ಅಂತರದಲ್ಲೇ ಮತ್ತೋರ್ವ ಪೊಲೀಸ್ ಸಿಬ್ಬಂದಿ ಬೈಕನ್ನು ಅಡ್ಡಗಟ್ಟಿದ್ದು, ಅವರ ಬಳಿ ಭಾಸ್ಕರ್, ತಮ್ಮ ಮಗುವಿಗೆ ನಾಯಿ ಕಚ್ಚಿದ್ದರಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗುತ್ತಿರುವುದಾಗಿ ಹೇಳುತ್ತಿದ್ದಾಗಲೇ ಲಾರಿಯೊಂದು ಹಿಂಬದಿಯಿಂದ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದ ಮಗುವಿನ ತಲೆಗೆ ತೀವ್ರ ಪೆಟ್ಟಾಗಿದೆ. ಆಕೆಯನ್ನು ಮಿಮ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದೆ.

ಪ್ರತಿಭಟನೆ: ಪೊಲೀಸರ ಎಡವಟ್ಟಿನಿಂದ ಮಗು ಸಾವನ್ನಪ್ಪಿದ ವಿಚಾರ ತಿಳಿಯುತ್ತಿದ್ದಂತೆಯೇ ನೂರಾರು ಮಂದಿ ಜಮಾಯಿಸಿ, ಮೈಸೂರು–ಬೆಂಗಳೂರು ಹಳೆ ಹೆದ್ದಾರಿಯಲ್ಲಿ ಮಗುವಿನ ಶವದೊಂದಿಗೆ ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಿದರು. ಈ ವೇಳೆ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಪೊಲೀಸರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಹಿರಿಯ ಅಧಿಕಾರಿಗಳು ಸಮಾಧಾನಪಡಿಸಲು ಮುಂದಾದಾಗ ಪ್ರತಿಭಟನಾಕಾರರು ಸಂಬಂಧಪಟ್ಟ ಪೊಲೀಸರನ್ನು ಸ್ಥಳಕ್ಕೆ ಕರೆಸುವಂತೆ ಪಟ್ಟು ಹಿಡಿದರು.

ಮಗುವಿನ ಪೋಷಕರು ಹಾಗೂ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿ 'ಸರ್ಕಾರದ ಪರಿಹಾರದ ಹಣ ಯಾರಿಗೆ ಬೇಕು, ನಾವೇ ಹತ್ತು ಲಕ್ಷ ರೂ. ಕೊಡುತ್ತೇವೆ. ನಮ್ಮ ಮಗುವನ್ನು ವಾಪಸ್ ಕೊಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಬಂಧಿಕರೊಬ್ಬರು, ಪೊಲೀಸರು ಬೈಕ್ ತಡೆಯದೇ ಇದ್ದರೆ ನಮ್ಮ ಮಗು ಸಾಯುತ್ತಿರಲಿಲ್ಲ ಎಂದು ದೂರಿದರು.

ಮೂವರು ಎಎಸ್‌ಐ ಅಮಾನತು: ಕೊನೆಗೆ ಎಸ್ಪಿಯವರು ಘಟನೆಗೆ ವಿಷಾಧ ವ್ಯಕ್ತಪಡಿಸಿದ್ದಲ್ಲದೆ, ಎಎಸ್‌ಐಗಳಾದ ಜಯರಾಮು, ನಾಗರಾಜು, ಗುರುದೇವ್ ಅವರನ್ನು ಅಮಾನತುಪಡಿಸಿದ್ದು, ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ. ಮಗುವಿನ ಪೋಷಕರಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸ್ಥಳೀಯ ಶಾಸಕರು ಹಾಗೂ ಸರ್ಕಾರದೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು. ಮಗುವಿನ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು.

ಇದೇ ಮೊದಲಲ್ಲ: ಪೊಲೀಸರು ಅವೈಜ್ಞಾನಿಕವಾಗಿ ವಾಹನ ತಪಾಸಣೆ ನಡೆಸುವುದರಿಂದ ಸವಾರರಿಗೆ ತೊಂದರೆಯಾಗುತ್ತಿರುವುದು ಮಂಡ್ಯದಲ್ಲಿ ಇದೇ ಮೊದಲಲ್ಲ. ಈ ಹಿಂದೆ ಕೆಆರ್.ಪೇಟೆಯಿಂದ ಮಗುವನ್ನು ಚಿಕಿತ್ಸೆಗಾಗಿ ಮಿಮ್ಸ್ ಆಸ್ಪತ್ರೆಗೆ ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದ ವೇಳೆ ಹೆಲ್ಮೆಟ್ ಧರಿಸಿಲ್ಲವೆಂದು ಮಂಡ್ಯದ ಮಹಾವೀರ ವೃತ್ತದಲ್ಲಿ ಬೈಕನ್ನು ಅಡ್ಡಗಟ್ಟಿದ ಪೊಲೀಸರು ಅರ್ಧಗಂಟೆಗೂ ಹೆಚ್ಚು ಕಾಲ ಸತಾಯಿಸಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿತ್ತು.

3 ಕೊರೊನಾ ಪ್ರಕರಣ ದೃಢ

ಎಂದ ಅವರು, ಮೂವರ ಪೈಕಿ ಇಬ್ಬರಿಗೆ ಸಾಧಾರಣ ಲಕ್ಷಣಗಳು ಕಂಡುಬಂದಿದ್ದು, ಹಲವು ಆರೋಗ್ಯ ಸಮಸ್ಯೆಗಳಿದ್ದ ಒಬ್ಬರು ಗಂಭೀರ ಸ್ಥಿತಿಯಲ್ಲಿದ್ದರಾದರೂ, ಚಿಕಿತ್ಸೆ ನೀಡಿದ ಬಳಿಕ ಮೂವರೂ ಚೇತರಿಸಿಕೊಂಡಿ ದ್ದಾರೆ ಎಂದರು. ಕೆ.ಆರ್.ಆಸ್ಪತ್ರೆಯಲ್ಲಿ ಕೋವಿಡ್ ವಾರ್ಡ್ ವ್ಯವಸ್ಥೆ ಮಾಡಿ ಅಲ್ಲಿಗೆ ಪ್ರತ್ಯೇಕ ಸಿಬ್ಬಂದಿ, ಔಷಧಿ, ಚಿಕಿತ್ಸಾ ಸೌಲಭ್ಯ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೆ.ಆರ್.ಆಸ್ಪತ್ರೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಆರ್‌ಟಿ–ಪಿಸಿಆರ್ ಟೆಸ್ಟ್ ಮಾಡಲಾಗುತ್ತಿದ್ದು, ಕೊರೊನಾ ಪ್ರಕರಣಗಳು ಗಣನೀಯವಾಗಿ ಏರಿಕೆಯಾದರೆ ಮೈಸೂರಿನ ಖಾಸಗಿ ಆಸ್ಪತ್ರೆಗಳಲ್ಲೂ ಮುಂದೆ ಟೆಸ್ಟ್‌ಗೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು. ಸೋಂಕಿನ ಬಗ್ಗೆ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ಆದರೆ, ಮುಂಜಾಗ್ರತೆ ವಹಿಸಬೇಕು ಎಂದ ಡಾ.ಕುಮಾರಸ್ವಾಮಿ, ನೆಗಡಿ, ಕೆಮ್ಮು, ಜ್ವರ, ಗಂಟಲು ನೋವು, ಮೈ ಕೈ ನೋವಿನಂತಹ ಲಕ್ಷಣಗಳು ಕಂಡುಬಂದಲ್ಲಿ ಸ್ವಾಬ್ ಟೆಸ್ಟ್ ಮಾಡಿಸಬೇಕು. ಮಾಸ್ಕ್ ಧರಿಸಿ, ಅಂತರ ಕಾಯ್ದುಕೊಳ್ಳಬೇಕು. ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಮಾಸ್ಕ್ ಧರಿಸಿ ಅಂತರ ಕಾಯ್ದುಕೊಳ್ಳಬೇಕು ಎಂದು ಸಲಹೆ ನೀಡಿದರು. ಸಂತೆ, ಜಾತ್ರೆ, ಸಿನಿಮಾ, ಬಸ್ ನಿಲ್ದಾಣ, ರೈಲು ನಿಲ್ದಾಣ, ಪ್ರವಾಸಿ ತಾಣಗಳು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮಾಸ್ಕ್ ಧರಿಸಿ ಅಂತರ ಕಾಯ್ದುಕೊಳ್ಳಬೇಕು. ಮಕ್ಕಳು, ಹಿರಿಯ ನಾಗರಿಕರು, ರೋಗಿಗಳು ಮನೆ ಕ್ವಾರಂಟೈನ್ ನಲ್ಲಿರುವುದು ಒಳಿತು ಎಂದು ಡಾ.ಕುಮಾರಸ್ವಾಮಿ ತಿಳಿಸಿದರು.

ಆದಿವಾಸಿ ಯುವಕ ಬಲಿ

ಮಾರ್ಗಮಧ್ಯೆ ಸಾವನ್ನಪ್ಪಿ ದ್ದಾರೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗ ಮಿಸಿದ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಡಿಸಿಎಫ್ ಪಿ.ಎ.ಸೀಮಾ, ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಮಹಮ್ಮದ್ ಫಯಾಜುದ್ದೀನ್, ಆರ್‌ಎಫ್‌ಓ ನಂದಕುಮಾರ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗಂಗಾ ಧರ್ ಘಟನೆ ಬಗ್ಗೆ ಮಾಹಿತಿ ಪಡೆದು ಪರಿ ಶೀಲನೆ ನಡೆಸಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಅಲ್ಲದೇ ತಕ್ಷಣ 5 ಲಕ್ಷ ರೂ. ಪರಿಹಾರ ನೀಡಲಾಗುವುದು. ಬಳಿಕ 15 ಲಕ್ಷ ರೂ. ಚೆಕ್ ವಿತರಿಸಲಾಗುವುದು. ಹುಲಿ ಸೆರೆಗೆ ತಕ್ಷಣದಿಂದಲೇ ಕೂಂಬಿಂಗ್ ನಡೆಸಲಾಗುವುದೆಂದು ಡಿಸಿಎಫ್ ಸೀಮಾ ತಿಳಿಸಿದರು. ಈ ವೇಳೆ ಹರೀಶ್‌ನನ್ನು ಕಳೆದುಕೊಂಡ ಪೋಷಕರು ಹಾಗೂ 3 ತಿಂಗಳ ಹಿಂದಷ್ಟೆ ಮದುವೆಯಾಗಿದ್ದ ಕೊಡಗಿನ ಕುಮಾರಕಟ್ಟೆ ಹಾಡಿಯ ಪತ್ನಿ ರಶ್ಮಿತಾ, ಕುಟುಂಬದವರು, ಆತನ ಸ್ನೇಹಿತರ ಗೋಳು ಹೇಳತೀರದಾಗಿತ್ತು.

ಹುಲಿ ಸೆರೆಗೆ ಒತ್ತಾಯ, 50 ಲಕ್ಷ ಪರಿಹಾರಕ್ಕೆ ಆಗ್ರಹ: ಕಳೆದ 2 ವರ್ಷಗಳಿಂದಲೂ ಈ ಭಾಗದಲ್ಲಿ ಹುಲಿ ಪ್ರತ್ಯಕ್ಷವಾಗಿ ಸಾಕಷ್ಟು ಜಾನುವಾರುಗಳನ್ನು ಬಲಿ ಪಡೆದಿದೆ. ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸೆರೆ ಹಿಡಿಯುವಲ್ಲಿ ವಿಫಲರಾಗಿ ದ್ದಾರೆ. ಈಗಲಾದರೂ ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಬೇಕು. ಅಲ್ಲದೇ ಹರೀಶನ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರದ ಜೊತೆಗೆ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ನೀಡಬೇಕು ಎಂದು ಗುರುಪುರ ಗ್ರಾಪಂ ಮಾಜಿ ಅಧ್ಯಕ್ಷ ಪ್ರಶಾಂತ್ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ತಲ್ಲಣ ಸಾಧ್ಯತೆ

ಮುಂಬರುವ 2028ರಲ್ಲಿ ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆ ವರೆಗೂ ಕೇಂದ್ರದಲ್ಲಿ ಸಚಿವರಾಗಿದ್ದುಕೊಂಡು ಕಾರ್ಯನಿರ್ವಹಿಸಿ, ರಾಜ್ಯ ರಾಜಕಾರಣದಲ್ಲಿ ಮಧ್ಯಪ್ರವೇಶ ಬೇಡ ಎಂದಿದ್ದಾರೆ. 2028ರಲ್ಲಿ ನಿಮಗೆ ಒಳ್ಳೆಯ ದಿನಗಳು ಬರುವ ಸಾಧ್ಯತೆ ಇದ್ದು, ರಾಜ್ಯದಲ್ಲಿನ ಜನವಿರೋಧಿ ಸರ್ಕಾರ ತೆಗೆಯುವಲ್ಲಿ ತಾಳ್ಮೆ ಕಳೆದುಕೊಳ್ಳದೆ ಸಹಕರಿಸಿ ಎಂಬ ಸಂದೇಶವನ್ನು ಆರ್‌ಎಸ್‌ಎಸ್ ರವಾನಿಸಿದೆ.

ಹಿರಿಯರ ಮಾತು ಆಲಿಸಿದ ಕುಮಾರ ಸ್ವಾಮಿ, ಬಿಜೆಪಿ, ಆರ್‌ಎಸ್‌ಎಸ್ ಸಲಹೆ ಗೌರವಿಸುತ್ತೇನೆ. ನೀವು ಹೇಳಿದಂತೆ ನಡೆದುಕೊಳ್ಳುವೆ. ಆದರೆ, ಶಿವಕುಮಾರ್ ವಿಚಾರದಲ್ಲಿ ವೈಯಕ್ತಿಕ ರಾಜಕಾರಣ ಮುಂದುವರೆಯುತ್ತದೆ. ಮೈತ್ರಿ ಸರ್ಕಾರಕ್ಕೆ ನನ್ನಿಂದ ತೊಂದರೆ ಉಂಟಾಗದು ಎಂದು ಮಾತು ನೀಡಿ ದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಎಲ್ಲದಕ್ಕೂ ಸಜ್ಜಾಗಿರಿ

ಆರೋಗ್ಯ ಇಲಾಖೆ ಸಿಬ್ಬಂದಿ ರಜಾ ಹಾಕಿ ತೆರಳದೆ ಕೇಂದ್ರ ಸ್ಥಾನದಲ್ಲಿಯೇ ಇದ್ದು ಕಾರ್ಯ ನಿರ್ವಹಿಸಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಈಗಾಗಲೇ ಪಾಲಿಸುತ್ತಿದ್ದೇವೆ. ರೂಪಾಂತರಿ ಕೊರೊನಾ ವೈರಾಣುವಿಗೆ ಸಂಬಂಧಿಸಿದಂತೆ ರೋಗ ನಿಯಂತ್ರಣ ಮುನ್ನೆಚ್ಚರಿಕೆಯಾಗಿ ವ್ಯಾಕ್ಸಿನ್‌ಗಳನ್ನು ಸಿದ್ದವಾಗಿಟ್ಟುಕೊಳ್ಳಲು ನಿರ್ದೇಶನ ನೀಡಿದರು.

ಸಾಮಾಜಿಕ ಮಾಧ್ಯಮಗಳ ಮೂಲಕ ಕಾಲ ಕಾಲಕ್ಕೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಸೂಚಿಸಿದರು. ವೆಂಟಿಲೇಟರ್, ಆಕ್ಸಿಜನ್, ಔಷಧ ಸೇರಿ ಇತ್ಯಾದಿ ಅಗತ್ಯಗಳನ್ನು ಸಿದ್ದಪಡಿಸಿಟ್ಟುಕೊಳ್ಳಿ. ವಯಸ್ಸಾದವರು, ಗರ್ಭಿಣಿಯರು, ಹೃದಯ ಸಂಬಂಧಿ ಸಮಸ್ಯೆ, ಶ್ವಾಸಕೋಶ ಸಮಸ್ಯೆ ಇರುವವರು ಮುನ್ನೆಚ್ಚರಿಕೆ ಕ್ರಮವಾಗಿ ಮಾಸ್ಕ್ ಧರಿಸುವುದು ಒಳ್ಳೆಯದು. ಈ ಬಗ್ಗೆ ಅರಿವು ಮೂಡಿಸಲು ಸೂಚಿಸಿದರು.

ಪ್ರತೀ ವಾರ ಅಥವಾ ಅಗತ್ಯ ಬಿದ್ದರೆ ಮೂರು ದಿನಕ್ಕೊಮ್ಮೆ ಪರಿಸ್ಥಿತಿಯ ಪರಿಶೀಲನೆ ನಡೆಸುತ್ತಾ ತೀವ್ರ ನಿಗಾ ಇಡಬೇಕು. ಗರ್ಭಿಣಿಯರಲ್ಲಿ ಆರೋಗ್ಯ ಸಮಸ್ಯೆ ಕಂಡುಬಂದರೆ, ಅವರನ್ನು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ವರ್ಗಾಯಿಸುವುದನ್ನು ನಿಲ್ಲಿಸಿ, ಎಲ್ಲಾ ಆಸ್ಪತ್ರೆಗಳಲ್ಲೂ ಅಗತ್ಯ ವ್ಯವಸ್ಥೆ ಮಾಡಿಕೊಂಡಿರಬೇಕು ಎಂದು ಅವರು ಸಲಹೆ ಮಾಡಿದರು.

ಶೀತ, ನೆಗಡಿ, ಜ್ವರ ಇರುವ ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸದಿರುವುದು ಆರೋಗ್ಯಕರ. ಶಾಲೆಗಳೂ ಈ ಬಗ್ಗೆ ಗಮನ ಹರಿಸಿ ಶೀತ, ನೆಗಡಿ ಇರುವ ಮಕ್ಕಳನ್ನು ವಾಪಸ್ ಪೋಷಕರ ಮೂಲಕ ಮನೆಗೆ ಕಳುಹಿಸಬೇಕು. ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕೋವಿಡ್ ಕಾರ್ಯಪಡೆಯ ಮುಖ್ಯಸ್ಥರಿಂದ ಮಾಹಿತಿ ಪಡೆದ ಅವರು, ಕಳೆದ ಜನವರಿಯಿಂದಲೂ ಕೊರೊನಾ ಪ್ರಕರಣಗಳು ಅಲ್ಲಲ್ಲಿ ಒಂದೂ ಎರಡು ಕಂಡುಬರುತ್ತಿದ್ದು, ಮೇ ತಿಂಗಳಲ್ಲಿ ಉಲ್ಬಣವಾಗಿದ್ದು ಈ ತಿಂಗಳ ನಾಲ್ಕನೇ ವಾರಕ್ಕೆ 62 ಪ್ರಕರಣಗಳು ವರದಿಯಾಗಿವೆ. ಆದರೆ ಗಂಭೀರ ಎನ್ನುವಂತಹ ಪ್ರಕರಣಗಳ ಸಂಖ್ಯೆ ಒಂದು ಮಾತ್ರ ಇದೆ ಎಂದರು.

ನಾಳೆಯಿಂದ ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದ 20ನೇ ವಾರ್ಷಿಕೋತ್ಸವ



ದೇವಾಲಯದಲ್ಲಿರುವ ಶ್ರೀ ಸಪ್ತಮಾತೃಕಾ ದೇವಿಯರ ಮೂಲ ಪ್ರತಿಮೆಗಳು

ಮೈಸೂರು, ಮೇ 26– ಮೈಸೂರಿನ ವಿಜಯನಗರ ಮೂರನೇ ಹಂತ, 6ನೇ ಮುಖ್ಯರಸ್ತೆಯ ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದ 20ನೇ ವಾರ್ಷಿಕೋತ್ಸವದ ಅಂಗವಾಗಿ ಮೇ 28ರಿಂದ 31ರವರೆಗೆ ವಿಶೇಷ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮೇ 28ರಂದು ಬೆಳಗ್ಗೆ ದೇವಸ್ಥಾನದ ಆವರಣದಲ್ಲಿ ಸಹಸ್ರ ಮೋದಕ ಹೋಮ ನೆರವೇರಲಿದೆ. ಮೇ 29ರಂದು ಬೆಳಗ್ಗೆ 8ಕ್ಕೆ ಶ್ರೀ ರುದ್ರಏಕಾದಶನಿ ಹೋಮ ಮತ್ತು ಮೇ 30ರಂದು ಬೆಳಗ್ಗೆ 8 ಗಂಟೆಗೆ ಶ್ರೀ ನವ ಚಂಡಿಕಾ ಹೋಮ ಹಮ್ಮಿಕೊಳ್ಳಲಾಗಿದೆ. ಧಾರ್ಮಿಕ ಸಮಾರಂಭದಲ್ಲಿ ಶೃಂಗೇರಿ ಶಂಕರ ಮಠದ ವೇದ ವಿದ್ವಾಂಸರು ಮತ್ತು ಋತ್ವಿಜರು ನೇತೃತ್ವ ವಹಿಸಲಿದ್ದಾರೆ. ಶೃಂಗೇರಿ ಪೀಠದ ಶ್ರೀ ಜಗದ್ಗುರುಗಳ ಆದೇಶ ಮತ್ತು ಅನುಗ್ರಹದಿಂದ ಎಲ್ಲ ವಿಧಿ, ವಿಧಾನಗಳು ನೆರವೇರಲಿವೆ.


ಮೇ 31ರಂದು ಬೆಳಗ್ಗೆ 9.30ಕ್ಕೆ ದೇವಿ ಸನ್ನಿಧಿಯಲ್ಲಿ ಮಕ್ಕಳಿಗೆ ಸಾಮೂಹಿಕ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಯಲಿದೆ. ಇದೇ ವೇಳೆ 1 ಸಾವಿರ ಬಡ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ಸೇರಿದಂತೆ ಹಲವಾರು ಬರವಣಿಗೆಯ ಸಾಮಗ್ರಿಗಳನ್ನು ವಿತರಿಸಲಾಗುವುದು. 20ನೇ ವಾರ್ಷಿಕೋತ್ಸವದ ಅಂಗವಾಗಿ ದೇವಾಲಯದಲ್ಲಿ ಪ್ರತಿ ಸಪ್ತಮಿಯಂದು ಉಚಿತ ಅನ್ನದಾನ ಸೇವೆ ಆರಂಭಿಸಲಾಗಿದೆ. 4 ದಿನಗಳ ಕಾರ್ಯಕ್ರಮಕ್ಕೆ ಎಲ್ಲ ಸಮುದಾಯದ ದೇವಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ದೇವಾಲಯದ ಟ್ರಸ್ಟಿ ಭಾಸ್ಕರ ವಿನಂತಿಸಿದ್ದಾರೆ.

ಬಸವ ಜಯಂತಿ



ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಮಹಾಸಭಾದ ನಿರ್ದೇಶಕರಾದ ಹಡಜನ ಟಿ.ಲಿಂಗರಾಜು, ಲಲಿತಾದ್ರಿಪುರ ಎಲ್.ಎಸ್.ಮಹದೇವ ಸ್ವಾಮಿ, ದಾರಿಪುರ ಡಿ.ಚಂದ್ರಶೇಖರ್, ಚಿನ್ನಂಬಳ್ಳಿ ಸಿ.ಆರ್.ನಟರಾಜು, ಡಾ.ಕೆ.ವಸಂತ ಕುಮಾರ್, ಕೆ.ಆರ್.ಬ್ಯಾಂಕ್ ನಿರ್ದೇಶಕರಾದ ನಂ.ಸಿದ್ದಪ್ಪ, ಗುರುಸ್ವಾಮಿಶಿವಬಸಪ್ಪ, ದೂರ ರಾಜಶೇಖರ್, ವೃಷಬೇಂದ್ರ, ಬನ್ನಾರಿ ಮಹೇಶ್, ಇಮ್ಮಾವು ದಕ್ಷಿಣಾಮೂರ್ತಿ, ಹಿನಕಲ್ ಪ್ರಕಾಶ್, ಅಲನಹಳ್ಳಿ ಮಹದೇವಸ್ವಾಮಿ, ನಾಗೇಶ್ ಹಾಜರಿದ್ದರು.

ವಚನ ಗಾಯನ



ನಮ್ಮ ಬಸವ ಜಯಂತಿ 2025ರ ಅಂಗವಾಗಿ ಕಲಾಮಂದಿರದಲ್ಲಿ ಮೇ 25ರ ಸಂಜೆ ಖ್ಯಾತ ಹಿಂದುಸ್ಥಾನಿ ಗಾಯಕರಾದ ಉಸ್ತಾದ್ ಫಯಾಜ್ ಖಾನ್ ವಚನ ಗಾಯನ ನಡೆಸಿಕೊಟ್ಟರು. ವೀರಭದ್ರಯ್ಯ ಹಿರೇಮಠ್–ಹಾರ್ಮೋನಿಯಂ, ರಮೇಶ್ ಧನುರ್–ತಬಲ ಸಹಕಾರ ನೀಡಿದರು. ಶೃತಿಯಲ್ಲಿ ಋತಿಕ್, ತಾಳದಲ್ಲಿ ಸುಚೇಂದ್ರ ಇದ್ದರು.

ನಾಳೆ ಬಿಳಿಗಿರಿರಂಗನಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರ ಸಮಾರೋಪ

ಮೈಸೂರು: ಸುತ್ತೂರು ಶ್ರೀ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಬಿಳಿಗಿರಿರಂಗನ ಬೆಟ್ಟದಲ್ಲಿ ಮೇ 23ರಿಂದ ನಡೆಯುತ್ತಿರುವ ಜೀವನೋತ್ಸಾಹ ಶಿಬಿರದ ಸಮಾರೋಪ ಸಮಾರಂಭ ಮೇ 28ರಂದು ಬೆಳಗ್ಗೆ 11.30 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ. ಮೈಸೂರು ದಕ್ಷಿಣ ವಲಯದ ಡಿಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಸಮಾರೋಪ ಭಾಷಣ ಮಾಡಲಿದ್ದು, ಚಾಮರಾಜನಗರ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಧ್ಯಕ್ಷತೆ ವಹಿಸಲಿದ್ದಾರೆ. ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ.ಹೀರಾಲಾಲ್ ಮತ್ತು ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿಪ್ರಿಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ರಾಜ್ಯಮಟ್ಟದ ಭೋವಿ ಪ್ರೀಮಿಯರ್ ಕ್ರಿಕೆಟ್ ಲೀಗ್‌ನ 8ನೇ ಆವೃತ್ತಿ

ತುಮಕೂರಿನ ಅಶ್ವಮೇಧ ತಂಡಕ್ಕೆ ಭೋವಿ ಯುವಸಂಗಮ ಟ್ರೋಫಿ

ಭವಿಷ್ಯದ ನಾಯಕತ್ವ ರೂಪಿಸಲು ಇಂತಹ ಪಂದ್ಯಾವಳಿ ಸಹಕಾರಿ: ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅಭಿಮತ



ಭೋವಿ ಸಮುದಾಯದ ಯುವಕರ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ ಚಿತ್ರದುರ್ಗದ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು, ಮೇ 26(ಎಂಟಿವೈ)– ಭೋವಿ ಸಮುದಾಯಕ್ಕೆ ಭವಿಷ್ಯದ ನಾಯಕನ ರೂಪಿಸುವುದಕ್ಕಾಗಿ ಸಮುದಾಯದ ಯುವಶಕ್ತಿಯನ್ನು ಸಂಘಟಿಸಬೇಕು ಎಂದು ಚಿತ್ರದುರ್ಗದ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿ ರಸ್ತೆಯ ಮೈಸೂರು ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಭೋವಿ ಪ್ರೀಮಿಯರ್ ಕ್ರಿಕೆಟ್ ಲೀಗ್ 8ನೇ ಆವೃತ್ತಿ 'ಭೋವಿ ಯುವಸಂಗಮ' ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಭೋವಿ ಸಮುದಾಯ ಯುವಕರ ವಿಶಾಲ ದೃಷ್ಟಿಕೋನ ಆಧರಿಸಿ ಸಜ್ಜುಗೊಳಿಸಬೇಕಾದ ಅಗತ್ಯವಿದೆ. ಸಮಾಜ ಸೇವೆಯಲ್ಲಿ ಉದಯೋನ್ಮುಖ ನಾಯಕರ ಹುಡುಕಾಟಕ್ಕಾಗಿ ಆರಂಭಿಸಲಾದ ಈ ಕ್ರೀಡಾಕೂಟ ಯುವಶಕ್ತಿ ಸಂಘಟನೆಯಾಗಿ ರೂಪುಗೊಂಡಿದೆ. ಒತ್ತಡದ ಬದುಕಿನಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ. ಪ್ರತಿದಿನ ಚೈತನ್ಯದಿಂದಿರಲು ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಿದೆ ಎಂದರು.

ಈ ಬದುಕು ಬಹಳ ಸ್ಪರ್ಧಾತ್ಮಕವಾದದ್ದು, ಇಲ್ಲಿ ಗೆಲ್ಲಲು ಸಾಕಷ್ಟು ಜನ ನಿತ್ಯ ಹೋರಾಟ ಮಾಡುತ್ತಲೇ ಇರುತ್ತಾರೆ. ಆದರೆ ಗೆಲುವೆಂಬುದು ಅಷ್ಟು ಸುಲಭವಾಗಿ ಯಾರ ಕೈಗೂ ಸಿಗದೇ ಆಟವಾಡಿಸುತ್ತದೆ. ಗೆಲ್ಲಲೇಬೇಕೆಂಬ ಅದಮ್ಯ ಆಸೆ. ಸತತ ಪ್ರಯತ್ನ ಹಾಗೂ ಪ್ರಾಮಾಣಿಕವಾದ ಹೋರಾಟದಿಂದ ಯಶಸ್ಸು ಪಡೆಯಬಹುದು. ಸೋಮಾರಿಗಳಿಗೆ, ಆಲಸ್ಯ ವ್ಯಕ್ತಿಗಳಿಗೆ ಗೆಲುವು ಒಲಿಯುವುದಿಲ್ಲ. ಜೀವನದಲ್ಲಿ ಉನ್ನತ ಗುರಿಯ ಬೆನ್ನೇರಿ ಹೊರಟಾಗ ಏಳುಬೀಳು ಅನುಭವಿಸುವುದು ಸಹಜ. ಉನ್ನತ ಮಟ್ಟದಲ್ಲಿರುವವರ ಜೀವನವನ್ನು ವಿಶ್ಲೇಷಿಸಿದರೆ ಬೀಳುಗಳನ್ನು ಕಾಣದೆ ತಮ್ಮ ಗುರಿಯನ್ನು ತಲುಪಿದಂತಹ ಉದಾಹರಣೆಗಳು ವಿರಳ. ಸಾಧನೆಯ ಹಾದಿಯಲ್ಲಿ ಕಷ್ಟಗಳನ್ನು ಎದುರಿಸಿದಾಗಲೇ ನಾವು ಮುಂದೆ ಬರುವ ಅನಿಶ್ಚಿತ ಸಂದರ್ಭಗಳನ್ನು ಧೈರ್ಯವಾಗಿ ಎದುರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ತುಮಕೂರಿನ ತಂಡಕ್ಕೆ ಗೆಲುವು: ಭೋವಿ ಸಮುದಾಯದ ಯುವಕರಿಗಾಗಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ತುಮಕೂರಿನ ಅಶ್ವಮೇಧ ತಂಡ ವಿಜೇತ ತಂಡವಾಗಿ ಹೊರಹೊಮ್ಮಿದರೆ, ವಿಎಸ್‌ಎಂ ರಾಯಲ್ಸ್ ತಂಡ ರನ್ನರ್ ಅಪ್.

ಟೂರ್ನಮೆಂಟ್‌ನಲ್ಲಿ ಮೈಸೂರು ಮಹಾರಾಜ, ಹುಣಸೂರಿನ ಶ್ರೀ ವೆಂಕಟೇಶ್ವರ ಕ್ರಿಕೆಟರ್, ತುಮಕೂರು ಹ್ಯಾಮರ್ಸ್, ಶಿವಮೊಗ್ಗದ ಎಎಫ್‌ಸಿ ಹಂಟರ್ಸ್, ಶಿವಮೊಗ್ಗ ವಾರಿಯರ್ಸ್, ಅರಸೀಕೆರೆಯ ಜಯ ಕರ್ನಾಟಕ, ತುಮಕೂರಿನ ಅಶ್ವಮೇಧ, ವಿಜಯಪುರದ ಆಲಮಟ್ಟಿ ವಿ.ಸಿ.ಸಿ ತಂಡ, ಬೆಂಗಳೂರಿನ ಎಪಿಸಿ ಮತ್ತು ಯುಎಸ್‌ಎಂ ರಾಯಲ್ಸ್, ಚಿಕ್ಕಬಳ್ಳಾಪುರದ ಆರ್‌ಎಚ್‌ಎಲ್, ಚಿತ್ರದುರ್ಗದ ಎಸ್‌ಆರ್‌ಸಿ, ನೆಲಮಂಗಲದ ಗಂಗೆ ಬಾಯ್ಸ್, ಶಿರಾ ಮುದ್ದಕನಹಳ್ಳಿ ಎಂಪಿಸಿಸಿ ಸೇರಿದಂತೆ 16 ತಂಡಗಳು ಪಾಲ್ಗೊಂಡಿದ್ದವು.

ಸಮಾರೋಪ ಸಮಾರಂಭದಲ್ಲಿ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮು, ಮುಖಂಡರಾದ ಪಾಲಾಕ್ಷಮೂರ್ತಿ, ಬಸವರಾಜ, ವಿಜಯಕುಮಾರ್, ಮೀನಾಕ್ಷ, ಶಿವು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅವಧಿ ಮೀರಿದ, ಕಳಪೆ ಗುಣಮಟ್ಟದ ಆಹಾರ ಪದಾರ್ಥ ಮಾರಾಟ

ನಾಲ್ಕು ಅಂಗಡಿ ಮಾಲೀಕರಿಗೆ 1.35 ಲಕ್ಷ ರೂ. ದಂಡ

ಮೈಸೂರು, ಮೇ 26(ಆರ್‌ಕೆ)– ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕಳಪೆ ಗುಣಮಟ್ಟ ಮತ್ತು ಅವಧಿ ಮೀರಿದ ಆಹಾರ ಪದಾರ್ಥ ಮಾರುತ್ತಿದ್ದ ನಾಲ್ವರು ಅಂಗಡಿ ಮಾಲೀಕರಿಗೆ 1.35 ಲಕ್ಷ ರೂ. ದಂಡ ವಿಧಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಹಾಗೂ ಮುಖ್ಯ ಆಹಾರ ಪ್ರಯೋಗಾಲಯದ ಅಧಿಕಾರಿಗಳು ತಪಾಸಣೆ ನಡೆಸಿದಾಗ ಕಳಪೆ ಗುಣಮಟ್ಟ ಹಾಗೂ ಅವಧಿ ಮೀರಿದ ಆಹಾರ ಪದಾರ್ಥ ತಯಾರಿಸಿ ಮಾರಾಟ ಮಾಡುತ್ತಿದ್ದುದು ಕಂಡುಬಂದಿದೆ.

ಹೆಬ್ಬಾಳಿನ ಕಮಲ್ ಫ್ರೂಟ್ಸ್, ಪ್ರೊಸೆಸ್ಸಿಂಗ್ ಮತ್ತು ಬೆವರೇಜಸ್‌ನವರು ಕಳಪೆ ಗುಣಮಟ್ಟದ ಟೊಮ್ಯಾಟೋ ಸಾಸ್ ತಯಾರಿಸಿ ಮಾರಾಟ ಮಾಡುತ್ತಿದ್ದರಿಂದ ಸೆಕ್ಷನ್ 51ರಡಿ 50,000 ರೂ., ಹಳೇ ಸಂತೆಪೇಟೆಯ ಅಂಬಿಕಾ ಟ್ರೇಡರ್ಸ್‌ಗೆ 10,000 ರೂ. ದಂಡ ವಿಧಿಸಲಾಗಿದೆ.

ಟಿಕೆ ಲೇಔಟ್‌ನ ಜಿಪಿ ಸ್ಪೆಷಾಲಿಟಿ ಫುಡ್ಸ್‌ಗೆ 25,000 ರೂ. ಹಾಗೂ ಅಕ್ಬರ್ ರಸ್ತೆಯ ವಿಶಾಲ್ ಬಾರ್ ಅಂಡ್ ರೆಸ್ಟೋರೆಂಟ್‌ಗೆ 50,000 ರೂ. ದಂಡ ವಿಧಿಸಲಾಗಿದೆ ಎಂದು ಅಂಕಿತ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದ್ಮಶ್ರೀ ಪುರಸ್ಕೃತ ಸಿ.ಎಸ್.ವೈದ್ಯನಾಥ್ ದಂಪತಿಗೆ ಸನ್ಮಾನ...



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದ ಸಂಸ್ಥೆಯ ಹಳೆಯ ವಿದ್ಯಾರ್ಥಿಯೂ ಆದ ಪದ್ಮಶ್ರೀ ಪುರಸ್ಕೃತ ಸಿ.ಎಸ್.ವೈದ್ಯನಾಥ್ ಹಾಗೂ ಶ್ರೀಮತಿ ರಾಧಾ ವೈದ್ಯನಾಥ್ ಅವರನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ಶಾರದಾವಿಲಾಸ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ. ಸುಬ್ರಾಯ, ಗೌರವ ಕಾರ್ಯದರ್ಶಿ ಆರ್.ನರಸಿಂಹ, ಆಡಳಿತ ಮಂಡಳಿ ಸದಸ್ಯರು ಹಾಗೂ ಮೈಸೂರು ವಿವಿ ವಿಶ್ರಾಂತ ಪ್ರಭಾರ ಉಪಕುಲಪತಿ ಪ್ರೊ.ಟಿ.ಕೆ.ಉಮೇಶ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ದೇವಿಕಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಅಸ್ತಮಾ ನಿರ್ವಹಣೆ ಕಾರ್ಯಾಗಾರ



ಮೈಸೂರು ಮಣಿಪಾಲ ಆಸ್ಪತ್ರೆಯಲ್ಲಿ ನಡೆದ ಅಸ್ತಮಾ ನಿರ್ವಹಣೆ ಕುರಿತ ಕಾರ್ಯಾಗಾರದಲ್ಲಿ ಅನೇಕ ತಜ್ಞರು ಪಾಲ್ಗೊಂಡಿದ್ದರು.

ಮೈಸೂರು, ಮೇ 26– ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಅಸ್ತಮಾವನ್ನು ಹೆಚ್ಚು ಪರಿಣಾಮಕಾರಿಯಾಗಿ ಅರ್ಥ ಮಾಡಿಕೊಳ್ಳುವ ಮತ್ತು ನಿರ್ವಹಿಸುವ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ರೋಗಿಗಳು ಮತ್ತು ಆರೈಕೆ ಪರಿಣಿತ ವೈದ್ಯಕೀಯ ತಜ್ಞರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಆಸ್ಪತ್ರೆಯ ಶ್ವಾಸಕೋಶಶಾಸ್ತ್ರ ವಿಭಾಗದ ತಜ್ಞ ಸಲಹೆಗಾರರಾದ ಡಾ.ಲಕ್ಷ್ಮಿನರಸಿಂಹನ್ ಮಾತನಾಡಿ, ಕಾರ್ಯಾಗಾರವು ವೈದ್ಯಕೀಯ ಒಳನೋಟ, ಪ್ರಾಯೋಗಿಕ ಸಲಹೆ ಮತ್ತು ಸಮುದಾಯದ ಭಾಗ ವಹಿಸುವಿಕೆಯನ್ನು ಒಳಗೊಂಡಿತ್ತು. ಅಸ್ತಮಾ ಹಾಗೂ ಔಷಧಿ ಸೇವನೆ ಬಗ್ಗೆ ಸಾಮಾನ್ಯವಾಗಿರುವ ತಪ್ಪು ಕಲ್ಪನೆಗಳನ್ನು ನಿವಾರಿಸುವುದು ಈ ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿತ್ತು. ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಮಾಲಿನ್ಯ, ಜನ ಜೀವನ ಶೈಲಿ ಮತ್ತು ಅಲರ್ಜಿಕಾರಕ ಅಂಶಗಳಿಗೆ ಒಡ್ಡಿಕೊಳ್ಳುತ್ತಿರುವುದರಿಂದ ಅಸ್ತಮಾ ಪ್ರಕರಣಗಳು ಆತಂಕಕಾರಿ ಮಟ್ಟದಲ್ಲಿ ಹೆಚ್ಚುತ್ತಿವೆ ಎಂದು ಅಭಿಪ್ರಾಯಪಟ್ಟರು.

ಅಸ್ತಮಾ ರೋಗವು ಉಲ್ಬಣವಾಗದಂತೆ ಹಾಗೂ ದೀರ್ಘಕಾಲೀನ ಸಮಸ್ಯೆಗಳನ್ನು ತಪ್ಪಿಸಲು ಶೀಘ್ರ ರೋಗ ನಿರ್ಣಯ ಮತ್ತು ಸಕಾಲಿಕ ವೈದ್ಯಕೀಯ ನೆರವನ್ನು ಪಡೆದುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಇದು ಒಂದು ದೀರ್ಘ ಕಾಲದ ಉಸಿರಾಟದ ಸಮಸ್ಯೆ. ಸಮಯೋಚಿತ ರೋಗನಿರ್ಣಯ, ವೈಯಕ್ತಿಕ ಚಿಕಿತ್ಸಾ ಯೋಜನೆಗಳು ಮತ್ತು ತಡೆಗಟ್ಟುವ ಕ್ರಮಗಳನ್ನು ಅನುಸರಿಸುವುದರಿಂದ, ರೋಗಿಗಳು ಆರೋಗ್ಯಪೂರ್ಣ ಜೀವನವನ್ನು ನಡೆಸಬಹುದು ಎಂದು ಹೇಳಿದರು.

ಅಸ್ತಮಾ ನಿಯಂತ್ರಿಸಲು ಅನೇಕ ಚಿಕಿತ್ಸಾ ವಿಧಾನಗಳು ಇಂದು ಲಭ್ಯವಿದೆ. ಔಷಧಿಗಳು ಹಾಗೂ ಇನ್‌ಹೇಲರ್‌ಗಳು ತೀವ್ರವಾದ ಅಸ್ತಮಾಗೆ ಪರಿಹಾರವಾಗಿದೆ. ಇನ್‌ಹೇಲರ್ ಬಗ್ಗೆ ಸಾಮಾನ್ಯವಾಗಿ ಜನರಲ್ಲಿ ತಪ್ಪು ಕಲ್ಪನೆ ಇದೆ. ಅದರ ಮೇಲಿನ ಅವಲಂಬನೆ ಹೆಚ್ಚಾಗುತ್ತದೆ ಎಂದು ಇನ್‌ಹೇಲರ್‌ಗಳ ಬಳಕೆಯನ್ನು ತಪ್ಪಿಸುತ್ತಾರೆ. ಇದು ಅತ್ಯಂತ ಅಪಾಯಕಾರಿ. ಇನ್‌ಹೇಲರ್‌ಗಳು ಶ್ವಾಸಕೋಶಕ್ಕೆ ನೇರವಾಗಿ ಔಷಧವನ್ನು ತಲುಪಿಸಲು ಅತ್ಯಂತ ಸಹಕಾರಿ. ಅದನ್ನು ಸರಿಯಾಗಿ ಬಳಸಿದರೆ, ಮಾತ್ರೆಗಳು ಅಥವಾ ಆಸ್ಪತ್ರೆಗೆ ದಾಖಲಾಗುವ ತುರ್ತು ಪರಿಸ್ಥಿತಿಗಳನ್ನು ಕಡಿಮೆ ಮಾಡಬಹುದು. ವ್ಯವಸ್ಥಿತ ವೈದ್ಯಕೀಯ ನೆರವು ಪಡೆದುಕೊಳ್ಳಬೇಕೇ ಹೊರತು, ಮನೆ ಮದ್ದುಗಳು ಮತ್ತು ಸ್ವಯಂ ಚಿಕಿತ್ಸೆಯ ಮೊರೆ ಹೋಗಬಾರದು ಎಂದು ಅವರು ಎಚ್ಚರಿಸಿದರು.

ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 26– ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಕೇಂದ್ರ ಸಂಘವು 2025ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://ksgeanews.blogspt.com/2025/05/sslc-puc-2025.html ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿ ಸಲ್ಲಿಸಲು ಬೇಕಾದ ಅರ್ಹತೆಗಳು: ವಿದ್ಯಾರ್ಥಿಯು 2025ರ SSLC & PUC ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ 90% ಕ್ಕಿಂತ ಹೆಚ್ಚಿನ ಅಂಕ ಪಡೆದು ತೇರ್ಗಡೆಯಾಗಿರಬೇಕು, ವಿದ್ಯಾರ್ಥಿಯ ತಂದೆ–ತಾಯಿ ರಾಜ್ಯ ಸರ್ಕಾರದ ಯಾವುದಾದರೊಂದು ಇಲಾಖೆಯಲ್ಲಿ ಖಾಯಂ ನೌಕರರಾಗಿರಬೇಕು, ನಿಗಮದ ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾ ಸಂಸ್ಥೆಗಳಲ್ಲಿ ನೇಮಕವಾಗಿರುವ ನೌಕರರು ಅರ್ಜಿ ಸಲ್ಲಿಸುವಂತಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9448208750 ಅನ್ನು ಸಂಪರ್ಕಿಸಬಹುದಾಗಿದೆ.

ಮೈಸೂರಲ್ಲಿ ದಿ ಕಾಲ್ ಆಫ್ ದಿ ಬ್ಲೂ ಕಾರ್ಯಕ್ರಮ



ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಇಂಡಿಯಾ ಯಮಹಾ ಮೋಟಾರ್ ಪ್ರೈ. ಲಿ. ಕಂಪನಿಯಿಂದ ಮೈಸೂರಿನ ಯಮಹಾ ಅಭಿಮಾನಿಗಳು ಮತ್ತು ರೈಡರ್‌ಗಳು ದಿ ಕಾಲ್ ಆಫ್ ದಿ ಬ್ಲೂ ವಾರಾಂತ್ಯ ಕಾರ್ಯಕ್ರಮ ನಡೆಸಿದರು. ಕಾರ್ಯಕ್ರಮದಲ್ಲಿ 700ಕ್ಕೂ ಹೆಚ್ಚು ಉತ್ಸಾಹಿ ರೈಡರ್‌ಗಳು, ಯಮಹಾ ಅಭಿಮಾನಿಗಳು ಪಾಲ್ಗೊಂಡಿದ್ದರು.

ದೇಶ - ವಿದೇಶ

ಪಾಕ್ ಸೇನಾ ಮುಖ್ಯಸ್ಥನಿಂದ ಪ್ರಧಾನಿ ಶರೀಫ್‌ಗೆ ಚೀನಾ ಮಿಲಿಟರಿ ಕಾರ್ಯಾಚರಣೆಯ ಫೋಟೋ ಗಿಫ್ಟ್!



ಇಸ್ಲಾಮಾಬಾದ್: ಇತ್ತೀಚಿಗೆ ನಡೆದ ಸೇನಾ ಕಾರ್ಯಾಚರಣೆ ವೇಳೆಯಲ್ಲಿ ಭಾರತದ ವಿರುದ್ಧ ಗೆಲುವು ಸಾಧಿಸಿರುವುದಾಗಿ ಬೊಗಳೆ ಪ್ರಚಾರ ನಡೆಸುತ್ತಿರುವ ಪಾಕಿಸ್ತಾನಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತೊಂದು ಮುಜುಗರ ಎದುರಾಗಿದೆ. ಹೈ ಪ್ರೊಫೈಲ್ ಔತಣ ಕೂಟದಲ್ಲಿ ಹಳೆಯದಾದ ಫ್ರೇಮ್ ಮಾಡಿದ ಫೋಟೋವೊಂದನ್ನು ಪ್ರಧಾನಿ ಶೆಹಬಾಜ್ ಶರೀಫ್ ಅವರಿಗೆ ಗಿಫ್ಟ್ ಆಗಿ ನೀಡಿದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಜನರಲ್ ಅಸಿಮ್ ಮುನೀರ್ ಅವರನ್ನು ಪಾಕಿಸ್ತಾನ ಸೇರಿದಂತೆ ವಿಶ್ವಾದ್ಯಂತ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡಲಾಗುತ್ತಿದೆ. ಇದು 4 ವರ್ಷ ಹಳೆಯದಾದ ಚೀನಾ ಮಿಲಿಟರಿ ಕಾರ್ಯಾಚರಣೆಯ ಫೋಟೋ ಎಂಬುದು ಕಂಡುಬಂದಿದೆ. ಚೀನೀ ಪೀಪಲ್ಸ್ ಲಿಬರೇಶನ್ ಆರ್ಮಿ ಕಾರ್ಯಾಚರಣೆ ಫೋಟೋಗಳನ್ನು ನೇರವಾಗಿ ತೆಗೆದುಹಾಕಲಾಗಿದೆ ಎಂದು ಬಳಕೆದಾರರು ಹೇಳಿದ್ದು, ಆಪರೇಷನ್ ಬನ್ಯಾನ್ ಕಾರ್ಯಾಚರಣೆ ಕುರಿತ ಪಾಕಿಸ್ತಾನದ ದೃಢತೆಯನ್ನು ಪ್ರಶ್ನಿಸುತ್ತಿದ್ದಾರೆ.

ಪಾಕಿಸ್ತಾನ ಪರ ಬೇಹುಗಾರಿಕೆ: ಸಿಆರ್‌ಪಿಎಫ್ ಯೋಧನನ್ನು ಬಂಧಿಸಿದ ಎನ್‌ಐಎ

ನವದೆಹಲಿ: ಪಾಕಿಸ್ತಾನ ಗುಪ್ತಚರ ಅಧಿಕಾರಿಗಳೊಂದಿಗೆ ಸೂಕ್ಷ್ಮ ಮಾಹಿತಿ ಹಂಚಿಕೊಂಡ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಸಿಆರ್‌ಪಿಎಫ್ ಯೋಧನನ್ನು ಬಂಧಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.



ಬಂಧಿತ ಆರೋಪಿ ಮೋತಿ ರಾಮ್ ಜಾಟ್ ಬೇಹುಗಾರಿಕೆ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು ಮತ್ತು 2023ರಿಂದ ಪಾಕಿಸ್ತಾನ ಗುಪ್ತಚರ ಅಧಿಕಾರಿಗಳೊಂದಿಗೆ (ಪಿಐಒ) ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವರ್ಗೀಕೃತ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. ವಿವಿಧ ಮಾರ್ಗಗಳ ಮೂಲಕ ಅವರು ಪಿಐಒಗಳಿಂದ ಹಣ ಪಡೆದಿರುವುದನ್ನು ಎನ್‌ಐಎ ಪತ್ತೆ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎನ್‌ಐಎ ದೆಹಲಿಯಲ್ಲಿ ಮೋತಿ ರಾಮ್ ಅವರನ್ನು ಬಂಧಿಸಿದ್ದು, ವಿಚಾರಣೆ ನಡೆಸುತ್ತಿದೆ. ವಿಶೇಷ ನ್ಯಾಯಾಲಯವು ಮೋತಿ ರಾಮ್ ಅವರನ್ನು ಜೂನ್ 6 ರವರೆಗೆ ತನ್ನ ಕಸ್ಟಡಿಗೆ ನೀಡಿದೆ ಎಂದು ಎನ್‌ಐಎ ತಿಳಿಸಿದೆ.

ಬಾಂಗ್ಲಾ ಮಹಿಳೆಯರನ್ನು ಮದುವೆಯಾಗದಂತೆ ತನ್ನ ಪ್ರಜೆಗಳಿಗೆ ಚೀನಾ ಎಚ್ಚರಿಕೆ

ಚೀನಾ: ಢಾಕಾದಲ್ಲಿರುವ ಚೀನಾದ ರಾಯಭಾರ ಕಚೇರಿಯು ಬಾಂಗ್ಲಾದೇಶದ ಮಹಿಳೆಯರನ್ನು ಚೀನಾ ನಾಗರಿಕರು ಮದುವೆಯಾಗಬಾರದು ಎಂದು ಆದೇಶ ನೀಡಿದೆ. ಗಡಿಯಾಚೆಗಿನ ವಿವಾಹ ವ್ಯವಸ್ಥೆಗಳ ಬಗ್ಗೆ ಚೀನಾ ತನ್ನ ನಾಗರಿಕರಿಗೆ ತೀವ್ರ ಎಚ್ಚರಿಕೆ ನೀಡಿದೆ. ಬಾಂಗ್ಲಾದೇಶದಲ್ಲಿರುವ ಚೀನೀ ರಾಯಭಾರ ಕಚೇರಿ ಭಾನುವಾರ ಒಂದು ಸಲಹೆಯನ್ನು ನೀಡಿದ್ದು, ತನ್ನ ನಾಗರಿಕರು ಅಕ್ರಮ ಗಡಿಯಾಚೆಗಿನ ವಿವಾಹ ವ್ಯವಸ್ಥೆಗಳಿಂದ ದೂರವಿರಬೇಕು ಮತ್ತು ಆನ್‌ಲೈನ್ ವಿವಾಹ ಯೋಜನೆಗಳ ಬಗ್ಗೆ ಎಚ್ಚರದಿಂದಿರಬೇಕು ಎಂದು ಒತ್ತಾಯಿಸಿದೆ.

ನಿರ್ದಿಷ್ಟವಾಗಿ ಅಕ್ರಮ ಆನ್‌ಲೈನ್ ಮ್ಯಾಚ್ ಮೇಕಿಂಗ್ ಏಜೆಂಟ್ ಮತ್ತು ವಿದೇಶಿ ಮಹಿಳೆಯರನ್ನು ಮದುವೆಯಾಗುತ್ತಿರುವ ಅಪಾಯಕಾರಿ ಬೆಳವಣಿಗೆಯ ವಿರುದ್ಧ ಎಚ್ಚರಿಕೆ ನೀಡಿದೆ. ಚೀನೀ ಪ್ರಜೆಗಳು ಬಾಂಗ್ಲಾದೇಶದ ಅಕ್ರಮ ಮ್ಯಾಚ್‌ಮೇಕಿಂಗ್ ಬಲೆಗೆ ಬೀಳಬಾರದು, ಡೇಟಿಂಗ್ ಆಪ್‌ಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ಎಚ್ಚರಿಕೆ ನೀಡಲಾಗಿದೆ. ಬಾಂಗ್ಲಾದೇಶದಿಂದ ಮದುವೆ ಮಾಡಿಕೊಂಡು ಬರುವವರ ಸಂಖ್ಯೆ ಹೆಚ್ಚಾಗಿತ್ತು ಇದನ್ನು ಗಮನದಲ್ಲಿಟ್ಟುಕೊಂಡು ಬಾಂಗ್ಲಾದೇಶದಲ್ಲಿ ಮ್ಯಾಚ್ ಫಿಕ್ಸಿಂಗ್ ಏಜೆಂಟುಗಳ ದಂಧೆಯೇ ಶುರುವಾಗಿತ್ತು.

ವಾಂಟೆಡ್ ಕ್ರಿಮಿನಲ್ ಬಂಧನ ವೇಳೆ ಗುಂಡಿನ ದಾಳಿ; ಕಾನ್‌ಸ್ಟೇಬಲ್ ಸಾವು

ನೋಯ್ಡಾ: ಗಾಜಿಯಾಬಾದ್‌ನ ಮಸ್ಸೂರಿ ಪ್ರದೇಶದಲ್ಲಿ ತಡರಾತ್ರಿ ನಡೆದ ದಾಳಿಯಲ್ಲಿ ನೋಯ್ಡಾದ 32 ವರ್ಷದ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಘಟನೆ ನಡೆದಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.



ಮೃತ ಕಾನ್‌ಸ್ಟೇಬಲ್ ಸೌರಭ್ ಅವರು ನೋಯ್ಡಾದ ಹಂತ–III ಪೊಲೀಸ್ ಠಾಣೆಯ ತಂಡದಲ್ಲಿ ಒಬ್ಬರಾಗಿದ್ದರು. 16 ಕ್ರಿಮಿನಲ್ ಪ್ರಕರಣಗಳನ್ನು ಹೊಂದಿದ್ದ ಅಪರಾಧಿ ಖಾದಿರ್‌ನನ್ನು ಬಂಧಿಸಲು ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಹಂತ–III ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ನಂತರ ಈ ಕಾರ್ಯಾಚರಣೆ ನಡೆದಿದೆ. ಪೊಲೀಸ್ ವಕ್ತಾರರ ಪ್ರಕಾರ ತಂಡವು ಖಾದಿರ್‌ನನ್ನು ಯಶಸ್ವಿಯಾಗಿ ಪತ್ತೆಹಚ್ಚಿತು. ಆದರೆ ಖಾದಿರ್ ಮತ್ತು ಆತನ ಸಹಚರರು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಪೊಲೀಸ್ ತಂಡದ ಮೇಲೆ ಗುಂಡು ಹಾರಿಸಿ, ಕಲ್ಲು ಎಸೆದಿದ್ದಾರೆ. ಈ ವೇಳೆ ಕಾನ್‌ಸ್ಟೇಬಲ್ ಸೌರಭ್ ತಲೆಗೆ ಗುಂಡು ತಗುಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸೌರಭ್ ಅವರನ್ನು ತಕ್ಷಣ ಯಶೋದಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು.

ಬಲೂಚಿಗಳು ನಡೆಸಿದ ದಾಳಿಯಲ್ಲಿ 32 ಪಾಕಿಸ್ತಾನಿ ಸೈನಿಕರು ಬಲಿ

ಇಸ್ಲಾಮಾಬಾದ್: ಕರಾಚಿ–ಕ್ವೆಟ್ಟಾ ಬಳಿಯ ಖುಜ್ದಾರ್‌ನಲ್ಲಿನ ಝೀರೋ ಪಾಯಿಂಟ್, ಮಹಾಮಾರ್ಗ್ವಾರ್ ಲಷ್ಕರ್‌ಯ ತಫಾಯ್ವಾರ್ ಮೇಲೆ ಬಲೂಚಿಗಳು ನಡೆಸಿದ ದಾಳಿಯಲ್ಲಿ 32 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದು, ಹತ್ತಾರು ಸೈನಿಕರು ಗಂಭೀರ ಗಾಯಗೊಂಡಿದ್ದಾರೆ. ಪಾಕಿಸ್ತಾನದ ಗುಡ್ಡಗಾಡು ಪ್ರದೇಶಗಳಲ್ಲಿ ಭಯೋತ್ಪಾದಕ ದಾಳಿಗಳ ಸುದ್ದಿ ಕೇಳುವುದು ಸಾಮಾನ್ಯ, ಆದರೆ ಈಗ ಅಂತಹ ಘಟನೆಗಳು ಪಾಕಿಸ್ತಾನದ ದೊಡ್ಡ ನಗರಗಳಲ್ಲಿಯೂ ನಡೆಯುತ್ತಿವೆ. ಇದರಿಂದಾಗಿ ಅಲ್ಲಿ ಒಂದು ಭದ್ರತಾ ಪ್ರಶ್ನಾರ್ಥಕ ಚಿಹ್ನೆ ಇದೆ.



ಕರಾಚಿ–ಕ್ವೆಟ್ಟಾ ಹೆದ್ದಾರಿಯ ಬಳಿ ನಿಲ್ಲಿಸಲಾಗಿದ್ದ ಕಾರಿನಲ್ಲಿ ಸ್ಫೋಟಕಗಳಿದ್ದು ಅದು ಪಾಕಿಸ್ತಾನಿ ಮಿಲಿಟರಿ ವಾಹನಗಳು ಹೋಗುತ್ತಿದ್ದಾಗ ಸ್ಫೋಟಗೊಂಡು 32 ಪಾಕ್ ಸೈನಿಕರು ಮೃತಪಟ್ಟಿದ್ದಾರೆ. ಇನ್ನು ಅಧಿಕಾರಿಗಳೇ ಭದ್ರತಾ ದೋಷಗಳನ್ನು ಮರೆಮಾಡಲು ಪ್ರಯತ್ನಿಸುತ್ತಿದ್ದಾರೆ. ಆಂತರಿಕ ಮೂಲಗಳ ಪ್ರಕಾರ, ಅಧಿಕಾರಿಗಳು ಈ ಘಟನೆಯನ್ನು ಶಾಲಾ ಬಸ್ ದಾಳಿ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಮೇ 21ರಂದು ಸಹ ರೋಜಿ ಕರಾಚಿ–ಕ್ವೆಟ್ಟಾ ಹೆದ್ದಾರಿಯಲ್ಲಿ ಮತ್ತೊಂದು ದಾಳಿ ನಡೆದಿತ್ತು.

ಪ್ರವಾಸಿಗರು ನೀರಿಗೆ ಇಳಿಯದಂತೆ ಆದೇಶ

ಮಡಿಕೇರಿ: ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುತ್ತಿರುವ ಕಾರಣ ಪ್ರವಾಸಿಗರು ನದಿ ನೀರಿಗಿಳಿಯದಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ. ಮೇ 23ರಂದು ನಡೆಸಲಾದ ವಿಪತ್ತು ನಿರ್ವಹಣಾ ಸಭೆಯ ನಿರ್ಧಾರದಂತೆ ಈ ಆದೇಶ ಹೊರಡಿಸಲಾಗಿದೆ. ಮುಂದಿನ ಆದೇಶದವರೆಗೆ ಪ್ರವಾಸಿಗರು ನದಿಗೆ ಇಳಿಯುವುದು, ಈಜುವುದು ಸೇರಿದಂತೆ ಅನಧಿಕೃತವಾಗಿ ಸಾಹಸ ಚಟುವಟಿಕೆ ನಡೆಸದಂತೆ ಸೂಚಿಸಿದ್ದಾರೆ.

ಗರ್ಭಿಣಿ ಎಮ್ಮೆ ಕಾಣೆ



ವಿರಾಜಪೇಟೆ, ಮೇ.26– ಸಮೀಪದ ಐಮಂಗಲ ಗ್ರಾಮದ ಕುಂಡ್ಯಂಡ ಪೊನ್ನಪ್ಪ ಕಸ್ತೂರಿ ಎಂಬುವರ 7 ವರ್ಷ ಪ್ರಾಯದ ಗರ್ಭಿಣಿ ಎಮ್ಮೆ ಕಾಣೆಯಾಗಿದೆ. ಪೊನ್ನಪ್ಪರಿಗೆ ಸೇರಿದ ಗದ್ದೆಯಲ್ಲಿ ಮೇಯಲೆಂದು ಹಗ್ಗದಿಂದ ಕಟ್ಟಲಾಗಿತ್ತು ನಂತರ ಬಂದು ನೋಡಿದಾಗ ಕಟ್ಟಿದ ಜಾಗದಲ್ಲಿ ಮತ್ತು ಅಕ್ಕ ಪಕ್ಕದಲ್ಲಿ ಹುಡುಕಿದರು ಎಮ್ಮೆ ಕಂಡುಬಂದಿಲ್ಲ ಈಗಾಗಲೇ ಎರಡು ದಿನ ಕಳೆದಿದ್ದು ಯಾರಿಗಾದರು ಕಂಡು ಬಂದಲ್ಲಿ ಕೂಡಲೆ ಮೊ: 9481602580 ಗೆ ಕರೆ ಮಾಡುವಂತೆ ಕೋರಿದ್ದಾರೆ.

ಮರ ಬಿದ್ದು ಸ್ಕೂಟಿ, ಕಾರು ಜಖಂ



ಮಡಿಕೇರಿ,ಮೇ.26– ಜಿಲ್ಲೆಯಾದ್ಯಂತ ಭಾರಿ ಗಾಳಿ ಮಳೆಗೆ ಮರವೊಂದು ಶೆಡ್ ಮೇಲೆ ಬಿದ್ದು ಸ್ಕೂಟಿ ಹಾಗೂ ಕಾರು ಜಖಂಗೊಂಡಿರುವ ಘಟನೆ ಹೊರವಲಯದ ತಾಳತ್‌ಮನೆಯ ಬಳಿ ನಡೆದಿದೆ. ತಾಳತ್‌ಮನೆ ನಿವಾಸಿ ಯತೀಶ್ ರೈ ಎಂಬುವರಿಗೆ ಸೇರಿದ ಸ್ಕೂಟಿ ಹಾಗೂ ಕಾರು ಮರ ಬಿದ್ದ ಪರಿಣಾಮ ಎರಡೂ ವಾಹನಗಳು ಸಂಪೂರ್ಣವಾಗಿ ಜಖಂಗೊಂಡಿದೆ.

ನಿರಂತರ ಮಳೆಗೆ ವಿಶ್ವನಾಥ ದೇವಸ್ಥಾನದ ತಡೆಗೋಡೆ ಕುಸಿತ

ಕುಶಾಲನಗರ, ಮೇ 26– ಚಿಕ್ಲಿಹೊಳೆ ಜಲಾಶಯ ಮೂರು ದಿನಗಳಿಂದ ನಿರಂತರ ಸುರಿಯುತ್ತಿರುವ ಮಳೆಗೆ ಮೈದುಂಬಿ ನಿಂತಿದೆ. ಅಣೆಕಟ್ಟೆ ತುಂಬಿರುವುದರಿಂದ ಹೆಚ್ಚುವರಿ ನೀರು ಜಲಾಶಯದ ಅರ್ಧ ಚಂದ್ರಾಕೃತಿಯ ತಡೆಗೋಡೆಯ ಮೇಲಿಂದ ಹಾಲು ನೊರೆಯಂತೆ ಹರಿಯುತ್ತಿದೆ.

ಜಲಾಶಯದ ಹಿನ್ನೀರು ಪ್ರದೇಶವು ಒಂದೆಡೆ ದಟ್ಟ ಕಾಡು ಹಾಗೂ ಮತ್ತೊಂದೆಡೆ ಕಾಫಿ ತೋಟಗಳ ಸಾಲಿನಿಂದ ಆವೃತಗೊಂಡಿದೆ.

ತಡೆಗೋಡೆ ಕುಸಿತ : ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಂಗಸಮುದ್ರ ಗ್ರಾಮದ ಮಾವಿನಹಳ್ಳ ಹಾಡಿಗೆ ಹೋಗುವ ಕಿರು ಸೇತುವೆ ತಡೆಗೋಡೆಯ ಭಾಗ ಕುಸಿತಗೊಂಡಿದೆ. ಮಾವಿನ ಹಳ್ಳ ಗಿರಿಜನ ಹಾಡಿಗೆ ಹೋಗುವ ಮಾರ್ಗವಾದ ಕಿರುಸೇತುವೆ ತಡೆಗೋಡೆ ಕುಸಿದಿರುವುದು ಹಾಡಿ ನಿವಾಸಿಗಳಿಗೆ ಮತ್ತು ಸಾರ್ವಜನಿಕರಿಗೆ ದಿನನಿತ್ಯ ಆತಂಕದಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಸ್ಥಳಕ್ಕೆ ತಹಶೀಲ್ದಾರ್ ಕಿರಣ್ ಗೌರಯ್ಯ, ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ ಗ್ರಾಪಂ ಸದಸ್ಯ ಆರ್.ಕೆ.ಚಂದ್ರ, ಮಾವಾಜಿ ರಕ್ಷಿತ್, ಗಿರಿಜಮ್ಮ, ಜಿಪಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಫಯಾಜ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜಶೇಖರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ನಿರಂತರ ಸುರಿಯುತ್ತಿರುವ ಮಳೆಗೆ ಚಿಕ್ಲಿಹೊಳೆ ಜಲಾಶಯ ಮೈದುಂಬಿ ಹರಿಯುತ್ತಿದೆ.

ಮಾದಾಪಟ್ಟಣ ಗ್ರಾಮದಲ್ಲಿರುವ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದ ಮುಂಭಾಗದ ತಡೆಗೋಡೆ ಮಳೆಯಿಂದ ಕುಸಿತಗೊಂಡಿದೆ. ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಆಗಮಿಸಿ ವೀಕ್ಷಿಸಿದರು. ಗ್ರಾಮಸ್ಥರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳನ್ನು ವಿನಂತಿಸಿಕೊಂಡಿದ್ದಾರೆ.

ಏರಿ ಒಡೆಯುವ ಭೀತಿ : ಗೊಂದಿಬಸವನಹಳ್ಳಿ ಗ್ರಾಮದ ರೊಂಡಕೆರೆ ಏರಿ ಒಡೆಯುವ ಭೀತಿ ಎದುರಾಗಿದೆ. ಕಳೆದ ಮಳೆಗಾಲದಲ್ಲಿ ಕೆರೆ ಏರಿ ಒಡೆದು ಅನಾಹುತ ಸೃಷ್ಟಿಯಾಗಿತ್ತು. ತಾತ್ಕಾಲಿಕವಾಗಿ ಮಣ್ಣು ತುಂಬಿ ಒಡೆದ ಸ್ಥಳ ಮುಚ್ಚಲಾಗಿತ್ತು. ಇದೀಗ ಮಳೆಗೆ ಮಣ್ಣು ಸಡಿಲಗೊಂಡು ಅಲ್ಲಲ್ಲಿ ಬಿರುಕು ಕಾಣಿಸಿಕೊಳ್ಳತೊಡಗಿದೆ. ಕೆರೆಯಲ್ಲಿ ನೀರು ತುಂಬುತ್ತಿದ್ದು, ಏರಿ ಒಡೆದರೆ ಒಮ್ಮೆಲೆ ನೀರು ಹೊರಬರುವ ಕಾರಣ ಕೆಳ ಪ್ರದೇಶಗಳು ಜಲಾವೃತಗೊಳ್ಳಲಿದೆ.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಬಿ. ಸುರೇಶ್ ನೇತೃತ್ವದಲ್ಲಿ ಮುಖ್ಯಾಧಿಕಾರಿ ಗಿರೀಶ್ ಹಾಗೂ ಸದಸ್ಯರು ಕಳೆದ ಮೂರು ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪರಿಶೀಲನೆ ನಡೆಸಿದರು. ಅಯ್ಯಪ್ಪಸ್ವಾಮಿ ದೇವಾಲಯ ಬಳಿ ಸಾಯಿ ಬಡಾವಣೆ, ಯೋಗಾನಂದ ಬಡಾವಣೆ, ದಂಡಿನಪೇಟೆ ಮತ್ತಿತರ ಕಡೆಗಳಲ್ಲಿ ಭೇಟಿ ನೀಡುವ ದರೊಂದಿಗೆ ಕೆರೆ ಏರಿ ಹಾನಿಗೊಳಗಾಗಿರುವ ಗೊಂದಿಬಸವನಹಳ್ಳಿ ರೊಂಡಕೆರೆಯನ್ನು ಪರಿಶೀಲನೆ ನಡೆಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್ ಮಾತನಾಡಿ, ಶಾಸಕ ಡಾ.ಮಂತರ್ ಗೌಡರ ನಿರ್ದೇಶನದಂತೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿ ಕಲೆಹಾಕಲಾಗಿದೆ. ಸಂಭಾವ್ಯ ಅಪಾಯ ತಪ್ಪಿಸಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಗಮನಹರಿಸಿ ಶಾಸಕರಿಗೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಪುರಸಭೆ ಸದಸ್ಯರಾದ ಜಿ.ಬಿ.ಜಗದೀಶ್, ಎಂ.ಎಂ.ಪ್ರಕಾಶ್, ವಿ.ಎಸ್.ಆನಂದ ಗೌಡ, ಸುರಯ್ಯಾಭಾನು, ಮಾಜಿ ಮುಖ್ಯಾಧಿಕಾರಿ ಗಿರೀಶ್, ಆರೋಗ್ಯ ನಿರೀಕ್ಷಕ ಉದಯ್ ಇತರರು ಪಾಲ್ಗೊಂಡಿದ್ದರು.



ಮಾದಾಪಟ್ಟಣ ಗ್ರಾಮದಲ್ಲಿರುವ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದ ಮುಂಭಾಗದ ತಡೆಗೋಡೆ ಮಳೆಯಿಂದ ಕುಸಿದಿದೆ.

ಮನೆ ಮೇಲೆ ಮರ ಬಿದ್ದು ಅತ್ತೆ, ಸೊಸೆಗೆ ಗಾಯ



ಭಾರಿ ಗಾತ್ರದ ಮರ ಬಿದ್ದು ಮನೆ ಭಾಗಶಃ ಜಖಂಗೊಂಡಿದೆ.

ಸುಂಟಿಕೊಪ್ಪ, ಮೇ 26– 7ನೇ ಹೊಸಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಲುಗುಲ್ಲಿ ಪೈಸಾರಿಯ ನಿವಾಸಿ ಮಹಮ್ಮದ್ ಎಂಬುವರ ಮನೆಯ ಮೇಲೆ ಇಂದು ಭಾರಿ ಗಾತ್ರದ ಮರ ಬಿದ್ದ ಪರಿಣಾಮ ಮನೆ ಭಾಗಶಃ ಜಖಂಗೊಂಡಿದ್ದು, ಮನೆ ಮಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸಮೀಪದ ತೋಟದಲ್ಲಿದ್ದ ದೊಡ್ಡ ಮರ ಭಾರೀ ಗಾಳಿ ಮಳೆಗೆ ಮನೆಯ ಮೇಲ್ಛಾವಣಿಯ ಮೇಲೆ ಬಿದ್ದಿದೆ. ಪರಿಣಾಮ ಮನೆಯಲ್ಲಿದ್ದ ಮಹಮದ್ ಪತ್ನಿ ಪಾತುಮ್ಮ ಹಾಗೂ ಮತ್ತಾನ ಪತ್ನಿ ಸಾನಿಯಾ ಎಂಬವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮುಂಭಾಗದಲ್ಲಿ ನಿಲ್ಲಿಸಿದ್ದ ಕಾರು ಜಖಂಗೊಂಡಿದೆ. ಇದರಿಂದ ಅಂದಾಜು ರೂ. 10 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ ಎಂದು ಮಹಮದ್ ಅವರು ಕಂದಾಯ ಇಲಾಖೆ, ಗ್ರಾಮ ಪಂಚಾಯಿತಿ ಹಾಗೂ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಸ್ಥಳಕ್ಕೆ ಶಾಸಕ ಡಾ.ಮಂತರ್‌ಗೌಡ, ತಹಶೀಲ್ದಾರ್ ಕಿರಣ್ ಜಿ.ಗೌರಯ್ಯ, ನಾಡ ಕಚೇರಿ ಪ್ರಭಾರ ಉಪ ತಹಶೀಲ್ದಾರ್ ಪ್ರಶಾಂತ್, ಗ್ರಾಪಂ ಅಧ್ಯಕ್ಷ ಇ.ಬಿ.ಜೋಸೆಫ್, ಅಭಿವೃದ್ಧಿ ಅಧಿಕಾರಿ ನಂದೀಶ್ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಳೆಯ ರಭಸಕ್ಕೆ ಜನ ಜೀವನ ಅಸ್ತವ್ಯಸ್ತ

ಮಡಿಕೇರಿ: ಜಿಲ್ಲೆಯಲ್ಲಿ ಮಳೆಯ ರಭಸ ಇಂದು ಕೊಂಚ ಕಡಿಮೆಯಾಗಿದ್ದರೂ, ಆಕ್ರೋಶ ಜನ ಜೀವನ ಅಸ್ತವ್ಯಸ್ತವಾಗಿದೆ. ಮಳೆ ಗಾಳಿಯ ತೀವ್ರತೆಗೆ ಹಾನಿ ಪ್ರಕರಣಗಳು ಮರುಕಳಿಸುತ್ತಿವೆ. ಕಾವೇರಿ ನದಿ ಪಾತ್ರದ ಪ್ರದೇಶ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಸಿದ್ದಾಪುರ ಬಳಿಯ ನೆಲ್ಯಹುದಿಕೇರಿ ಬಳಿಯ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದು ಕಡಗೋಡು ಬಳಿ ಪ್ರವಾಹ ಪರಿಸ್ಥಿತಿ ಕಂಡು ಬಂದಿದೆ. ಚೇರಂಬಾಣೆ ಬೇಂಗೂರು ಸಮೀಪದ ದೋಣಿಕಡವು ಗ್ರಾಮದಲ್ಲಿ ಕಾವೇರಿ ನದಿ ಪ್ರವಾಹ ಏರ್ಪಟ್ಟಿದ್ದು, ದೋಣಿ ಕಡವು ಗ್ರಾಮ ಸಂಪರ್ಕ ಕಡಿತವಾಗಿದ್ದು, ಸ್ಥಳದಲ್ಲಿ ಜಿಲ್ಲಾಡಳಿತ ದೋಣಿ ವ್ಯವಸ್ಥೆ ಮಾಡಿದೆ. ಮೂರ್ನಾಡು ಸಮೀಪದ ಬಲಮುರಿ ಕಿರು ಸೇತುವೆ ಕಾವೇರಿ ನದಿ ನೀರಿನಲ್ಲಿ ಮುಳುಗಿದ್ದು ಮೇಲಿನ ಸೇತುವೆ ಮೂಲಕ ವಾಹನ ಸಂಚಾರ ಸಾಗಿದ್ದು, ಸಂಚಾರ ವ್ಯತ್ಯಯ ಉಂಟಾಗಿಲ್ಲ. ಎರಡು ದಶಕಗಳ ಬಳಿಕ ಮೇ ತಿಂಗಳ ಮೂರನೇ ವಾರದಲ್ಲಿ ಇಂತಹ ಮಹಾ ಮಳೆ ಕಂಡು ಬಂದಿರುವುದು ಸೂಚನಾಗಿಯೇ ಜನರಲ್ಲಿ ಆತಂಕ ಮೂಡಿಸಿದೆ.

ಮುಳುಗಿದ ತ್ರಿವೇಣಿ ಸಂಗಮ: ಭಾಗಮಂಡಲ, ಬ್ರಹ್ಮಗಿರಿ ಬೆಟ್ಟ ಶ್ರೇಣಿ, ಚೇರಂಗಾಲ, ಕೋರಂಗಾಲ, ಸಣ್ಣಪುಲಿಕೋಟು, ದೊಡ್ಡಪುಲಿಕೋಟು ಮತ್ತಿತರ ಕಡೆಗಳಲ್ಲಿ ದಾಖಲೆಯ ಮಳೆ ಸುರಿದ ಪರಿಣಾಮ ಭಾಗಮಂಡಲ ತ್ರಿವೇಣಿ ಸಂಗಮದಲ್ಲಿ ಪ್ರವಾಹ ಏರ್ಪಟ್ಟಿದೆ. ತ್ರಿವೇಣಿ ಸಂಗಮ ನೀರಿನಲ್ಲಿ ಮುಳುಗಿದ್ದು, ನಾಗರಕಟ್ಟೆ ಅಶ್ವತ್ಥ ಕಟ್ಟೆವರೆಗೆ ನದಿ ನೀರು ಆವರಿಸಿದೆ. ಸಂಗಮಕ್ಕೆ ತೆರಳುವ ಮೆಟ್ಟಿಲ ಬಳಿ ಭಾಗಮಂಡಲ ಪೊಲೀಸರು ಬ್ಯಾರಿಕೇಡ್ ಅಳವಡಿಸಿ ನೀರಿಗೆ ಇಳಿಯುವುದನ್ನು ನಿಷೇಧಿಸಿದ್ದಾರೆ.

ಒಳ ಹರಿವು ಏರಿಕೆ: ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಒಳ ಹರಿವಿನಲ್ಲಿ ದಾಖಲೆಯ ಏರಿಕೆ ಕಂಡಿದೆ. ಜಲಾಶಯಕ್ಕೆ 1693 ಕ್ಯೂಸೆಕ್ ನೀರಿನ ಒಳ ಹರಿವು ದಾಖಲಾಗಿದ್ದರೆ, ನದಿಗೆ 100 ಕ್ಯೂಸೆಕ್ ನೀರನ್ನು ಹರಿದು ಬಿಡಲಾಗುತ್ತಿದೆ ಇದೇ ರೀತಿ ಮಳೆ ಮುಂದುವರೆದರೆ ಜೂನ್ ತಿಂಗಳ ಎರಡನೇ ವಾರದಲ್ಲಿ ಜಲಾಶಯ ಭರ್ತಿಯಾಗುವ ಸಾಧ್ಯತೆಗಳಿವೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಈಗಾಗಲೇ 2834.70 ಅಡಿ ನೀರಿನ ಸಂಗ್ರಹವಿದೆ.

ಭಾರೀ ವಾಹನಗಳ ಸಂಚಾರ ನಿಷೇಧಕ್ಕೆ ಆದೇಶ

ಮಡಿಕೇರಿ: ವಾಹನ ಸವಾರರು ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳ ಸುರಕ್ಷತೆಯ ದೃಷ್ಟಿಯಿಂದ ಜೂನ್ 6ರಿಂದ ಜುಲೈ 5ರವರೆಗೆ ಕೊಡಗು ಜಿಲ್ಲೆಯಲ್ಲಿ ಭಾರೀ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ. ಈ ಅವಧಿಯಲ್ಲಿ ಎಲ್ಲಾ ರೀತಿಯ ಮರದ ದಿಮ್ಮಿಗಳನ್ನು ಸಾಗಿಸುವ ಹಾಗೂ ವಾಹನಗಳು, 18,500 ಕೆ.ಜಿಗಿಂತ ಹೆಚ್ಚಿನ ಭಾರದ ಸರಕು ಸಾಗಿಸುವ ವಾಹನಗಳು, ಭಾರೀ ವಾಹನಗಳಾದ ಬುಲೆಟ್ ಟ್ಯಾಂಕರ್, ಶಿಪ್ ಕಾರ್ಗೋ, ಕಂಟೈನರ್ಸ್, ಲಾಂಗ್ ಚಾಸಿಸ್ ವಾಹನಗಳು ನಿಷೇಧದ ಆದೇಶಕ್ಕೆ ಒಳಪಡಲಿವೆ. ಅಡುಗೆ ಅನಿಲ, ಇಂಧನ, ಹಾಲು ಸಾಗಿಸುವ ವಾಹನಗಳು, ಸರಕಾರಿ ಕೆಲಸದ ನಿಮಿತ್ತ ಉಪಯೋಗಿಸಲ್ಪಡುವ ವಾಹನಗಳು, ಶಾಲಾ ಕಾಲೇಜು ಮತ್ತು ಸಾರ್ವಜನಿಕ ಪ್ರಯಾಣಿಕರ ಮಲ್ಟಿ ಆಕ್ಸಿಲ್ ಬಸ್‌ಗಳಿಗೆ ನಿಷೇಧದ ಆದೇಶದಿಂದ ವಿನಾಯಿತಿ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿ 275 ಹಾದು ಹೋಗುವ ಕುಶಾಲನಗರದಿಂದ ಸಂಪಾಜೆವರೆಗೆ ಚೆಕ್ ಪೋಸ್ಟ್ ಸ್ಥಾಪಿಸಿ ಅಗತ್ಯ ಸಿಬ್ಬಂದಿ ನಿಯೋಜಿಸಿ ದಿನದ 24 ಗಂಟೆ ನಿಗಾ ವಹಿಸುವಂತೆ ಸಂಬಂಧಿತ ಇಲಾಖೆಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ.

ಪ್ರವಾಹದಲ್ಲಿ ಬಸ್: ಪ್ರಯಾಣಿಕರು ಪಾರು



ಮಡಿಕೇರಿ: ಬೆಂಗಳೂರಿಗೆ ತೆರಳುತ್ತಿದ್ದ ಸಾರಿಗೆ ನಿಗಮಕ್ಕೆ ಸೇರಿದ ಬಸ್ಸೊಂದು ಪ್ರವಾಹದಲ್ಲಿ ಸಿಲುಕಿ ಪ್ರಯಾಣಿಕರನ್ನು ಸ್ಥಳೀಯರು ರಕ್ಷಣೆ ಮಾಡಿದ ಘಟನೆ ನಾಪೋಕ್ಲು ವಿರಾಜಪೇಟೆ ಮುಖ್ಯ ರಸ್ತೆಯ ಬೆಳ್ಳುಮಾಡುನಲ್ಲಿ ನಡೆದಿದೆ.

ರಾತ್ರಿ ನಾಪೋಕ್ಲು ಕಡೆಯಿಂದ ಬೆಂಗಳೂರಿಗೆ ತೆರಳುತ್ತಿದ್ದ ರಾಜಹಂಸ ಬಸ್ ಬೆಳ್ಳುಮಾಡು ಸೇತುವೆ ಬಳಿಯ ಪ್ರವಾಹದ ನೀರಿನಲ್ಲಿ ಸಿಲುಕಿಕೊಂಡಿದೆ. ಪ್ರವಾಹ ನೀರಿನ ಅರಿವಿಲ್ಲದೆ ಚಾಲಕ ಬಸ್ಸನ್ನು ಮುಂದಕ್ಕೆ ಚಲಾಯಿಸಿದ್ದಾನೆ. ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆಯಿಂದ ಸರಿದು ನದಿ ದಡದಲ್ಲಿ ನಿಂತು ಹೋಗಿದೆ. ಇದರಿಂದ ಪ್ರಯಾಣಿಕರು ಭಯಭೀತರಾಗಿದ್ದರು.

ಪ್ರಯಾಣಿಕರೊಬ್ಬರು ಪಾರಾಣೆ ಗ್ರಾಮ ಅಧ್ಯಕ್ಷ ಪಾಡೆಯಂಡ ಕಟ್ಟಿ ಕುಶಾಲಪ್ಪರಿಗೆ ಮಾಹಿತಿ ನೀಡಿದ್ದಾರೆ. ಪ್ರವಾಹದಲ್ಲಿ ಸಿಲುಕಿದ್ದ ಬಸ್ಸನ್ನು ಟ್ರ್ಯಾಕ್ಟರ್ ಹಾಗೂ ಜೆಸಿಬಿ ಮೂಲಕ ಹೊರ ತೆಗೆಯಲಾಯಿತು.

ನಾಲ್ವರು ಮನೆಗಳ್ಳರ ಬಂಧನ

42 ಲಕ್ಷಕ್ಕೂ ಹೆಚ್ಚು ಮೌಲ್ಯದ ಚಿನ್ನಾಭರಣಗಳ ವಶ



ನಾಲ್ವರು ಕಳ್ಳರನ್ನು ಬಂಧಿಸಿ, ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿರುವುದು.

ಚಾಮರಾಜನಗರ: ಒಂಟಿ ಮನೆಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ ನಾಲ್ವರು ಕಳ್ಳರನ್ನು ಬಂಧಿಸಿ, ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಕೋಳಿಪಾಳ್ಯ ಗ್ರಾಮದ ದೇವರಾಜು, ಚಾಮರಾಜನಗರ ಪಟ್ಟಣದ ದೀಪ್ತು ನಾಯಕ್, ಜಾಲಹಳ್ಳಿಹುಂಡಿ ಗ್ರಾಮದ ಅರ್ಜುನ ಹಾಗೂ ರಾಮಸಮುದ್ರದ ಅವಿನಾಶ್ ಎಂಬುವರೇ ಬಂಧಿತ ಆರೋಪಿಗಳು ಪಟ್ಟಣದ ಸಿದ್ಧಾರ್ಥ ನಗರ, ಇಮ್ಮಾನುವೆಲ್ ಸ್ಕೂಲ್, ಅಂಬೇಡ್ಕರ್ ಪಾರ್ಕ್ ಬಳಿಯ ಮನೆಗಳಲ್ಲಿ ಅಪಾರ ಪ್ರಮಾಣದ ಚಿನ್ನಾಭರಣ, ಬೆಳ್ಳಿ ವಸ್ತುಗಳನ್ನು ಕಳವು ಮಾಡಿದ್ದು, ಆರೋಪಿಗಳಿಂದ 418 ಗ್ರಾಂ ಚಿನ್ನ, 8.5 ಕೆಜಿ ಬೆಳ್ಳಿ, 2 ಲಕ್ಷ ರೂ ಮೌಲ್ಯದ ಕ್ಯಾಮರಾ ಹಾಗೂ ಬೈಕ್ ಸೇರಿ ಒಟ್ಟು 42,25,000ರೂ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾಹಿತಿ ನೀಡಿದರು.

ಜನವರಿ 7ರಂದು ಸಿದ್ಧಾರ್ಥ ನಗರದ ರೇಣುಕಾ ಎಂಬುವರ ಮನೆಯಲ್ಲಿ ಅಪಾರ ಪ್ರಮಾಣದ ಚಿನ್ನಾಭರಣ, ಬೆಳ್ಳಿ ಪದಾರ್ಥಗಳು ಹಾಗೂ ನಗದು ಹಣ ಕಳ್ಳತನವಾಗಿರುವ ಬಗ್ಗೆ ದೂರು ದಾಖಲಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿ ಮನೆಗಳ್ಳತನ ಮಾಡಿದ್ದವರ ಪತ್ತೆಗೆ ಸೆನ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಸ್.ಎಲ್. ಸಾಗರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು. ಬಂಧಿತ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ರೇಣುಕಾ ಅವರ ಮನೆ ಸೇರಿದಂತೆ ಒಟ್ಟು ಮೂರು ಮನೆಗಳಲ್ಲಿ ಕಳ್ಳತನ ನಡೆಸಿದ್ದಾಗಿ ಹೇಳಿಕೆ ನೀಡಿದರು. ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ ಇನ್ಸ್‌ಪೆಕ್ಟರ್ ಎಸ್.ಎಲ್. ಸಾಗರ್ ನೇತೃತ್ವದ ತಂಡಕ್ಕೆ ನಗದು ಬಹುಮಾನ ಘೋಷಿಸಲಾಗಿದೆ. ಬಂಧಿತರಲ್ಲಿ ಕೆಲವರು ಅಪರಾಧ ಹಿನ್ನೆಲೆಯುಳ್ಳವರಾಗಿದ್ದಾರೆ. ಇವರು ನಗರದಾದ್ಯಂತ ರೌಂಡ್ಸ್ ಹಾಕುತ್ತಿದ್ದರು. ಮುಂಜಾನೆಯೂ ಪ್ರಮುಖ ಪ್ರದೇಶಗಳಲ್ಲಿ ರೌಂಡ್ಸ್ ಹೊಡೆಯುತ್ತಿದ್ದರು. ಬಾಗಿಲು ಹಾಕಿದ ಮನೆಗಳು, ಮನೆ ಮುಂದೆ ನ್ಯೂಸ್ ಪೇಪರ್ ಬಿದ್ದಿದ್ದರೆ ಅಂಥ ಮನೆಗಳನ್ನೇ ಟಾರ್ಗೆಟ್ ಮಾಡಿ ಕಳವು ಮಾಡುತ್ತಿದ್ದರು ಎಂದು ಎಸ್‌ಪಿ ತಿಳಿಸಿದರು.

6857 ಸಿಸಿ ಕ್ಯಾಮರಾ ಅಳವಡಿಕೆ: ಜಿಲ್ಲೆಯಲ್ಲಿ ಇತ್ತೀಚೆಗೆ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆರೋಪಿಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಜಿಲ್ಲಾದ್ಯಂತ ಸಿಸಿ ಕ್ಯಾಮರಾಗಳ ಅಳವಡಿಕೆಗೆ ಮುಂದಾಗಿದ್ದು, ಪ್ರಸ್ತುತ 6857 ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಲ್. ಶಶಿಧರ್, ಡಿವೈಎಸ್‌ಪಿ ಲಕ್ಷ್ಮಯ್ಯ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಮಳೆಗಾಲ ಹಿನ್ನೆಲೆ; ಅಧಿಕಾರಿಗಳೊಂದಿಗೆ ಚರ್ಚೆ

ಚಾಮರಾಜನಗರ, ಮೇ 26– ನಗರಸಭೆ ಕಚೇರಿಗೆ ಇಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಕಡತಗಳನ್ನು ಪರಿಶೀಲಿಸಿ ಸಾರ್ವಜನಿಕರು ಸಲ್ಲಿಸಿರುವ ಅರ್ಜಿಗಳನ್ನು 45 ದಿನದೊಳಗೆ ವಿಲೇವಾರಿ ಮಾಡಬೇಕು. ಅವರನ್ನು ವಿನಾಕಾರಣ ಅಲೆದಾಡಿಸುವ ಕೆಲಸ ಮಾಡಬಾರದು, ಈಗಾಗಲೇ ಮುಂಗಾರು ಮಳೆ ಆರಂಭವಾಗಿದ್ದು, ಬಡಾವಣೆಗಳಲ್ಲಿ ನೀರು ನಿಲ್ಲದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು, ಚರಂಡಿಗಳಲ್ಲಿನ ತ್ಯಾಜ್ಯ ತೆರವು ಮಾಡಿ, ಸ್ವಚ್ಛತೆಗೆ ಕ್ರಮವಹಿಸುವಂತೆ ಆದೇಶಿಸಿದರು.

ಕೋಡಿಮೋಳೆ ಹಾಗೂ ಸರ್ವೆ 60 ರಲ್ಲಿ ಗಾಳೀಪುರ ಸರ್ಕಾರಿ ಕೆರೆ ಅಭಿವೃದ್ಧಿಪಡಿಸಿ ಮೂಲ ಸೌಕರ್ಯ ಕಲ್ಪಿಸಲು 4.25 ಕೋಟಿ ರೂ.ಮಂಜೂರಾಗಿದ್ದು, ನಗರಾಭಿವೃದ್ಧಿ ಪ್ರಾಧಿಕಾರದವರು ಶೀಘ್ರದಲ್ಲೇ ಕಾಮಗಾರಿ ಕೈಗೆತ್ತಿಕೊಳ್ಳಬೇಕು ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದು ನಗರಸಭೆ ವ್ಯಾಪ್ತಿಯಲ್ಲಿ ಹರಡದಂತೆ ಮುನ್ನೆಚ್ಚರಿಕೆಯಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕೆಂದರು.

ನಗರಸಭೆ ಮಾಜಿ ಸದಸ್ಯ ನಾಗರಾಜು, ಪ್ರಮುಖ ರಸ್ತೆಗಳಲ್ಲಿ ಬೀದಿದೀಪಗಳಿಲ್ಲದಿರುವ ಕಡೆ ಅಳವಡಿಕೆಗೆ ಕ್ರಮವಹಿಸಲು ಶಾಸಕರು ಸೂಚನೆ ನೀಡಬೇಕು ಎಂದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಆಯುಕ್ತೆ ಸಿಂಧೂ, ನಗರಸಭೆ ಸದಸ್ಯರಾದ ಬಸವಣ್ಣ, ಸ್ವಾಮಿ, ಕಲೀಂ, ನಗರಸಭೆ ಆಯುಕ್ತ ರಾಮದಾಸ್, ಇಂಜಿನಿಯರ್ ಶಿವಾನಂದ ಆರಾಧ್ಯ, ಎಇಇ ಗಳಾದ ಪ್ರಕಾಶ್, ರೂಪ, ಸಮುದಾಯ ಸಂಘಟನಾಧಿಕಾರಿ ವೆಂಕಟನಾಯಕ, ಹಾಜರಿದ್ದರು.



ಮಳೆಗಾಲದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ನಗರಸಭಾ ಅಧಿಕಾರಿಗಳೊಂದಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚರ್ಚಿಸಿದರು.

ಕೊರೊನಾ : ಸಿಮ್ಸ್ ವೈದ್ಯಾಧಿಕಾರಿಗಳಿಗೆ ಶಾಸಕರ ಸೂಚನೆ



ಯಡಬೆಟ್ಟದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧಿಕಾರಿಗಳೊಂದಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಮಾಲೋಚಿಸಿದರು.

ಚಾಮರಾಜನಗರ: ರಾಜ್ಯದಲ್ಲಿ ಮತ್ತೆ ಕೊರೊನಾ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಸಿಮ್ಸ್‌ನಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕೆಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸಿಮ್ಸ್ ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಯಡಬೆಟ್ಟದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಶಿಕ್ಷಣ ಸಭಾಂಗಣದಲ್ಲಿ ವೈದ್ಯಾಧಿಕಾರಿಗಳ ಸಭೆ ನಡೆಸಿದ ಅವರು, ರಾಜ್ಯದಲ್ಲಿ ಕೊರೊನಾ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಆಸ್ಪತ್ರೆಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು. ಕಳೆದ ಬಾರಿ ಕೊರೊನಾ ದುರಂತದಲ್ಲಿ 36 ಮಂದಿ ಮೃತಪಟ್ಟಿದ್ದರು. ಅಂತಹ ಘಟನೆಗಳು ಮರುಕಳಿಸದಂತೆ ಮುಂಜಾಗ್ರತೆ ವಹಿಸುವಂತೆ ಶಾಸಕರು ಸೂಚಿಸಿದರು.

ಅಗತ್ಯವಾದ ಆಮ್ಲಜನಕ, ಔಷಧಿಗಳು, ಹಾಸಿಗೆ ಸಿದ್ಧತೆ ಮಾಡಿಕೊಳ್ಳಬೇಕು. ಈಗಾಗಲೇ ಎಲ್ಲವನ್ನೂ ಮಾಡಿದ್ದೇವೆ. ಶುದ್ಧ ಕುಡಿ ಯುವ ನೀರಿನ ಘಟಕ, ಐಸಿಯು ಅಂಬ್ಯುಲೆನ್ಸ್, ಇಂದಿರಾ ಕ್ಯಾಂಟೀನ್ ಕೇಳಿದ್ದಾರೆ ಅವುಗಳನ್ನು ತಕ್ಷಣದಲ್ಲಿ ಮಾಡಿಕೊಡಲಾಗುವುದು. ನರ್ಸಿಂಗ್ ಹಾಸ್ಟೆಲ್ ಕೇಳಿದ್ದಾರೆ. ಸರ್ಕಾರದ ಗಮನಕ್ಕೆ ತಂದು ಮಾಡಿಕೊಡುವುದಾಗಿ ಹೇಳಿದರು.

ಡೀನ್ ಮತ್ತು ನಿರ್ದೇಶಕ ಮಂಜುನಾಥ ಮಾತನಾಡಿ, ಜಿಲ್ಲಾಸ್ಪತ್ರೆಯಲ್ಲಿ 300 ಹಾಸಿಗೆಗಳಿದ್ದು,270 ಆಕ್ಸಿಜನ್‌ಬೆಡ್ ಇವೆ. 20 ಬೆಡ್ ಐಸಿಯು ಇದೆ. ಯಡಪುರ ಆಸ್ಪತ್ರೆಯಲ್ಲಿ 550 ಹಾಸಿಗೆ ಇದ್ದು, 350 ರಿಂದ400 ಬೆಡ್ ಆಕ್ಸಿಜನ್ ಬೆಡ್ ಇವೆ. 56 ಐಸಿಯು ಬೆಡ್ ಇದೆ. ವೆಂಟಿಲೇಟರ್, ಡ್ರಗ್ಸ್ ಸರಬರಾಜು ಇದ್ದು ಎಲ್ಲ ತಯಾರಿ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಯಾವುದೇ ಕೊರೊನಾ ಮರಣ ಆಗಿಲ್ಲ ಎಂದರು.

ಸಿಮ್ಸ್ ಮುಖ್ಯ ಆಡಳಿತಾಧಿಕಾರಿ ಡಾ. ನಂಜುಂಡೇಗೌಡ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಮಹೇಶ್, ನಿವಾಸಿ ವೈದ್ಯಾಧಿಕಾರಿ ಡಾ. ಮಹೇಶ್, ಮೂಳೆ ರೋಗ ವಿಭಾಗದ ಮುಖ್ಯಸ್ಥ ಡಾ.ಮಾರುತಿ, ಎಲ್ಲಾ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು.

ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ



ತೆರಕಣಾಂಬಿ ಗ್ರಾಮದಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣ ಕಾಮಗಾರಿಗೆ ಹೆಚ್.ಎಂ.ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು.

ಗುಂಡ್ಲುಪೇಟೆ ಮೇ 26(ಸೋಮ್.ಜಿ)– ತಾಲೂಕಿನ ತೆರಕಣಾಂಬಿ ಗ್ರಾಮದ ಸಾಮಾನ್ಯ ವರ್ಗದವರ ಬೀದಿಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನ ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಸೋಮವಾರ ಶಾಸಕ ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಇಲ್ಲಿನ ಬಸವಭವನಕ್ಕೆ ಸುತ್ತುಗೋಡೆ, ಕುಂಬಾರ ಸಮುದಾಯ ಭವನ ಸೇರಿದಂತೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.


ಗ್ರಾಪಂ ಸದಸ್ಯ ಬಸವರಾಜು.ಶಿವ, ಜಿಪಂ ಮಾಜಿ ಉಪಾಧ್ಯಕ್ಷ ಪಿ.ಮಹದೇವಪ್ಪ, ಟಿಎಪಿಸಿಎಂಎಸ್ ಮುಖಂಡ ಟಿ.ಪಿ.ನಾಗರಾಜು, ಹೋಟೆಲ್ ಚನ್ನಮಲ್ಲಪ್ಪ ಕುಮಾರ್, ಮನು, ಸರ್ವಭೂಷಣಸ್ವಾಮಿ, ಟಿ.ಎನ್.ಶಿವಶೇಖರ್, ನಿಖಿಲ್ ಇತರರು ಇದ್ದರು.

ಮಳೆಯಲ್ಲೂ ನಡೆದ ಆನೆ ಗಣತಿ ಕಾರ್ಯ

ಯಳಂದೂರು, ಮೇ 26 (ವಿ.ನಾಗರಾಜು)– ತಾಲೂಕಿನ ಬಿಳಿಗಿರಿ ಹುಲಿ ರಕ್ಷಿತ ಅರಣ್ಯದಲ್ಲಿ ಮಳೆಯ ನಡುವೆಯೂ ಆನೆ ಗಣತಿ ಕಾರ್ಯ ನಡೆಯಿತು.

ಮೂರು ದಿನಗಳಿಂದ ಗಣತಿ ಕಾರ್ಯ ನಡೆಯುತ್ತಿದ್ದು, ಕೊನೆಯ ದಿನವಾದ ನಿನ್ನೆ ಬಿಆರ್‌ಟಿ ವ್ಯಾಪ್ತಿಯಲ್ಲಿ ಬರುವ ಕೆರೆಕಟ್ಟೆಗಳಲ್ಲಿ ನೀರು ಕುಡಿಯಲು ಬರುವ ಆನೆಗಳ ಗಣತಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಮಾಡಿದರು.

ಯಳಂದೂರು ವಲಯ ವ್ಯಾಪ್ತಿಯಲ್ಲಿ ಬರುವ ಕೃಷ್ಣಯ್ಯನಕಟ್ಟೆ, ಗೌಡಹಳ್ಳಿ ಡ್ಯಾಂ ಸೇರಿದಂತೆ ಕಾಡಿನೊಳಗೆ ಇರುವ ಇತರೆ ನೀರು ತುಂಬಿರುವ ಕೆರೆ ಕಟ್ಟೆಗಳಲ್ಲಿ ಭಾಗವಹಿಸಿದ್ದು, ಇದಕ್ಕಾಗಿ ಬೆಳಿಗ್ಗೆ 6 ಗಂಟೆಯಿಂದಲೇ ಮೂರು ಜನರ 11 ತಂಡಗಳನ್ನು ವಲಯ ವ್ಯಾಪ್ತಿಯಲ್ಲಿ ನಿಯೋಜಿಸಲಾಗಿತ್ತು ಆದರೆ ಮಧ್ಯಾಹ್ನದ ಮೇಲೆ ಬಿಳಿಗಿರಿ ರಂಗನಬೆಟ್ಟದ ವ್ಯಾಪ್ತಿಯಲ್ಲಿ ಮಳೆಯು ಜೋರಾಗಿದ್ದರಿಂದ ಅಲ್ಪ ತೊಡಕಾಯಿತು.



ತಾಲೂಕಿನ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುವ ಕೃಷ್ಣಯ್ಯನ ಕಟ್ಟೆಯಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಆನೆಗಳ ಬರುವಿಕೆಗೆ ಕಾಯುತ್ತಿರುವುದು.

ನೀಲಗಿರಿ ಜಿಲ್ಲೆಯ ಪ್ರವಾಸಿ ತಾಣಗಳಿಗೆ ನಿರ್ಬಂಧ: ಸೂಚನೆ

ಚಾಮರಾಜನಗರ: ಜಿಲ್ಲೆಯ ಗಡಿ ತಮಿಳುನಾಡು ರಾಜ್ಯದ ನೀಲಗಿರಿ ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆಯಾಗುತ್ತಿದ್ದು, ಪ್ರವಾಸಿ ತಾಣಗಳಿಗೆ ತಮಿಳುನಾಡು ಸರ್ಕಾರ ನಿರ್ಬಂಧಿಸಲಾಗುತ್ತಿರುವುದರಿಂದ ಮಳೆ ನಿಲ್ಲುವ ತನಕ ಸದರಿ ಸ್ಥಳಗಳಿಗೆ ಪ್ರವಾಸ ಕೈಗೊಳ್ಳದಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

ಪ್ರವಾಸಿ ತಾಣಗಳಾದ ದೊಡ್ಡಬೆಟ್ಟ, ಪೈನ್ ಫಾರೆಸ್ಟ್, ಲ್ಯಾಂಬ್ ರಾಕ್, ಅವಲಾಂಚೆ, 9ನೇ ಮೈಲ್ ಶೂಟಿಂಗ್ ಪಾಯಿಂಟ್, ಬೋಟ್ ಹೌಸ್, ಪೈಕಾರ ಮತ್ತು ಊಟಿ ಸ್ಥಳಗಳಿಗೆ ನಿರ್ಬಂಧಿಸಿರುವುದರಿಂದ ನಾಗರಿಕರು ಸದರಿ ಸ್ಥಳಗಳಿಗೆ ಮಳೆ ನಿಲ್ಲುವ ತನಕ ಪ್ರವಾಸ ಕೈಗೊಳ್ಳದಂತೆ ಎಚ್ಚರಿಕೆ ವಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿಯ ವಿಪತ್ತು ನಿರ್ವಹಣಾ ಕೊಠಡಿಯ ಟೋಲ್ ಫ್ರೀ ದೂರವಾಣಿ ಸಂಖ್ಯೆ 1077, ವಿಪತ್ತು ನಿರ್ವಹಣಾ ಕೊಠಡಿಯ ವ್ಯಾಟ್ಸ್ ಆಪ್ ಸಂಖ್ಯೆ 974094 2901, ಸ್ಥಿರ ದೂರವಾಣಿ ಸಂಖ್ಯೆ 08226-223160, 08226-223161, 08226-223163 ಸಂಪರ್ಕಿಸುವಂತೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷೆ ಶಿಲ್ಪಾ ನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಇಟಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದನೆ

ಕೊಳ್ಳೇಗಾಲ: ಸಿಇಟಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದ ನಿರ್ಸರ್ಗ ಸ್ವತಂತ್ರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಪಟ್ಟಣದ ಮಾನಸ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಇಟಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದ 12 ಮಕ್ಕಳಿಗೆ ಸನ್ಮಾನಿಸಿದ ಬಳಿಕ ಸಂಸ್ಥೆಯ ಕಾರ್ಯದರ್ಶಿ ಡಾ.ಎಸ್.ದತ್ತೇಶ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಶಿಕ್ಷಕರ ಮಾರ್ಗದರ್ಶನ ಈ ಸಾಧನೆಗೆ ಕಾರಣವಾಗಿದೆ. ಈ ರೀತಿಯ ಶೈಕ್ಷಣಿಕ ಸಾಧನೆಗಳು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ಸಂಸ್ಥೆ ಸದಾ ಪ್ರತಿಭೆಗಳ ಬೆಂಬಲಕ್ಕಿದೆ ಎಂದರು.

ಮಾನಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್.ನಾಗರಾಜು, ಕಾರ್ಯದರ್ಶಿ ಡಾ.ಎಸ್. ದತ್ತೇಶ್ ಕುಮಾರ್, ವಿಶೇಷಾಧಿಕಾರಿ ಆರ್.ನಾಗಭೂಷಣ್, ಪ್ರಾಂಶುಪಾಲ ಡಿ.ಕೃಷ್ಣೇಗೌಡ, ಚನ್ನಶೆಟ್ಟಿ, ಧನಂಜಯ್, ಉಪನ್ಯಾಸಕ ಡಾ.ಚಂದ್ರಶೇಖರ್, ಡಾ.ಶರತ್, ರಾಮಕೃಷ್ಣ, ಮಾಧ್ಯಮ ವಕ್ತಾರ ಕೆ.ಬಾಬು ಹಾಗೂ ಬೋಧಕ–ಬೋಧಕೇತರರು, ವಿದ್ಯಾರ್ಥಿಗಳು, ಪೋಷಕರು ಇದ್ದರು.

ಪ್ರೇಕ್ಷಕರ ಮನಸೂರೆಗೊಂಡ 'ಲೀಕ್ ಔಟ್' ನಾಟಕ ಪ್ರದರ್ಶನ



ಒಡನಾಡಿ ಸಂಸ್ಥೆಯ ಮಡಿಲು ಪುನರ್ವಸತಿ ಕೇಂದ್ರದ ಆವರಣದಲ್ಲಿ ನಟಿ ಅಕ್ಷತಾ ಪಾಂಡವಪುರ ಅವರ ಏಕವ್ಯಕ್ತಿ ನಾಟಕ ಪ್ರದರ್ಶನ ನಡೆಯಿತು.

ಮೈಸೂರು,ಮೇ 26(ಪಿಎಂ)– ಸಮಾಜದ ಪ್ರತಿಯೊಬ್ಬರಿಗೂ ಸೌಹಾರ್ದತೆ, ಸಮಾನತೆ ದೊರೆಯಬೇಕೆಂಬ ತಾತ್ಪರ್ಯ ಹೊಂದಿರುವ 'ಲೀಕ್ ಔಟ್' ನಾಟಕ ಪ್ರದರ್ಶನ ಒಡನಾಡಿ ಸಂಸ್ಥೆಯ 'ಮಡಿಲು' ಪುನರ್ವಸತಿ ಕೇಂದ್ರದ ಆವರಣದಲ್ಲಿ ಪ್ರೇಕ್ಷಕರ ಮನಸೂರೆಗೊಂಡಿತು.

ನೀನಾಂಸನಲ್ಲಿ ರಂಗಶಿಕ್ಷಣ ಪಡೆದು, ಪೂರ್ಣಾವಧಿ ನಟಿಯಾಗಿರುವ ರಂಗಭೂಮಿ ಕಲಾವಿದೆ ಹಾಗೂ ಚಲನಚಿತ್ರ ನಟಿ ಅಕ್ಷತಾ ಪಾಂಡವಪುರ ಅವರ ಈ ಏಕವ್ಯಕ್ತಿ ಪ್ರದರ್ಶನವನ್ನು ಸಂಸ್ಥೆಯ ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರಿಗಾಗಿ ಆಯೋಜಿಸಲಾಗಿತ್ತು.

ರಾಜ್ಯ ಪ್ರಶಸ್ತಿ ಪುರಸ್ಕೃತ ನಟಿ ಅಕ್ಷತಾರವರು ತಮ್ಮ ವಿಶಿಷ್ಟವಾದ ಪ್ರತಿಭೆಯಿಂದ ನಾಟಕ ನೋಡಲು ಬಂದಂತಹ ಪ್ರೇಕ್ಷಕರನ್ನೇ ಕಲಾವಿದರನ್ನಾಗಿ ಪರಿವರ್ತಿಸುವ ಕೌಶಲ್ಯ ಮೆರೆದು ಗಮನ ಸೆಳೆದರು. ಸಮಾಜದಲ್ಲಿರುವ ಲಿಂಗ ತಾರತಮ್ಯ, ಅಸಮಾನತೆ, ಜಾತಿ, ಧರ್ಮಗಳ ಕೋಮುಗಲಭೆ, ಒಂದು ಕುಟುಂಬದೊಳಗೆ ಹೆಣ್ಣು ಅನುಭವಿಸುವ ನೋವು, ಹತಾಶೆ ಹಾಗೂ ಹೆಣ್ಣಿನ ಆಂತರ್ಯದ ತಲ್ಲಣಗಳನ್ನು ತಮ್ಮ ಅಭಿನಯದ ಮೂಲಕ ನೆರೆದಿದ್ದ ಪ್ರೇಕ್ಷಕರಿಗೆ ಮನಮುಟ್ಟುವ ರೀತಿಯಲ್ಲಿ ಅನಾವರಣಗೊಳಿಸಿದರು.

ತಿಳಿ ಹಾಸ್ಯದೊಡನೆ ಮನುಷ್ಯನ ಭಾವನೆಯ ಎಲ್ಲಾ ಮಜಲುಗಳನ್ನು ದಾಖಲಿಸಿದರಲ್ಲದೆ, ಬಣ್ಣಗಳು ಮತ್ತು ಬಣ್ಣದ ಬಟ್ಟೆಗಳನ್ನು ಮುಂದಿಟ್ಟುಕೊಂಡು ವ್ಯಾಜ್ಯದಲ್ಲಿ ಮುಳುಗಿರುವ ಸನ್ನಿವೇಶದಲ್ಲಿ ಮನುಷ್ಯನಿಗೆ ನಿಜಕ್ಕೂ ಇರಬೇಕಿರುವುದು ಕರುಣೆಯೇ ಹೊರತು ಮತ್ತೇನೂ ಅಲ್ಲ ಎಂಬ ಸಂದೇಶ ರವಾನಿಸಿದರು. ಪ್ರಸ್ತುತದ ನಮ್ಮ ಸಮಾಜದಲ್ಲಿನ ಸನ್ನಿವೇಶಗಳನ್ನು ಅಕ್ಷತಾ ಅವರು ಅಭಿನಯದ ಮೂಲಕ ಪ್ರೇಕ್ಷಕರ ಮನ ಮುಟ್ಟಿಸುವಲ್ಲಿ ಯಶಸ್ವಿಯಾದರು.

ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ ಮತ್ತು ಪರಶು, ಪತ್ರಕರ್ತ ಕಮಲ್ ಗೋಪಿನಾಥ್, ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಲತಾ.ಕೆ.ಬಿದ್ದಪ್ಪ, ಮುಖಂಡರಾದ ಸುಮತಿ ಜನಾರ್ಧನ್, ರೂಪರಾವ್, ಕಲಾವಿದರಾದ ಜಯದೇವ್, ಸೇವಾಂಯಾನ್ ಟ್ರಸ್ಟ್‌ನ ಆಶ್ರಿತ ಮಹಿಳೆಯರು, ಸ್ಥಳೀಯ ನಿವಾಸಿಗಳು, ಸಂಸ್ಥೆಯ ಸಹಭಾಗಿಗಳು, ಮಕ್ಕಳು ಮತ್ತು ಮಹಿಳೆಯರು ಹಾಜರಿದ್ದರು.

ಮಗು ಸಾವಿಗೆ ಕಾರಣರಾದ ಪೊಲೀಸರ ವಜಾಕ್ಕೆ ಆಗ್ರಹ



ಮೈಸೂರು, ಮೇ 26– ಮಂಡ್ಯದಲ್ಲಿ ವಾಹನ ತಪಾಸಣೆ ವೇಳೆ ಪುಟ್ಟ ಮಗು ದುರಂತ ಸಾವಿಗೀಡಾದ ಘಟನೆ ಸಂಬಂಧ ಸ್ಥಳದಲ್ಲಿದ್ದ ಪೊಲೀಸರನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಕನ್ನಡಾಂಬೆ ರಕ್ಷಣಾ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಆಗ್ರಹಿಸಿದ್ದಾರೆ.

ತಪಾಸಣೆ ನೆಪದಲ್ಲಿ ಸಾರ್ವಜನಿಕರ ಜೀವದೊಂದಿಗೆ ಚೆಲ್ಲಾಟವಾಡುವ ಇಂತಹ ಪೊಲೀಸರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಪೊಲೀಸ್ ಇಲಾಖೆಯಲ್ಲೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳುತ್ತಿರುವ ಈ ಸಂದರ್ಭದಲ್ಲೂ ವಾಹನ ಸವಾರರನ್ನು ಕಳ್ಳರಂತೆ ಹಿಡಿಯುವುದು ಎಷ್ಟು ಸರಿ?. ಇಂತಹ ಕ್ರಮದಿಂದಾಗಿ ಮಂಡ್ಯದಲ್ಲಿ ಏನೂ ಅರಿಯದ ಕಂದಮ್ಮ ಬಲಿಯಾಗಿರುವುದು ಅತ್ಯಂತ ನೋವಿನ ಸಂಗತಿ. ಇದಕ್ಕೆ ಕಾರಣರಾದ ಪೊಲೀಸರನ್ನು ಅಮಾನತು ಮಾಡಿದರೆ ಸಾಲದು, ಅವರನ್ನು ಸೇವೆಯಿಂದಲೇ ವಜಾ ಮಾಡುವ ಮೂಲಕ ಎಚ್ಚರಿಕೆ ನೀಡಬೇಕು. ಸಾರ್ವಜನಿಕರ ರಕ್ಷಣೆಗಿರುವ ಪೊಲೀಸರು, ಪ್ರಾಣ ಹರಣಕ್ಕೆ ಕಾರಣವಾಗುವಂತೆ ವರ್ತಿಸಬಾರದು. ಈ ನಿಟ್ಟಿನಲ್ಲಿ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಎನ್.ವಿ.ಅಂಜಾರಿಯಾ: ಕೊಲಿಜಿಯಂ ಶಿಫಾರಸು

ನವದೆಹಲಿ, ಮೇ 26– ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಎನ್.ವಿ.ಅಂಜಾರಿಯಾ (ಕರ್ನಾಟಕ), ವಿಜಯ್ ಬಿಷ್ಣೋಯ್ (ಗುವಾಹಟಿ) ಹಾಗೂ ಎ.ಎಸ್.ಚಂದೂರ್ಕರ್ (ಬಾಂಬೆ) ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ ಎಂದು ಸುದ್ದಿಸಂಸ್ಥೆ 'ಎಎನ್‌ಐ' ವರದಿ ಮಾಡಿದೆ.

ಉನ್ನತ ನ್ಯಾಯಾಲಯದಲ್ಲಿ ಖಾಲಿ ಇರುವ ಮೂರು ಹುದ್ದೆಗಳನ್ನು ಭರ್ತಿ ಮಾಡಲು ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಕೊಲಿಜಿಯಂ ಸೋಮವಾರ ಸಭೆ ಸೇರಿತು. ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಮ್ ನಾಥ್, ಜೆ.ಕೆ ಮಹೇಶ್ವರಿ ಮತ್ತು ಬಿ.ವಿ ನಾಗರತ್ನ ಅವರು ಕೊಲಿಜಿಯಂನ ಇತರ ಸದಸ್ಯರಾಗಿದ್ದಾರೆ.

ಮುಖ್ಯ ನ್ಯಾಯಮೂರ್ತಿಯಾಗಿದ್ದ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಹಾಗೂ ಎ.ಎಸ್.ಓಕಾ ಅವರ ನಿವೃತ್ತಿಯಿಂದ ಈ ಹುದ್ದೆಗಳು ಖಾಲಿ ಆಗಿವೆ. ಸುಪ್ರೀಂ ಕೋರ್ಟ್‌ಗೆ ಮಂಜೂರಾದ ನ್ಯಾಯಮೂರ್ತಿ ಹುದ್ದೆಗಳು 34. ಈಗ 31 ನ್ಯಾಯಮೂರ್ತಿಗಳಿದ್ದಾರೆ.

ಅಂಜಾರಿಯಾ ಅವರು ಗುಜರಾತ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ 2011ರಲ್ಲಿ ನೇಮಕಗೊಂಡಿದ್ದರು. 2013ರಲ್ಲಿ ಖಾಯಂ ನ್ಯಾಯಮೂರ್ತಿಯಾಗಿದ್ದರು. ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ 2024ರ ಫೆಬ್ರುವರಿ 25ರಂದು ಅಧಿಕಾರ ಸ್ವೀಕರಿಸಿದ್ದರು.

ಶ್ರೀದೇವಿ ತೇಜಸ್ವಿನಿಗೆ ಪಿಹೆಚ್.ಡಿ ಪದವಿ



ಡಾ. ಎಂ.ಜಿ. ಮಂಜುನಾಥ ಅವರ ಮಾರ್ಗದರ್ಶನದಲ್ಲಿ ಶ್ರೀದೇವಿ ತೇಜಸ್ವಿನಿ ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಶೃಂಗೇರಿ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹೈದರಾಲಿ ರಸ್ತೆಯ ಮರಗಳ ಹನನ ಸಮರ್ಥಿಸಿ ಸಚಿವರಿಗೆ ಹಿರಿಯ ಅರಣ್ಯಾಧಿಕಾರಿ ಸಲ್ಲಿಸಿದ ವರದಿಗೆ ಎಂಜಿಪಿ ಅಸಮಾಧಾನ

ಸಾರ್ವಜನಿಕರ ಸಂಪರ್ಕಿಸದೆ ಏಕಪಕ್ಷೀಯ ವರದಿ ಆರೋಪ, ಅರಣ್ಯ ಸಚಿವರಿಗೆ ಪತ್ರ ಚಳವಳಿ, ಕೋರ್ಟ್ ಮೊರೆ ಹೋಗಲು ಚಿಂತನೆ



ಮೈಸೂರು, ಮೇ 26(ಎಸ್‌ಪಿಎನ್)– ಮೈಸೂರು ಹೈದರಾಲಿ ರಸ್ತೆಯಲ್ಲಿದ್ದ 40ಕ್ಕೂ ಹೆಚ್ಚು ಮರಗಳ ಮಾರಣ ಹೋಮಕ್ಕೆ ಅನುಮತಿ ನೀಡಿದ ಅಧಿಕಾರಿಗಳ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಿರುವ ಅರಣ್ಯ ಇಲಾಖೆಯ ನಿರ್ಧಾರಕ್ಕೆ ಮೈಸೂರು ಗ್ರಾಹಕರ ಪರಿಷತ್ ಅಸಮಾಧಾನ ವ್ಯಕ್ತಪಡಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಎಂಜಿಪಿ ಸಂಸ್ಥಾಪಕ ಕಾರ್ಯಾಧ್ಯಕ್ಷ ಬಾಮಿ ವಿ.ಶೆಣೈ, ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿಚಾರಣೆ ನಡೆಸಿದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ ಅವರು 14 ದಿನಗಳು ವಿಳಂಬ ಮಾಡಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ವರದಿ ನೀಡಿದ್ದಾರೆ. ಆದರೆ, ಈ ವರದಿಯನ್ನು 7 ದಿನದೊಳಗೆ ನೀಡಬೇಕಿತ್ತು ಎಂದು ಆರೋಪಿಸಿದ್ದಾರೆ.

ಮರ ಕಡಿಯಲು ಅನುಮತಿ ನೀಡಿದ ಅಧಿಕಾರಿಗಳ ನಿರ್ಧಾರ ಕಾನೂನು ಬಾಹಿರ ಎಂಬುದಾಗಿ ವರದಿಯಲ್ಲಿ ಉಲ್ಲೇಖವಾಗಬಹುದು ಎಂದು ನಿರೀಕ್ಷಿಸಿದ್ದೆವು. ಆದರೆ, ಮೈಸೂರಿಗರ ನಿರೀಕ್ಷೆ ಹುಸಿಯಾಗಿದೆ. ಮೈಸೂರು ಅರಣ್ಯ ಇಲಾಖೆ, ಪಾರಂಪರಿಕ ಮರಗಳನ್ನು ಕಡಿಯುವುದನ್ನು ನಿಲ್ಲಿಸಲು ವಿಫಲವಾಯಿತು. ಆದರೆ, ಹಿರಿಯ ಅಧಿಕಾರಿಗಳು ಸಮರ್ಥನೆ ನೀಡುತ್ತಿರುವುದು ಮಾತ್ರ ಬೇಸರ ತರಿಸಿದೆ ಎಂದಿದ್ದಾರೆ.

ಮರ ಕಡಿಯಲು ಕೋರಿದ್ದ ಅರ್ಜಿಯಲ್ಲಿ 50ಕ್ಕಿಂತ ಕಡಿಮೆ ಮರ ಇದ್ದ ಕಾರಣ ಸಾರ್ವಜನಿಕ ವಿಚಾರಣೆ ನಡೆಸುವ ಅಗತ್ಯವಿಲ್ಲ ಎನಿಸಿ, ಅನುಮತಿ ನೀಡಲಾಗಿದೆ ಎಂದು ಮೀನಾಕ್ಷಿ ನೇಗಿ ಅವರು ಸಮರ್ಥಿಸಿರುವುದು ಅತ್ಯಂತ ಹೊಣೆಗೇಡಿತನ ಎಂದಿದ್ದಾರೆ.

ಪಾರಂಪರಿಕ ಮರಗಳನ್ನು ಕಡಿಯಲು ಮೈಸೂರು ನಗರ ಪಾಲಿಕೆ ಯಾವುದೇ ಕಾರಣ ನೀಡದಿದ್ದರೂ ಅರಣ್ಯ ಇಲಾಖೆ ಅನುಮತಿ ನೀಡಿದ್ದು ಎಷ್ಟು ಸರಿ?. ಪರಿಸರ ತಜ್ಞ ಡಾ.ದಾಸ್ ಅವರ ಪ್ರಕಾರ ಪಾರಂಪರಿಕ ಮರಗಳ ಮೌಲ್ಯ ಕೋಟಿಗಿಂತ ಹೆಚ್ಚಿನದು. ಆದರೆ, ಈ ಮರಗಳನ್ನು ಕಡಿಯಲು ಕೇವಲ 7,66,223 ರೂ.ಗಳ ಪಾವತಿಗೆ ನಿಗದಿಪಡಿಸಿ, ಮರ ಕಡಿಯಬಹುದು ಎಂದಿರುವ ಅಧಿಕಾರಿಗಳ ನಿರ್ಧಾರ ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ.

2009–10ರಲ್ಲಿ ಲಲಿತ್‌ಮಹಲ್ ರಸ್ತೆ ಅಗಲೀಕರಣಕ್ಕೆ 200 ಮರ ಕಡಿಯಲು, ಅರಣ್ಯ ಇಲಾಖೆ ಬಳಿ ಕೇಳಲಾಗಿತ್ತು ಆದರೆ, ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಾಶ್ವತಿ ಅವರು, ಇದಕ್ಕೆ ಅನುಮತಿ ನೀಡಿರಲಿಲ್ಲ. ರಸ್ತೆ ಅಗಲೀಕರಣಕ್ಕಾಗಿ ಮರಗಳನ್ನು ಕಡಿಯುವಂತೆ, ಪೊಲೀಸ್ ಇಲಾಖೆ, ರಾಜಕಾರಣಿಗಳು, ಸಾರ್ವಜನಿಕರಿಂದ ತುಂಬಾ ಒತ್ತಡವಿದ್ದರೂ ಪರಿಸರವಾದಿಗಳ ಕೂಗಿಗೆ ಬೆಲೆ ನೀಡಿ, ಅನುಮತಿ ನಿರಾಕರಿಸಿದ್ದರು. ಆದರೆ, ನೇಗಿ ಅವರು, ಕಾಣದ ಕೈಗಳ ಒತ್ತಡಕ್ಕೆ ಮಣಿದಿದ್ದಾರೆ ಎಂಬ ಅಂಶ ಈ ಘಟನೆಯಿಂದ ಸಾರ್ವಜನಿಕಗೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

ಪಾರಂಪರಿಕ ಮರಗಳನ್ನು ಕಡಿಯುವುದರ ಬಗ್ಗೆ ಸಾರ್ವಜನಿಕರಿಂದ ತೀವ್ರ ಪ್ರತಿಭಟನೆ ಬಂದಾಗ, ಸಂಬಂಧಪಟ್ಟ ಅಧಿಕಾರಿಗಳು ವಿವಿಧ ಸರ್ಕಾರೇತರ ಸಂಸ್ಥೆಗಳನ್ನು ಭೇಟಿ ಮಾಡಿ, ಅಭಿಪ್ರಾಯ ಸಂಗ್ರಹಿಸುವುದು ಅಧಿಕಾರಿಗಳ ನೈತಿಕ ಹೊಣೆಯಾಗಿತ್ತು. ಆದರೆ, ಅರಣ್ಯ ಇಲಾಖೆ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಈ ವಿಷಯವಾಗಿ ಸಾರ್ವಜನಿಕರನ್ನು ಭೇಟಿಯಾಗಿಲ್ಲ ಹಾಗೂ ಈ ಪ್ರಕರಣದಲ್ಲಿ ಅವರು ಏಕಮುಖ ಅಭಿಪ್ರಾಯ ವ್ಯಕ್ತಪಡಿಸಿ, ಸರ್ಕಾರಕ್ಕೆ ವರದಿ ನೀಡಿದ್ದಾರೆ ಎಂದು ಮೇಲ್ನೋಟಕ್ಕೆ ಅನಿಸುತ್ತಿದೆ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ.

ಹೈದರಾಲಿ ರಸ್ತೆಯ ಅಗಲೀಕರಣಕ್ಕೆ ಈ ಭಾಗದ ಶಾಸಕರ ಅನುದಾನ ಬಳಸಿಕೊಳ್ಳಲು ಇಷ್ಟೆಲ್ಲಾ ನಾಟಕ ಅವಶ್ಯಕತೆ ಇತ್ತೆ? ಎಂದು ಪ್ರಶ್ನಿಸಿದ್ದಾರೆ. ಅಲ್ಲದೆ, ಸಾರ್ವಜನಿಕರ ಅಭಿಪ್ರಾಯಕ್ಕೂ ಮನ್ನಣೆ ನೀಡದ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳೇ ಮರಗಳ ಹನನಕ್ಕೆ ಪ್ರತ್ಯಕ್ಷ ಪರೋಕ್ಷ ಬೆಂಬಲಿಸಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ.

ಅಲ್ಲದೆ, ಈ ಪ್ರಕರಣದಲ್ಲಿ ಮರಗಳ ಕಡಿಯಲು ಅನುಮತಿ ನೀಡಿರುವುದನ್ನು ಪರಿಶೀಲಿಸಲು ಮತ್ತೊಮ್ಮೆ ವಿಚಾರಣೆ ನಡೆಸಲು ಜಿಲ್ಲಾಡಳಿತ ಮುಂದಾಗಿದೆ. ಇದಕ್ಕೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ನೇತೃತ್ವ ವಹಿಸಲಿದ್ದಾರೆ. ಇದು ಮತ್ತೊಂದು ಕಾಲಹರಣಕ್ಕೆ ನಾಂದಿಯಾಗಿದೆ. ಒಟ್ಟಿನಲ್ಲಿ ಪಾರಂಪರಿಕ ಮರಗಳ ಹನನ ಸಮರ್ಥಿಸಲು ಅಧಿಕಾರಿಗಳು ಅಡ್ಡದಾರಿ ಹಿಡಿಯುತ್ತಿರುವುದು ಮೈಸೂರಿಗರಿಗೆ ಮಾಡುತ್ತಿರುವ ಘೋರ ಅನ್ಯಾಯ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.



ಹೈದರಾಲಿ ರಸ್ತೆಯಲ್ಲಿದ್ದ 40ಕ್ಕೂ ಹೆಚ್ಚು ಪಾರಂಪರಿಕ ಮರಗಳ ಹನನಕ್ಕೆ ಸಹಕರಿಸಿ, ಈ ನಿರ್ಧಾರವನ್ನು ಮೈಸೂರು ಅರಣ್ಯ ಇಲಾಖೆ ಸಮರ್ಥನೆ ಮಾಡಲು ಮುಂದಾಗಿರುವುದನ್ನು ವಿರೋಧಿಸಿ ಅರಣ್ಯ ಸಚಿವರಿಗೆ ಪತ್ರ ಚಳವಳಿ ನಡೆಸುವುದು. ಈ ವಿಷಯವಾಗಿ ವಿವಿಧ ಎನ್‌ಜಿಓ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಹೈಕೋರ್ಟ್‌ನಲ್ಲಿ ಪ್ರಶ್ನಿಸುವ ಕುರಿತು ಚಿಂತಿಸಲಾಗುವುದು.

- ಬಾಮಿ ವಿ.ಶೆಣೈ, ಸ್ಥಾಪಕ ಕಾರ್ಯಾಧ್ಯಕ್ಷರು, ಎಂಜಿಪಿ

ಭೋವಿ ಅಭಿವೃದ್ಧಿ ನಿಗಮ ಹಗರಣ: ಕೆಬಿಡಿಸಿ ಮಾಜಿ ಅಧಿಕಾರಿಗಳ ಆಸ್ತಿಗಳು ಮುಟ್ಟುಗೋಲು

ಬೆಂಗಳೂರು, ಮೇ 26– ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ (ಕೆಬಿಡಿಸಿ) ಇಬ್ಬರು ಮಾಜಿ ಅಧಿಕಾರಿಗಳ 26 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ಸೋಮವಾರ ತಿಳಿಸಿದೆ.

ಭೋವಿ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗಳ ಕಲ್ಯಾಣಕ್ಕಾಗಿ ಕೆಬಿಡಿಸಿ ಕೆಲಸ ಮಾಡುತ್ತದೆ. ಮುಟ್ಟುಗೋಲು ಹಾಕಿಕೊಂಡ ಆಸ್ತಿಗಳು ಕೆಬಿಡಿಸಿಯ ಮಾಜಿ ಜನರಲ್ ಮ್ಯಾನೇಜರ್ ಬಿ.ಕೆ. ನಾಗರಾಜಪ್ಪ, ಸಂಸ್ಥೆಯ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಆರ್ ಲೀಲಾವತಿ ಮತ್ತು ಇತರ ಕೆಲವು ಆರೋಪಿಗಳಿಗೆ ಸೇರಿವೆ.

ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ 26.27 ಕೋಟಿ ರೂ. ಮೌಲ್ಯದ ಆದರೆ ಪ್ರಸ್ತುತ ಮಾರುಕಟ್ಟೆ ಮೌಲ್ಯ 40 ಕೋಟಿ ರೂ. ಹೊಂದಿರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ ಎಂದು ಕೇಂದ್ರ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.


ಈ ತನಿಖೆಯ ಭಾಗವಾಗಿ ನಾಗರಾಜಪ್ಪ ಮತ್ತು ಲೀಲಾವತಿ ಅವರನ್ನು ಏಪ್ರಿಲ್‌ನಲ್ಲಿ ಇಡಿ ಬಂಧಿಸಿದೆ ಮತ್ತು ಪ್ರಸ್ತುತ ಅವರು ನ್ಯಾಯಾಂಗ ಬಂಧನದಲ್ಲಿ ಜೈಲಿನಲ್ಲಿದ್ದಾರೆ. ಮಧ್ಯವರ್ತಿಗಳು ಮತ್ತು ಅವರ ಸಹಚರರೊಂದಿಗೆ ಶಾಮೀಲಾಗಿ, 750 ಕ್ಕೂ ಹೆಚ್ಚು ನಕಲಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಸಾಲ, ಸಬ್ಸಿಡಿ ಮತ್ತು ಹಣಕಾಸಿನ ನೆರವು ನೀಡುವ ಮೂಲಕ ಕೆಬಿಡಿಸಿಯಿಂದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಇಡಿ ಆರೋಪಿಸಿದೆ.

ಈ ಹಣವನ್ನು ಆಸ್ತಿಗಳ ಖರೀದಿ, ಮಧ್ಯವರ್ತಿಗಳಿಗೆ ಪಾವತಿ ಮಾಡುವುದು ಮತ್ತು ವ್ಯಕ್ತಿಗಳು ಮತ್ತು ಇತರ ವಿವಿಧ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ತಿರುಗಿಸಲಾಗಿದೆ ಎಂದು ಸಂಸ್ಥೆ ಹೇಳಿಕೊಂಡಿದೆ.

ಕೆಬಿಡಿಸಿಯಿಂದ ದುರುಪಯೋಗಪಡಿಸಿಕೊಂಡ ಹಣವನ್ನು ಮುಖ್ಯವಾಗಿ ಅವರ ಐಷಾರಾಮಿ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಮತ್ತು ಅವರ ಹೆಸರಿನಲ್ಲಿ ಮತ್ತು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಸ್ಥಿರ ಮತ್ತು ಚರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಬಳಸಲಾಗಿದೆ ಎಂದು ಇಡಿ ಹೇಳಿದೆ.

ಕೆಬಿಡಿಸಿಯಿಂದ 97 ಕೋಟಿ ರೂ. ಮೌಲ್ಯದ ಹಣವನ್ನು ದುರುಪಯೋಗಪಡಿಸಿಕೊಂಡ ಮತ್ತು ಬೇರೆಡೆ ತಿರುಗಿಸಿದ ಆರೋಪದ ಮೇಲೆ ಕರ್ನಾಟಕ ಪೊಲೀಸರು ಹಲವಾರು ಎಫ್‌ಐಆರ್‌ಗಳನ್ನು ದಾಖಲಿಸಿದ್ದರಿಂದ ಈ ಹಣ ವರ್ಗಾವಣೆ ಪ್ರಕರಣ ಉದ್ಭವಿಸಿದೆ.

73 ವರ್ಷಗಳ ಬಳಿಕ ಸೌದಿಯಲ್ಲಿ ಮದ್ಯ ಮಾರಾಟಕ್ಕೆ ಅವಕಾಶ



ಸೌದಿ ಅರೇಬಿಯಾ, ಮೇ 26– ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಒಂದಾದ ಈ ಸೌದಿ ಅರೇಬಿಯಾದಲ್ಲಿ ಇಸ್ಲಾಮಿಕ್ ಪದ್ಧತಿಗಳು ಹಾಗೂ ಕಾನೂನುಗಳನ್ನು ಮೀರುವ ಹಾಗಿಲ್ಲ. ಒಂದು ವೇಳೆ ಮೀರಿದರೆ ಅಂತಹವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. ಆದರೆ ಇದೀಗ ಸೌದಿ ಅರೇಬಿಯಾ ಮದ್ಯದ ವಿಚಾರದಲ್ಲಿ ಭಾರಿ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ. ಕಳೆದ ಎಪ್ಪತ್ತು ವರ್ಷಗಳಿಂದ ಇದ್ದ ಮದ್ಯ ನಿಷೇಧ ಕಾಯ್ದೆಯನ್ನು ಸ್ವಲ್ಪ ಮಟ್ಟಿಗೆ ಸಡಿಲಗೊಳಿಸಲಾಗಿದೆ.

ಸೌದಿ ಯೋಜನೆಯಾದ ವಿಷನ್–2030 ರಡಿಯಲ್ಲಿ ತನ್ನ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಅಷ್ಟೇ ಅಲ್ಲದೇ, ಸೌದಿ ಅರೇಬಿಯಾ 2034ರಲ್ಲಿ ಫಿಫಾ ವಿಶ್ವಕಪ್‌ಗೆ ಆತಿಥ್ಯ ವಹಿಸುತ್ತಿದ್ದು, ಇದು ಕೂಡ ತನ್ನ ಕಠಿಣ ನಿಯಮಗಳನ್ನು ಸಡಿಲಗೊಳಿಸಲು ಪ್ರಮುಖ ಕಾರಣವಾಗಿದೆ. ವಿಶ್ವಕಪ್‌ಗೆ ಸಿದ್ಧತೆಯ ಸಲುವಾಗಿ ಈ ರೀತಿ ನಿರ್ಧಾರವನ್ನು ಕೈಗೊಳ್ಳುತ್ತಿದೆ.

ಮದ್ಯ ಮಾರಾಟ ಈ ಸ್ಥಳಗಳಿಗೆ ಸೀಮಿತ: 2026 ರ ವೇಳೆಗೆ 600 ಕ್ಕೂ ಹೆಚ್ಚು ಪ್ರವಾಸಿ ತಾಣಗಳಲ್ಲಿ ಮದ್ಯ ಮಾರಾಟವನ್ನು ಪ್ರಾರಂಭಿಸುವ ಯೋಜನೆಯಿದೆ ಎನ್ನಲಾಗಿದೆ. ಐಷಾರಾಮಿ ಹೋಟೆಲ್‌ಗಳು, ಉನ್ನತ ದರ್ಜೆಯ ರೆಸಾರ್ಟ್‌ಗಳು, ರಾಜತಾಂತ್ರಿಕ ವಲಯ ಹಾಗೂ ಪ್ರವಾಸಿಗರಿಗಾಗಿ ಅಭಿವೃದ್ಧಿ ಪಡಿಸಲಾದ ಸ್ಥಳಗಳಲ್ಲಿ ಮಾತ್ರ ಮದ್ಯ ಮಾರಾಟ ಮಾಡಲಾಗುತ್ತದೆ. ಅನುಮತಿಸಲಾದ ಸ್ಥಳಗಳಲ್ಲಿ ಅಂತಾರಾಷ್ಟ್ರೀಯ ಪ್ರವಾಸಿಗರಿಗೆ ಹಾಗೂ ವಲಸಿಗರಿಗೆ ಮಾತ್ರ ಬಿಯರ್, ವೈನ್ ಹಾಗೂ ಸೈಡರ್ ಪೂರೈಸಲಾಗುತ್ತದೆ. ಆದರೆ ಬಲವಾದ ಆಲ್ಕೋಹಾಲ್ ಯುಕ್ತ ಪಾನೀಯಗಳು ಮಾರಾಟ ಮಾಡುವುದು ನಿಷೇಧವಾಗಿಯೇ ಇರುತ್ತದೆ. ಅದಲ್ಲದೇ ಮನೆ, ಸಾರ್ವಜನಿಕ ಸ್ಥಳಗಳು ಹಾಗೂ ಅಂಗಡಿಗಳಲ್ಲಿ ಮದ್ಯ ಲಭ್ಯವಿರುವುದಿಲ್ಲ

ಕನ್ನಡ ಬಾವುಟ ಸೃಷ್ಟಿಕರ್ತ ಮ. ರಾಮಮೂರ್ತಿ ಪತ್ನಿ ಕಮಲಮ್ಮ ನಿಧನ



ಬೆಂಗಳೂರು, ಮೇ 26– ಕನ್ನಡ ಚಳುವಳಿಯ ಕಟ್ಟಾಳು, ಕನ್ನಡ ಬಾವುಟ ಸೃಷ್ಟಿಸಿದ್ದ ಮ. ರಾಮಮೂರ್ತಿ ಅವರ ಪತ್ನಿ ಕಮಲಮ್ಮ ರಾಮಮೂರ್ತಿ (100) ಸೋಮವಾರ ನಿಧನರಾದರು. ಪತಿ ರಾಮಮೂರ್ತಿ ಮತ್ತು ಮಕ್ಕಳಾದ ದಿವಾಕರ ಮತ್ತು ಮಂಜುನಾಥ ಅವರು ಬಾವಿ ಕುಸಿದು ಮೃತಪಟ್ಟ ಬಳಿಕ 58 ವರ್ಷಗಳಿಂದ ಕಮಲಮ್ಮ ಒಂಟಿಯಾಗಿದ್ದರು.

ಶಾರದಾ ಕುಟೀರದಲ್ಲಿ ವಾಸವಾಗಿದ್ದ ಅವರಿಗೆ ಇತ್ತೀಚೆಗೆ ಅನಾರೋಗ್ಯ ಉಂಟಾಗಿತ್ತು. ಅವರನ್ನು ನೋಡಿಕೊಳ್ಳುವುದಕ್ಕಾಗಿ ಬನಶಂಕರಿ ಸೇವಾಕ್ಷೇತ್ರಕ್ಕೆ ಸ್ಥಳಾಂತರಿಸಲಾಗಿತ್ತು. ಮೃತರ ಅಂತಿಮ ದರ್ಶನಕ್ಕೆ ಬನಶಂಕರಿ ಸೇವಾಕ್ಷೇತ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ಬದುಕು ಬಂಧನ, ಸಾವು ಬಿಡುಗಡೆ: ಡಾ.ಸಿಪಿಕೆ ವ್ಯಾಖ್ಯಾನ

- ನೆನಪಿನಂಗಳದ ಭಾವಪೂರ್ಣ 'ಉಮಾಯಾನ' ಕಾರ್ಯಕ್ರಮ
- ಕೃತಿ, ಕ್ಯಾಲೆಂಡರ್, ಸಾಕ್ಷ್ಯಚಿತ್ರ, ಹಾಡುಗಳ ಬಿಡುಗಡೆ



ಮೈಸೂರು ವಿಜಯನಗರದ ಕಸಾಪದಲ್ಲಿ ಸೋಮವಾರ ಉಮಾಯಾನ– ಉಮಾ ರಮೇಶ್ ಅವರ ಜೀವನ ಹಾಗೂ ಸಾಧನೆಯ ಲೇಖನ– ಕವನ ಸಂಕಲನವನ್ನು ಸಾಹಿತಿ ಡಾ.ಸಿಪಿಕೆ ಬಿಡುಗಡೆ ಮಾಡಿದರು.

ಮೈಸೂರು, ಮೇ 26– ಬದುಕು ಬಂಧನ, ಸಾವು ಬಿಡುಗಡೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ವ್ಯಾಖ್ಯಾನಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅಭಿರುಚಿ ಬಳಗ ಹಾಗೂ ಆಸಕ್ತಿ ಪ್ರಕಾಶನ, ಎನ್.ವಿ. ರಮೇಶ್ ಕಲಾ ಬಳಗ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ವಿಜಯನಗರದ ಸಾಹಿತ್ಯ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ ಉಮಾಯಾನ– ಉಮಾ ರಮೇಶ್ ಅವರ ಜೀವನ– ಸಾಧನೆಯ ಬಗ್ಗೆ ಲೇಖನ ಹಾಗೂ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಸಾವು ಶಾಂತವಾಗುವ, ಅನಂತವಾಗುವ ಪ್ರಕ್ರಿಯೆ. ಅದ್ವೈತ ಸ್ಥಿತಿ. ಪ್ರಕೃತಿಯೊಂದಿಗೆ ಜೀವನಯಾನ ಎಂದರು.


ಹುಟ್ಟು– ಸಾವು ಎಂಬುದಕ್ಕೆ ಕೊನೆಯಿಲ್ಲ. 'ಪುನರಪಿ ಜನನಂ, ಪುನರಪಿ ಮರಣಂ' ಎಂದು ಹೇಳಲಾಗುತ್ತದೆ. ಸಾವಿಗೆ ದೈವಾಧೀನ, ನಿಧನ, ವೈಕುಂಠವಾಸಿ ಹೀಗೆ ಹಲವಾರು ಪದಗಳನ್ನು ಬಳಸುತ್ತಾರೆ. ಆದರೆ 'ಕಾಲಕ್ಕೈ'ವಾದರು ಎಂಬುದು ಸಾವಿಗೆ ತಕ್ಕ ಪದ ಎಂದು ಹೇಳಿದರು.

ಪತ್ನಿ ಹೇಮಾವತಿ ಅವರು ತೀರಿಕೊಂಡಾಗ ಕುವೆಂಪು ಅವರು 'ಮರಣ ಯಾರಿಗೂ ತಪ್ಪಿದ್ದಲ್ಲ. ಆದರೆ ಇಷ್ಟು ದಿನ ಜೊತೆಗಿದ್ದವರು ಅಗಲಿದ್ದು ಬೇಸರ ತಂದಿದೆ ಎಂದಿದ್ದರು. ಅದರಂತೆ ಆತ್ಮ ಅಮರ, ದೇಹ ನಶ್ವರ ಎಂದು ಸಿಪಿಕೆ ಹೇಳಿದರು.

ಮೇಲುಕೋಟೆ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಉಮಾಯಾನ ಕೃತಿಯನ್ನು ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಕ್ಯಾಲೆಂಡರ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಾಕ್ಷ್ಯಚಿತ್ರವನ್ನು ಬೆಂಗಳೂರು ಆಕಾಶವಾಣಿ ಹಿರಿಯ ಉದ್ಘೋಷಕಿ ಬಿ.ಕೆ. ಸುಮತಿ ಬಿಡುಗಡೆ ಮಾಡಿದರು. ಮೈಸೂರು ಆಕಾಶವಾಣಿ ನಿವೃತ್ತ ಸಹಾಯಕ ನಿರ್ದೇಶಕಿ ರಾಜಲಕ್ಷ್ಮೀ ಶ್ರೀಧರ್, ಅಭಿರುಚಿ ಬಳಗದ ಅಧ್ಯಕ್ಷ ಎನ್.ವಿ. ರಮೇಶ್ ಮಾತನಾಡಿದರು. ಉಮಾ ಅವರನ್ನು ಕುರಿತ ಹಾಡುಗಳನ್ನೂ ಕೂಡ ಬಿಡುಗಡೆ ಮಾಡಲಾಯಿತು.

ಪ್ರಜ್ವಲ್ ರೇವಣ್ಣ ಮೊಬೈಲ್‌ನಲ್ಲಿ 2 ಸಾವಿರ ಅಶ್ಲೀಲ ಫೋಟೋ, 40–50 ವೀಡಿಯೋ

ಕೋರ್ಟ್ ಮುಂದೆ ಕಾರು ಚಾಲಕ ಸ್ಫೋಟಕ ಸಾಕ್ಷ್ಯ



ಬೆಂಗಳೂರು, ಮೇ 26– ಅಶ್ಲೀಲ ವೀಡಿಯೋ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲಿನಲ್ಲಿದ್ದು, ಪ್ರಜ್ವಲ್ ರೇವಣ್ಣ ಮೊಬೈಲ್‌ನಲ್ಲಿ 2 ಸಾವಿರ ಅಶ್ಲೀಲ ಫೋಟೋ, 40 ರಿಂದ 50 ವೀಡಿಯೋಗಳಿದ್ದವು ಎಂದು ಅವರ ಕಾರು ಚಾಲಕ ಕಾರ್ತಿಕ್ ಇಂದು (ಮೇ 26) ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ಸ್ಫೋಟಕ ಸಾಕ್ಷ್ಯ ನುಡಿದಿದ್ದಾರೆ.

ಕೋರ್ಟ್ ಮುಂದೆ ಕಾರ್ತಿಕ್ ನೀಡಿರುವ ಹೇಳಿಕೆ ವಿವರ: 2009ರಿಂದ ಹೆಚ್.ಡಿ.ರೇವಣ್ಣ ಬಳಿ ಡ್ರೈವರ್ ಆಗಿದ್ದೆ. ನಂತರ ಭವಾನಿ ರೇವಣ್ಣ, ಸೂರಜ್ ರೇವಣ್ಣ ಕಾರಿಗೂ ಚಾಲಕನಾಗಿದ್ದೆ. 2018ರಿಂದ ಪ್ರಜ್ವಲ್ ರೇವಣ್ಣ ಕಾರು ಚಾಲಕನಾಗಿ ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ಕ್ಷೇತ್ರ ಸಂಚಾರ ಮಾಡುತ್ತಿದ್ದಾಗ ಕಾರಿನಲ್ಲೇ ಪ್ರಜ್ವಲ್ ರೇವಣ್ಣ ಮೊಬೈಲ್‌ನಲ್ಲಿ ಅಶ್ಲೀಲ ದೃಶ್ಯ ವೀಕ್ಷಿಸುತ್ತಿದ್ದರು. ನಾನು ಅವರ ಕಡೆ ನೋಡಿದಾಗ ಫೋನ್ ತಿರುಗಿಸಿಕೊಳ್ಳುತ್ತಿದ್ದರು ಎಂದು ಕೋರ್ಟ್ ಮುಂದೆ ಸಾಕ್ಷ್ಯ ನುಡಿದಿದ್ದಾರೆ.

ಪ್ರಜ್ವಲ್ ರೇವಣ್ಣ ಮೊಬೈಲ್ ಪಾಸ್‌ವರ್ಡ್ ನನಗೆ ತಿಳಿದಿತ್ತು. ಒಂದು ದಿನ ಜಯನಗರದ ಅವರ ಗೆಳತಿ ಮನೆಗೆ ಹೋದಾಗ ಕಾರಿನಲ್ಲಿ ಮೊಬೈಲ್ ಬಿಟ್ಟಿದ್ದರು. ಆಗ ಮೊಬೈಲ್ ತೆಗೆದು ನೋಡಿದಾಗ ಅದರಲ್ಲಿ 2 ಸಾವಿರ ಅಶ್ಲೀಲ ಫೋಟೋ, 40 ರಿಂದ 50 ವೀಡಿಯೋಗಳಿದ್ದವು. ಭವಾನಿ ರೇವಣ್ಣರಿಗೆ ತೋರಿಸಲೆಂದು ವಿಡಿಯೋಗಳನ್ನು ನನ್ನ ಫೋನ್‌ಗೆ ವರ್ಗಾಯಿಸಿಕೊಂಡೆ. ಮಗನಿಗೆ ಬುದ್ಧಿ ಹೇಳಲಿ ಎಂದು ಭವಾನಿ ರೇವಣ್ಣರಿಗೆ ಮಾಹಿತಿ ನೀಡಿದ್ದೆ ಎಂದಿದ್ದಾರೆ.

ಆಗ ಭವಾನಿ ರೇವಣ್ಣ ಅವರು ಫೋಟೋ, ವೀಡಿಯೋ ತಮಗೆ ಕಳುಹಿಸಲು ಕೋರಿದ್ದರು. ಅಲ್ಲದೇ ಬೇರೆಲ್ಲೂ ಈ ವಿಷಯ ಬಹಿರಂಗಪಡಿಸದಂತೆ ಮನವಿ ಮಾಡಿದ್ದರು. ಇದಾದ ಬಳಿಕ ಭವಾನಿ ರೇವಣ್ಣ, ಪ್ರಜ್ವಲ್ ಜೊತೆ ಮಾತು ಬಿಟ್ಟಿದ್ದರು. ಹುಟ್ಟುಹಬ್ಬಕ್ಕೆ ಭವಾನಿ ಶುಭ ಕೋರಿದಾಗ ಪ್ರಜ್ವಲ್ ಪ್ರತಿಕ್ರಿಯಿಸಲಿಲ್ಲ. ವೀಡಿಯೋ ಬಗ್ಗೆ ತಿಳಿಸಿದ್ದು ಯಾರೆಂದು ಕೇಳಿದಾಗ ಭವಾನಿ ನನ್ನ ಹೆಸರು ಹೇಳಿದ್ದರು. ಆಗ ಫೋನ್ ಮಾಡಿ ಪ್ರಜ್ವಲ್ ತನಗೆ ಬೈದಿದ್ದಾರೆ ಎಂದು ಚಾಲಕ ಕಾರ್ತಿಕ್ ಕೋರ್ಟ್ ಮುಂದೆ ಹೇಳಿದ್ದಾರೆ.

ವೀಡಿಯೋ ಬಹಿರಂಗಗೊಂಡಿದ್ದೇಗೆ?: ನಮ್ಮ ನಡುವೆ ಜಗಳವಾಗಿ 2022ರಲ್ಲಿ ನಾನು ಕೆಲಸ ಬಿಟ್ಟೆ, ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಕೇಸ್ ಕೂಡಾ ಹಾಕಿದ್ದೆ. ಆಸ್ತಿ ವಿವಾದ ಬಗೆಹರಿಸುತ್ತೇನೆ ಕೆಲಸಕ್ಕೆ ಬರುವಂತೆ ಕರೆದಿದ್ದರು. ಆದರೆ ವಿಡಿಯೋ ಬಹಿರಂಗಪಡಿಸದಂತೆ ತಡೆಯಾಜ್ಞೆ ತಂದರು. ನನ್ನನ್ನು ಪ್ರತಿವಾದಿ ಮಾಡಿದ್ದರಿಂದ ವಕೀಲ ದೇವರಾಜೇಗೌಡರನ್ನು ಸಂಪರ್ಕಿಸಿದೆ. ಸಾಕ್ಷಿಯಾಗಿ ಫೋಟೋಗಳನ್ನು ನೀಡುವಂತೆ ಸೂಚಿಸಿದ್ದರಿಂದ ಪೆನ್ ಡ್ರೈವ್‌ನಲ್ಲಿ ನೀಡಿದೆ. ಆದರೆ, ಚುನಾವಣೆ ವೇಳೆ ಫೋಟೋ, ವೀಡಿಯೋಗಳು ಬಹಿರಂಗಗೊಂಡವು ಎಂದು ಕಾರ್ತಿಕ್, ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ಸಾಕ್ಷ್ಯ ನುಡಿದಿದ್ದಾರೆ.

ಮಹಿಳಾ ಕುಸ್ತಿಪಟುಗೆ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬ್ರಿಜ್ ಭೂಷಣ್ ಶರಣ್ ಸಿಂಗ್‌ಗೆ ಖುಲಾಸೆ



ನವದೆಹಲಿ, ಮೇ 26– ಭಾರತೀಯ ಕುಸ್ತಿಪಟು ನಿಗಮದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಗೆ ದೆಹಲಿ ನ್ಯಾಯಾಲಯದಿಂದ ಖುಲಾಸೆಗೊಂಡಿದ್ದಾರೆ. ನವದೆಹಲಿಯ ಪಟಿಯಾಲ ಹೌಸ್ ನ್ಯಾಯಾಲಯವು ಬ್ರಿಜ್ ಭೂಷಣ್ ಸಿಂಗ್ ವಿರುದ್ಧದ ಪೋಕ್ಸೋ ಪ್ರಕರಣದಲ್ಲಿ ದೆಹಲಿ ಪೊಲೀಸರ ಮುಕ್ತಾಯ ವರದಿಯನ್ನು ಸ್ವೀಕರಿಸುವುದರೊಂದಿಗೆ, ಬಿಗ್ ರಿಲೀಫ್ ಸಿಕ್ಕಿದೆ.

ಕೆಲ ವರ್ಷಗಳ ಹಿಂದೆ ಮಹಿಳಾ ಕುಸ್ತಿಪಟುಗಳು ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಶೋಷಣೆ ಆರೋಪ ಮಾಡಿದ್ದರು. ಇದಾದ ನಂತರ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ವಿನೇಶ್ ಫೋಗಟ್, ಬಜರಂಗ್ ಪೂನಿಯಾ ಮತ್ತು ಇತರರು ಬ್ರಿಜ್ ಭೂಷಣ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಜಂತರ್ ಮಂತರ್‌ನಲ್ಲಿ ದೀರ್ಘಕಾಲ ಪ್ರತಿಭಟನೆ ನಡೆಸಿದ್ದರು. ಆದಾಗ್ಯೂ, ಬ್ರಿಜ್ ಭೂಷಣ್ ಶರಣ್ ಸಿಂಗ್ ಆರಂಭದಿಂದಲೂ ತಮ್ಮ ವಿರುದ್ಧದ ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದರು. ಆರೋಪಗಳು ನಿಜವೆಂದು ಸಾಬೀತಾದರೆ, ನನ್ನನ್ನು ಗಲ್ಲಿಗೇರಿಸಬೇಕೆಂದು ಸಹ ಅವರು ಒಮ್ಮೆ ಹೇಳಿದ್ದರು.

ಇದಕ್ಕೂ ಮುನ್ನ ಆಗಸ್ಟ್ 1, 2023ರಂದು, ಸಂತ್ರಸ್ತೆ ಕುಸ್ತಿಪಟು ಮತ್ತು ಅವರ ತಂದೆ ದೆಹಲಿ ಪೊಲೀಸರ ತನಿಖೆಯಿಂದ ತೃಪ್ತರಾಗಿರುವುದಾಗಿ ಮತ್ತು ಮುಕ್ತಾಯ ವರದಿಗೆ ಯಾವುದೇ ಆಕ್ಷೇಪವಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದರು. ಅದರಂತೆ, 2025ರ ಮೇ 17ರಂದು, ಪಟಿಯಾಲ ಹೌಸ್ ನ್ಯಾಯಾಲಯವು ಆರೋಪಿಯನ್ನು ಮತ್ತೊಮ್ಮೆ ತನ್ನ ಹೇಳಿಕೆಯನ್ನು ದಾಖಲಿಸಲು ಕರೆದಿತ್ತು. ಅಂತಿಮವಾಗಿ, ಮೇ 26, 2025ರಂದು, ನ್ಯಾಯಾಲಯವು ಪೊಲೀಸರ ಮುಕ್ತಾಯ ವರದಿಯನ್ನು ಅಂಗೀಕರಿಸಿ, ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಈ ಪ್ರಕರಣದಿಂದ ಖುಲಾಸೆಗೊಳಿಸಿದೆ.

ಆದಾಗ್ಯೂ ಆರು ಮಹಿಳಾ ಕುಸ್ತಿಪಟುಗಳ ದೂರಿನ ಆಧಾರದ ಮೇಲೆ, ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಅವರ ಸಹಾಯಕ ವಿನೋದ್ ತೋಮರ್ ವಿರುದ್ಧ ರೌಸ್ ಅವೆನ್ಯೂ ನ್ಯಾಯಾಲಯದಲ್ಲಿ ಲೈಂಗಿಕ ಕಿರುಕುಳ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆ ಇನ್ನೂ ನಡೆಯುತ್ತಿದೆ. ಈ ಪ್ರಕರಣದಲ್ಲಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ವಿನೋದ್ ತೋಮರ್ ವಿರುದ್ಧ ಆರೋಪಗಳು ರೂಪಿತವಾಗಿದ್ದು, ಸಾಕ್ಷಿಗಳ ಹೇಳಿಕೆಗಳ ದಾಖಲಾತಿ ಪ್ರಕ್ರಿಯೆ ಜನವರಿ 2025ರಲ್ಲಿಯೂ ಮುಂದುವರಿದಿದೆ.

ಇದರೊಂದಿಗೆ ಕಳೆದ 2024ರ ಮೇ ತಿಂಗಳಲ್ಲಿ, ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಿಯಾಂಕಾ ರಜಪೂತ್ ಅವರು ಬ್ರಿಜ್ ಭೂಷಣ್ ವಿರುದ್ಧ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ACMM) ಪ್ರಿಯಾಂಕಾ ರಜಪೂತ್ ಅವರು ಬ್ರಿಜ್ ಭೂಷಣ್ ವಿರುದ್ಧ ಐಪಿಸಿ ಸೆಕ್ಷನ್ 354 (ಮಹಿಳೆಯ ನಮ್ರತೆಯನ್ನು ಕೆಡಿಸುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲವಂತ), 354A (ಲೈಂಗಿಕ ಕಿರುಕುಳ) ಮತ್ತು 506 (ಕ್ರಿಮಿನಲ್ ಬೆದರಿಕೆ) ಅಡಿಯಲ್ಲಿ ಆರೋಪಗಳನ್ನು ರೂಪಿಸಲು ನಿರ್ದೇಶಿಸಿದ್ದರು. "ಆರೋಪಿಗಳ ವಿರುದ್ಧ ಆರೋಪ ಹೊರಿಸಲು ಸಾಕಷ್ಟು ಪುರಾವೆಗಳಿವೆ ಎಂದು ನ್ಯಾಯಾಧೀಶರು ತಿಳಿಸಿದ್ದರು.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕೋಟೆಗೆ ಕೊನೆ ಸ್ಥಾನ

ಶಾಸಕ ಅನಿಲ್ ಅಸಮಾಧಾನ, ಅಧಿಕಾರಿಗಳಿಗೆ ತರಾಟೆ

ಹೆಚ್.ಡಿ.ಕೋಟೆ, ಮೇ 26– ಶಿಕ್ಷಣ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ತಾಲೂಕಿಗೆ ಕೊನೆ ಸ್ಥಾನ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿ ಅಧಿಕಾರಿಗಳನ್ನು ಶಾಸಕ ಅನಿಲ್ ತರಾಟೆ ತೆಗೆದುಕೊಂಡರು.



ಹೆಚ್.ಡಿ.ಕೋಟೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ 20 ಅಂಶಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ 2 ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹೆಚ್.ಡಿ.ಕೋಟೆ ಕೊನೆ ಸ್ಥಾನ ಪಡೆದಿದೆ. ಆದರೆ ತಾಲೂಕಿನಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ದೃಷ್ಟಿಯಿಂದ ನಾನು ಸಾವಿರಾರು ಕೋಟಿ ಅನುದಾನ ತಂದು ಶಾಲಾ ಕೊಠಡಿಗಳು ಸೇರಿದಂತೆ ಮೂಲ ಸೌಕರ್ಯ ಒದಗಿಸಿದ್ದು, ಜೊತೆಗೆ ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಗುತ್ತಿಗೆ ಶಿಕ್ಷಕರನ್ನು ಈಗಾಗಲೇ ನೇಮಕ ಮಾಡಿದ್ದರೂ ಕೂಡ ಫಲಿತಾಂಶ ಸುಧಾರಣೆ ಕಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಬಗ್ಗೆ ಈಗಿನಿಂದಲೇ ಹೆಚ್ಚಿನ ಜಾಗೃತಿ ವಹಿಸಿ ಉತ್ತಮ ಫಲಿತಾಂಶ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕಳೆದ ಬಾರಿ ಸಭೆಯ ಅನುಪಾಲನಾ ವರದಿ ಆಧಾರದ ಮೇಲೆ ಈ ಸಭೆಯಲ್ಲಿ ಬರೀ 9 ಇಲಾಖೆ ಅಧಿಕಾರಿಗಳು ಮಾತ್ರ ವರದಿ ನೀಡಿದ್ದಾರೆ. ಹೀಗಾಗಿ ವರದಿ ನೀಡದ ಇತರ ಇಲಾಖೆ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡುವಂತೆ ಆದೇಶಿಸಿದರು.

ಕಬಿನಿ ಜಲಾಶಯದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಸೇತುವೆ ಸೇರಿದಂತೆ ಸುಮಾರು 55 ಕೋಟಿ ವೆಚ್ಚದ ಕಾಮಗಾರಿ ಆರಂಭವಾಗಿದ್ದು, ಕಳೆದ ಕೆಡಿಪಿ ಸಭೆಯಲ್ಲಿ 2025ರ ಮೇ ತಿಂಗಳಲ್ಲಿ ಪೂರ್ಣವಾಗುತ್ತದೆ ಎಂದು ಎಇಇ ಗಣೇಶ್ ಮಾಹಿತಿ ನೀಡಿದ್ದೀರಿ. ಆದರೆ ಇನ್ನೂ ಪೂರ್ಣಗೊಂಡಿಲ್ಲ. ಆದ್ದರಿಂದ ಸೇತುವೆ ನಿರ್ಮಾಣ ಕಾಮಗಾರಿಯನ್ನು ಶೀಘ್ರದಲ್ಲಿ ಮುಗಿಸುವಂತೆ ಸೂಚಿಸಿದರು.

ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಜನರಿಗೆ ಅನಾನುಕೂಲ ಆಗದಂತೆ ಎಚ್ಚರ ವಹಿಸಲು ಕೋಟೆ, ಸರಗೂರು ತಾಲೂಕಿನ ಅಧಿಕಾರಿಗಳ ಟಾಸ್ಕ್ ಫೋರ್ಸ್ ಸಮಿತಿ ರಚಿಸುವಂತೆ ತಹಸೀಲ್ದಾರ್‌ಗಳಿಗೆ ಸೂಚಿಸಿದರು.

ಕಳೆದ ಬಾರಿ ಮಳೆ ಹಾನಿ ಪರಿಹಾರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಗೊಂದಲಗಳು ಉಂಟಾಗಿತ್ತು. ಆದರೆ ಈ ಬಾರಿ ಕಟ್ಟುನಿಟ್ಟಾಗಿ ಕಂದಾಯ, ತೋಟಗಾರಿಕೆ, ಕೃಷಿ ಇಲಾಖೆ ಅಧಿಕಾರಿಗಳು ಹಾನಿಗೊಳಗಾದ ಪ್ರದೇಶ ಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ವರದಿ ನೀಡುವಂತೆ ತಾಕೀತು ಮಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಎಂ.ಸಿ.ತಳಲು, ಎನ್.ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಇಲ್ಲದಿರುವ ಬಗ್ಗೆ ಹಾಗೂ ಡಿ.ಬಿ.ಕುಪ್ಪೆ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಕೊರತೆಯನ್ನು ಶಾಸಕರ ಗಮನಕ್ಕೆ ತಂದರು. ಶಾಸಕರು ಎನ್.ಬೇಗೂರು ಹಾಗೂ ಡಿ.ಬಿ.ಕುಪ್ಪೆ ನಿರ್ವಹಣೆಗಾಗಿ ಖಾಸಗಿ ಸಂಸ್ಥೆಗಳ ಜೊತೆ ಮಾತುಕತೆ ನಡೆಸಿ ಎಂದು ಸಲಹೆ ನೀಡಿದರು.

ಜಮೀನು ವಿಚಾರಗಳಲ್ಲಿ ಪೊಲೀಸ್ ಇಲಾಖೆ ನೇರವಾಗಿ ಭಾಗಿಯಾಗದೆ ತಹಸೀಲ್ದಾರ್ ಅವರ ಗಮನಕ್ಕೆ ತಂದು ನಂತರ ಮುಂದುವರೆಯಬೇಕು. ತಾಲೂಕಿನಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮವಹಿಸಬೇಕು ಎಂದರು.

ಈ ವೇಳೆ ಕೋಟೆ, ಸರಗೂರು, ತಹಸೀಲ್ದಾರ್‌ಗಳಾದ ಶ್ರೀನಿವಾಸ್, ಮೋಹನ್ ಕುಮಾರಿ, ಧರಣೇಶ್, ಪ್ರೇಮ್ ಕುಮಾರ್, ರವಿಕುಮಾರ್, ಗಣೇಶ್, ರಾಮೇಗೌಡ, ಸುರೇಶ್, ಸಂತೋಷ್, ಉಷಾ, ಶಿವರಾಜ್, ವಸಂತ್, ಹರ್ಷಿತ, ಶಶಿಕಲಾ, ದೀಪ ಮಹಾಲಕ್ಷ್ಮಿ, ಮಂಜುನಾಥ್, ಗಂಗಾಧರ್, ಪ್ರಸನ್ನ ಕುಮಾರ್, ನೇತ್ರಾವತಿ, ಜಯರಾಮ್, ಕೃಷ್ಣಯ್ಯ, ನಾಗೇಂದ್ರಯ್ಯ, ವೈಡಿ ರಾಜಣ್ಣ, ಸತೀಶ್, ಅಮೃತೇಶ್, ಮಂಜು, ಮಾದೇವ್, ಚಂದು ಕುಮಾರ್, ಗ್ಯಾರಂಟಿ ಯೋಜನೆ ಅಧ್ಯಕ್ಷರಾದ ಚಾಮ ರಾಜು, ಚೆಲುವರಾಜು, ಕೆಡಿಪಿ ಸಮಿತಿ ಸದಸ್ಯರಾದ ಗಣೇಶ್ ಆಚಾರ್, ಅನಿತಾ, ಕಾಳಸ್ವಾಮಿ, ಉಪಹಾರಿ, ಸುರೇಶ್, ಗಿರೀಶ್ ಇನ್ನಿತರರಿದ್ದರು.

ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ



ತಿ.ನರಸೀಪುರ, ಮೇ 26– ಪಟ್ಟಣದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಕಬಿನಿ ಅತಿಥಿ ಗೃಹದಲ್ಲಿ ನಡೆದ ದಲಿತ ಸಂಘರ್ಷ ಸಮಿತಿ ಬಣ ರಹಿತ ಸಭೆಯಲ್ಲಿ ನಿರ್ಧರಿಸಲಾಯಿತು.

ಸಮಿತಿ ತಾಲೂಕು ಶಾಖೆ ವತಿಯಿಂದ ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಭಗವಾನ್ ಗೌತಮ ಬುದ್ಧ, ಕ್ರಾಂತಿಕಾರಿ ಬಸವಣ್ಣ ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿಯನ್ನು ಅದ್ದೂರಿ ಯಾಗಿ ಆಯೋಜಿಸಲು ಕರೆಯಲಾಗಿದ್ದ ಸಭೆಯಲ್ಲಿ ವಿವಿಧ ಸಮುದಾಯಗಳ ಮುಖಂಡರು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಹಲವು ಸಲಹೆ ಸೂಚನೆ ನೀಡಿದರು.

ದಲಿತ ಸಂಘರ್ಷ ಸಮಿತಿ ಬಣ ರಹಿತ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಮಾತನಾಡಿ, ಅಂತಿಮವಾಗಿ ಮುಂದಿನ ವಾರ ಮತ್ತೊಂದು ಸಭೆ ನಡೆಸಿ, ರೂಪುರೇಷೆ ಆರಂಭಿಸಲು ನಿಮ್ಮೆಲ್ಲರ ಸಹಕಾರ ಹಾಗೂ ಸಮ್ಮತಿ ಬೇಕು ಎಂದರು.

ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ಸಂಘಟನಾ ಸಂಚಾಲಕರಾದ ಚಂದಳ್ಳಿ ಮಲ್ಲೇಶ್, ಅಶ್ವಥ್ ನರೀಪುರ, ಉಪನ್ಯಾಸಕ ಕುಮಾರಸ್ವಾಮಿ, ಸಮಾಜ ಸೇವಕ ಸಿದ್ದಲಿಂಗಮೂರ್ತಿ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಬಾಬು ಜಗಜೀವನ್ ರಾಮ್ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಬಾಲಾಜಿ ಟ್ರೇಡರ್ಸ್‌ನ ಶ್ರೀಕಾಂತ್, ಮುಖಂಡರಾದ ಹೆಳವರಹುಂಡಿ ನಾಗೇಂದ್ರ, ನಿಂಗರಾಜು, ಮೂಗೂರು ಮಹದೇವಸ್ವಾಮಿ, ತುಂಬಲ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಸಿ.ಬಿ.ಹುಂಡಿ ನಾಗೇಶ್, ಮರಡೀಪುರ ಮಲ್ಲಿಕಾರ್ಜುನ ಹಾಗೂ ಇತರರು ಇದ್ದರು.

ಮಳೆ: ಧರ್ಮಾಪುರ, ಹನಗೋಡಲ್ಲಿ ಅಪಾರ ಹಾನಿ





ಹುಣಸೂರು, ಮೇ 26– ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಗೆ ತಾಲೂಕಿನ ಧರ್ಮಾಪುರ ಹಾಗೂ ಹನಗೋಡು ಭಾಗದಲ್ಲಿ ಅಪಾರ ಹಾನಿ ಸಂಭವಿಸಿದೆ.

ಎಡೆಬಿಡದೆ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ತಾಲೂಕಿನ ಹನಗೋಡಿನ ಚೆನ್ನಯ್ಯನಕಟ್ಟೆ ಬಳಿ ಭಾರೀ ಗಾತ್ರದ ಅರಳಿಮರ ಬುಡ ಸಮೇತ ರಸ್ತೆಗೆ ಉರುಳಿ ಬಿದ್ದು ಹನಗೋಡು–ಪಂಚವಳ್ಳಿ ಮುಖ್ಯ ರಸ್ತೆ ಸಂಚಾರ ಬಂದ್ ಆಗಿದೆ. ಮತ್ತೊಂದೆಡೆ ಹನಗೋಡು–ಪಂಚವಳ್ಳಿ ಮುಖ್ಯ ರಸ್ತೆಯ ಹೆಬ್ಬಾಳ ಗ್ರಾಮದ ಸೇತುವೆ ಮೇಲೆ ಭಾರೀ ನೀರು ಹರಿಯುತ್ತಿದ್ದು ಸಂಚಾರ ಅಸ್ತವ್ಯಸ್ತಗೊಂಡಿದೆ. ಇದರಿಂದಾಗಿ ಅಬ್ಬೂರು, ಸಿಂಡೇನಹಳ್ಳಿ, ನೇಗತ್ತೂರು, ಕಚುವಿನಹಳ್ಳಿ, ನೇರಳಕುಪ್ಪೆ ಕಾಳಬೋಚನಹಳ್ಳಿ, ಉಡುವೆಪುರ ಗ್ರಾಮಕ್ಕೆ ಸಂಪರ್ಕವಿಲ್ಲದೆ ಪರದಾಡುವಂತಾಗಿದೆ.

ಕಸಬಾ ಹೋಬಳಿಯ ಗೌರಿಪುರ–ನಂಜಾಪುರ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ದೊಡ್ಡ ಮರ ಬಿದ್ದು 3 ಗಂಟೆಗಳ ಕಾಲ ರಸ್ತೆ ಸಂಪರ್ಕ ಕಡಿತವಾಗಿದ್ದು, ಮರ ತೆರವುಗೊಳಿಸಿದ್ದರಿಂದ ಸಂಚಾರ ಸುಗುಮವಾಯಿತು. ಅಲ್ಲದೇ ಈ ಭಾಗದ ಹಳ್ಳಿಗಳಲ್ಲಿ ತಡವಾಗಿ ಹೊಗೆ ಸೊಪ್ಪು ನಾಟಿ ಮಾಡಿದ್ದು, ಮಳೆಯಿಂದ ಸಸಿಗಳು ನೀರಿನಲ್ಲಿ ಮುಳುಗಿ ಕೊಳೆಯುವ ಸ್ಥಿತಿಗೆ ಬಂದಿವೆ. ಹಲವೆಡೆ ರಸ್ತೆಯಲ್ಲಿ ಮಳೆ ನೀರು ನಿಂತು ಜಮೀನಿಗೆ ತೆರಳಲಾಗದಷ್ಟು ಹಾಳಾಗಿವೆ.

ತಾಲೂಕಿನ ಹನಗೋಡು ಕುಂಟೇರಿ ಕೆರೆ ಏರಿ ಬಳಿ ವಿದ್ಯುತ್ ತಂತಿ ತುಂಡಾಗಿ ಬಿದ್ದು ಗ್ರಾಮದ ತಮ್ಮಣ್ಣಶೆಟ್ಟಿ ಅವರ ಹಸು ಸ್ಥಳದಲ್ಲೇ ಸಾವನ್ನಪ್ಪಿದೆ. ಅಲ್ಲದೆ ಚೆನ್ನಯ್ಯನಕಟ್ಟೆ ಬಳಿ ಮರ ಬಿದ್ದು ವಿದ್ಯುತ್ ತಂತಿ ಹಾಗೂ ಕಂಬಗಳು ಮುರಿದು ಬಿದ್ದಿವೆ. ಭಾರೀ ಮಳೆಯಿಂದಾಗಿ ತಾಲೂಕಿನ ಬಿ.ಆರ್.ಕಾವಲ್ ಗ್ರಾಮದ ಅಡಿಕೆ ತೋಟ ಸೇರಿದಂತೆ ಈ ಭಾಗದ ಮುಸುಕಿನ ಜೋಳ, ತಂಬಾಕು, ಶುಂಠಿ ಬೆಳೆಗಳೆಲ್ಲಾ ಜಲಾವೃತಗೊಂಡಿವೆ. ತಾಲೂಕಿನ ಕೊಳುವಿಗೆ ಗ್ರಾಮದ ಕುಮಾರ ಹಾಗೂ ಅಂಬೇಡ್ಕರ್ ಹೊಸೂರು ಗ್ರಾಮದ ಕಮಲಮ್ಮ ಅವರ ವಾಸದ ಮನೆ ಗೋಡೆ ಕುಸಿದು ಬಿದ್ದಿವೆ. ಆದರೆ ಯಾವುದೆ ಪ್ರಾಣಾಪಾಯ ಸಂಭವಿಸಿಲ್ಲ.

ಸಮೃದ್ಧ ಭಾರತ ನಿರ್ಮಾಣಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಸ್ವಾಭಿಮಾನಿ ಸಮಾವೇಶವನ್ನು ಗಣ್ಯರು ಉದ್ಘಾಟಿಸಿದರು.

ಹುಣಸೂರು, ಮೇ 26– ಸಮೃದ್ಧ ಭಾರತ ನಿರ್ಮಾಣದಲ್ಲಿ ಅಂಬೇಡ್ಕರ್ ಕೊಡುಗೆ ಅಪಾರ. ಅವರ ಅಪರಿಮಿತ ಜನಪರ ಕಾರ್ಯಕ್ರಮಗಳು ಇಂದಿಗೂ ದೇಶದ ಬೆಳವಣಿಗೆಗೆ ಪೂರಕ ವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ನಗರದ ನಗರಸಭಾ ಮೈದಾನದಲ್ಲಿ ಸ್ವಾಭಿಮಾನಿ ವೇದಿಕೆಯಿಂದ ಆಯೋಜಿಸಿದ್ದ 134ನೇ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಸ್ವಾಭಿಮಾನಿ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬೇಡ್ಕರ್ ಎಲ್ಲರ ಒಳಿತಿಗಾಗಿ ಸಂವಿಧಾನದ ಜೊತೆಗೆ ಬಾಕ್ರನಂಗಲ್ ಅಣೆಕಟ್ಟು ನಿರ್ಮಾಣ, ನೀರಾವರಿ ಹಾಗೂ ಅದರ ನಿರ್ವಹಣೆ, ಕೃಷಿಗೆ ಆದ್ಯತೆ, ಕೈಗಾರಿಕೆಗಳ ಸ್ಥಾಪನೆ, ಮಹಿಳೆಯರ ಆಸ್ತಿಹಕ್ಕು, ಕಾರ್ಮಿಕರಿಗಾಗಿ ವಿವಿಧ ಕಾರ್ಯಕ್ರಮ, ರಿಸರ್ವ್ ಬ್ಯಾಂಕ್ ಸ್ಥಾಪನೆ, ಹೀಗೆ ಅನೇಕ ಜನಪರ ಕಾರ್ಯಕ್ರಮಗಳ ಮೂಲಕ ದೇಶದ ಪ್ರಗತಿ, ಭಾರತ ಒಳಿತಿಗಾಗಿ ದೊಡ್ಡ ಕೊಡುಗೆ ನೀಡಿರುವುದನ್ನು ಜನರಿಗೆ ತಿಳಿಸಬೇಕಿದೆ.

ಅಂಬೇಡ್ಕರ್ ಅವರು ವಾಕ್ ಮತ್ತು ಧಾರ್ಮಿಕ ಸ್ವಾತಂತ್ರ್ಯದೊಂದಿಗೆ 140 ಕೋಟಿ ಜನರನ್ನು ರಕ್ಷಣೆ ಮಾಡುವ ವಿಧಿವತ್ತಾದ ಸಂವಿಧಾನ ನೀಡಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಆರ್‌ಎಸ್‌ಎಸ್, ಎಬಿವಿಪಿ, ಭಜರಂಗದಳ ಹಾಗೂ ಬಿಜೆಪಿಯವರು ಸಂವಿಧಾನ ದುರ್ಬಲಗೊಳಿಸಲು ಯತ್ನಿಸುತ್ತಿರುವುದರಿಂದ ಸಂವಿಧಾನ ರಕ್ಷಣೆಗಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಸಚಿವ ಪ್ರಿಯಾಂಕ ಖರ್ಗೆ ಮಾತನಾಡಿ, ಬುದ್ಧ, ಬಸವ, ಅಂಬೇಡ್ಕರ್ ಪ್ರತಿಮೆಗಳನ್ನು ಸ್ಥಾಪಿಸುತ್ತೇವೆ. ಆದರೆ ಅವರ ತತ್ವ ಸಿದ್ಧಾಂತಗಳನ್ನು ನಾವ್ಯಾರು ಅಳವಡಿಸಿಕೊಂಡಿಲ್ಲ. ಸಂವಿಧಾನದ ಆಶಯಗಳನ್ನು ಪಾಲಿಸುತ್ತಿಲ್ಲ. ನಾವೀಗ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಅಂಬೇಡ್ಕರ್ ಅವರನ್ನು ಜಯಂತಿಗೆ ಮಾತ್ರ ಸೀಮಿತವಾಗಿಸದೆ ಪ್ರತಿದಿನ ನೆನೆಯಬೇಕು. ಯಾರೇ ಕರೆದರೂ ಜಯಂತಿಯಲ್ಲಿ ಪಾಲ್ಗೊಳ್ಳುವೆ ಸಹಕಾರ ನೀಡುವೆ ಎಂದ ಅವರು ಬುದ್ಧ, ಬಸವ, ಭೋವಿ ಭವನಗಳಿಗೆ ಭೂಮಿ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ನೀಡುವಂತೆ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿದರು.

ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಎಂಎಲ್‌ಸಿಗಳಾದ ಹೆಚ್.ವಿಶ್ವನಾಥ್, ಧರ್ಮಸೇನ, ಜಿಪಂ ಮಾಜಿ ಸದಸ್ಯ ನಾಗರಾಜ ಮಲ್ಲಾಡಿ, ವೇದಿಕೆ ಕಾರ್ಯದರ್ಶಿ ಶಿವಶೇಖರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರಸ್ವಾಮಿ, ಮುಖಂಡರಾದ ಆನಂದಸ್ವಾಮಿ, ಬಸವರಾಜು, ರಾಜು, ಹೆಚ್.ಎಸ್.ವರದರಾಜು, ಪ್ರಸನ್ನ, ಪುಟ್ಟಸ್ವಾಮಿ, ಕುಮಾರ್, ಸುರೇಶ್, ಸೋಮಶೇಖರ್, ಡಿ.ಕೆ.ಕುನ್ನೇಗೌಡ, ಅಣ್ಣಯ್ಯನಾಯ್ಕ, ಟಿ.ವಿ.ನಾರಾಯಣ್, ಸ್ವಾಮಿ ಸೇರಿದಂತೆ ಇತರರಿದ್ದರು.

ಜನಸಾಮಾನ್ಯರಿಗೆ ಧಾರ್ಮಿಕ ಆಚರಣೆ ಕೊಟ್ಟ ಬಸವಣ್ಣ

ಮುಡುಕನಪುರ ಷಡಕ್ಷರ ದೇಶೀಕೇಂದ್ರ ಸ್ವಾಮೀಜಿ



ಮುಡುಕನಪುರ ಗ್ರಾಮದಲ್ಲಿ ಬಸವೇಶ್ವರ ಜಯಂತಿ ನಡೆಯಿತು.

ತಿ.ನರಸೀಪುರ, ಮೇ 26– ಜಗಜ್ಯೋತಿ ಬಸವೇಶ್ವರರು ಜನಸಾಮಾನ್ಯರಿಗೆ ಧಾರ್ಮಿಕ ಆಚರಣೆ ಹಾಗೂ ಧರ್ಮ ಸಂಹಿತೆ ಕೊಟ್ಟ ಮಹಾನ್ ಧಾರ್ಮಿಕ ಮುಖಂಡರು ಎಂದು ಹಲವಾರ ಮಠಾಧ್ಯಕ್ಷ ಮುಡುಕನಪುರ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮುಡುಕನಪುರದಲ್ಲಿ ಬಸವ ಬಳಗದಿಂದ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಧರ್ಮ ಜಗತ್ತಿನಲ್ಲಿ ಕೆಲವರ ಸ್ವತ್ತಾಗಿದ್ದ ವೇಳೆ ಆಚರಣೆ ಪೂರಕವಾದ ಸಿದ್ಧಾಂತವನ್ನು ಜನಮಾನಸಕ್ಕೆ ತಂದು ಕೊಟ್ಟಂತಹ ಬಸವಣ್ಣನವರು 12ನೇ ಶತಮಾನದಲ್ಲೇ ತಮ್ಮ ಆದ್ಯ ಗುರಿ ಮುಟ್ಟಿದರು. ಜಗತ್ತಿನ ಕಟ್ಟಕಡೆ ಮನುಷ್ಯನಿಗೆ ಸಿಗದ ಪ್ರೀತಿ, ಪ್ರೇಮ, ವಿಶ್ವಾಸವನ್ನು ಇಂದು ಜನಮಾನಸಕ್ಕೆ ಬಿತ್ತಿದವರು ಬಸವಾದಿ ಪ್ರಮುಖರು. ಬಸವಣ್ಣ ಎಂದರೆ ಬೇರೇನೂ ಅಲ್ಲ ಅದು ಪ್ರೇಮ, ವಿಶ್ವಾಸ, ಅಭಿಮಾನ ಅಷ್ಟೇ ಎಂದ ಶ್ರೀಗಳು ಜಗತ್ತಿನ ಎಲ್ಲಾ ಜನಗಳಲ್ಲಿ ಸ್ವಾಭಿಮಾನ ಬಿತ್ತುವಲ್ಲಿ ಅವರು ಅಂದೇ ಯಶಸ್ವಿಯಾಗಿದ್ದರು. ಸುಮಾರು 121 ಸಮೂಹದ ಒಟ್ಟು ಜನಸಂಖ್ಯೆಯನ್ನು ಒಂದೆಡೆ ಕಲೆ ಹಾಕಿ ಎಲ್ಲರೂ ಲಿಂಗಾಯತರು ಎಂಬ ಮನೋಭಾವ ಮೂಡುವಂತೆ ಮಾಡಿದವರು ಬಸವಣ್ಣ. ಅಂತಹ ಮಹಾನ್ ಪುರುಷ ನಮಗೆಲ್ಲರಿಗೂ ಆದರ್ಶವಾಗಿದ್ದಾರೆ. ಅವರು ಮಾಡಿದ ಕಾರ್ಯವನ್ನು ನಾವು ಆಲೋಚನೆ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿಯೇ ಬಸವಣ್ಣನವರನ್ನು 920 ವರ್ಷಗಳಾದರೂ ನೆನೆಯುವ ಪ್ರಸಂಗದಲ್ಲಿ ನಾವಿದ್ದೇವೆ ಎಂದರು.

ವಚನ ಸಾಹಿತ್ಯದ ಮೂಲಕ ಲೋಕದ ಸತ್ಯವನ್ನು ಅರ್ಥವಾಗುವಂತೆ ತಿಳಿಸಿ ಸಮಾಜದಲ್ಲಿ ಹೊಸ ಶಕೆಗೆ ನಾಂದಿ ಹಾಡಿದ ಬಸವಣ್ಣನವರು ಎಲ್ಲಾ ಹಂತದ ಜನರು ಆಧ್ಯಾತ್ಮಿಕ ಮತ್ತು ಸಾಮಾಜಿಕ ವಿಚಾರಗಳನ್ನು ಚರ್ಚಿಸಬಹುದಾದ ವೇದಿಕೆಯಾಗಿ ಅನುಭವ ಮಂಟಪವನ್ನು ಸ್ಥಾಪಿಸಿದ್ದರು. ಇದನ್ನು ಈಗಿನ ಪ್ರಜಾಪ್ರಭುತ್ವದ ವ್ಯಸ್ಥೆಗೆ ಮಾದರಿ ಎನ್ನಬಹುದಾಗಿದೆ. ಅವರ ನಡೆ ನುಡಿ ಹಾಗೂ ಅವರು ತೋರಿದ ಹಾದಿಯಲ್ಲಿ ಎಲ್ಲರೂ ಸಾಗಬೇಕಿದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ಉಪಾಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಎಂ.ಎಲ್.ಹುಂಡಿ ಅಲ್ಲಮಪ್ರಭು ಶೂನ್ಯ ಪೀಠದ ಮಠಾಧ್ಯಕ್ಷ ಶ್ರೀಗೌರಿಶಂಕರಸ್ವಾಮೀಜಿ ಮಾತನಾಡಿದರು. ಅರೆ ಬೊಮ್ಮನಹಳ್ಳಿ ಪಾರಮಾರ್ಥಿಕ ಮಠದ ಪೀಠಾಧ್ಯಕ್ಷ ಶ್ರೀಮಲ್ಲಿಕಾರ್ಜುನಸ್ವಾಮಿ, ಮಂಜು ಬುದ್ದಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ನಂಜುಂಡಸ್ವಾಮಿ, ಸುಗಂಧರಾಜು, ಕಾರ್ ಮಲ್ಲಪ್ಪ, ನವೀನ್, ಗೌಡರ ಗುರುಪಾದಸ್ವಾಮಿ, ಗೌಡರ ಅವಿನಾಶ್, ಗ್ರಾಪಂ ಮಾಜಿ ಅಧ್ಯಕ್ಷೆ ಶೀಲಾ, ಗ್ರಾಪಂ ಸದಸ್ಯ ನಾಗೇಶ್, ಮಹದೇವಸ್ವಾಮಿ, ಡೈರಿ ಅಧ್ಯಕ್ಷ ಮಹದೇವಪ್ಪ, ತೋಂಟೇಶ್, ಸತೀಶ್, ಬಿ.ಕೆ.ಮಹದೇವಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಬಸವರಾಜು, ಎಂ.ಎಸ್.ಮಹದೇವಸ್ವಾಮಿ, ನಾಗಭೂಷಣ್, ಗುರುಮಲ್ಲಪ್ಪ, ಲಾಯರ್ ಹರೀಶ್ ಕುಮಾರ್, ಮಾ.ವಿಶ್ವನಾಥ್, ಜಿ.ಸತ್ಯಮೂರ್ತಿ, ಚಿಕ್ಕೂಸಪ್ಪ, ಬಸವಣ್ಣ, ಚಂದ್ರಸ್ವಾಮಿ, ನಂದೀಶ್, ಸ್ಕ್ರೆಟರಿ ನಾಗೇಶ್, ಎಂ.ಸಿ.ಮಹದೇವಸ್ವಾಮಿ, ಶಂಕರ್ ಸೇರಿದಂತೆ ಇತರರಿದ್ದರು.

ಕೋವಿಡ್ ಬಗ್ಗೆ ಜಾಗೃತಿ ವಹಿಸಿ



ಸರಗೂರು, ಮೇ 26– ಕೋವಿಡ್ ಬಗ್ಗೆ ಪ್ರತಿಯೊಬ್ಬರೂ ಜಾಗೃತಿ ವಹಿಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ತಿಳಿಸಿದ್ದಾರೆ.

60 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಜ್ವರ, ಕೆಮ್ಮು, ಗಂಟಲು ನೋವು, ನೆಗಡಿ, ಉಸಿರಾಟದ ತೊಂದರೆ ಕಂಡು ಬಂದಲ್ಲಿ ಪರೀಕ್ಷೆಗೆ ಒಳಗಾಗಬೇಕು ಹಾಗೂ ಸ್ವಚ್ಛತೆ ಬಗ್ಗೆ ಗಮನ ಹರಿಸಿ ದೈಹಿಕ ಅಂತರ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕಿನ ಎಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಅಗತ್ಯ ಔಷಧಿ ಇಟ್ಟುಕೊಳ್ಳುವುದು. ಆಕ್ಸಿಜನ್ ಪೂರೈಕೆ ಇರುವ ಹಾಸಿಗೆಗಳು, ಆಕ್ಸಿಜನ್ ಪ್ಲಾಂಟ್‌ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು. ಆಶಾ, ಅಂಗನವಾಡಿ ಕಾರ್ಯಕರ್ತರು ಕರಪತ್ರಗಳನ್ನು ಸಾರ್ವಜನಿಕರಿಗೆ ನೀಡಿ ಜಾಗೃತಿ ಮೂಡಿಸುವುದು. ಇದಕ್ಕಾಗಿ ಜಿಲ್ಲಾ ಅಧಿಕಾರಿಗಳ ನಿರ್ದೇಶನದ ಮೇರೆಗೆ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಕರೆಯಲಾಗುವುದು ಎಂದು ತಿಳಿಸಿದ್ದಾರೆ.

ಭಾರೀ ಮಳೆಗೆ ಮನೆ ಗೋಡೆ ಕುಸಿತ




ಮಳೆಗೆ ಮನೆ ಗೋಡೆ ಕುಸಿದಿರುವುದು.

ಚುಂಚನಕಟ್ಟೆ, ಮೇ 26– ಕಳೆದ 2 ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಗೆ ಇಲ್ಲಿಗೆ ಸಮೀಪದ ಹೊಸೂರು ಗ್ರಾಮದಲ್ಲಿ ಮನೆ ಗೋಡೆ ಕುಸಿದು ಅಪಾರ ನಷ್ಟ ಸಂಭವಿಸಿದೆ.

ಸಾಲಿಗ್ರಾಮ ತಾಲೂಕಿನ ಹೊಸೂರು ಗ್ರಾಮದ ನಿವಾಸಿ ಚಂದ್ರೇಗೌಡ ಎಂಬುವರಿಗೆ ಸೇರಿದ ಮನೆ ಗೋಡೆ ಕುಸಿದಿದ್ದು, ಪಾತ್ರೆಗಳು ಸೇರಿದಂತೆ ದಿನಬಳಕೆಯ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಿಎ ಮೇಘನಾ, ಹಳಿಯೂರು ಗ್ರಾಪಂ ಕಾರ್ಯದರ್ಶಿ ಸುನೀಲ್ ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮನೆ ಮಾಲೀಕ ಚಂದ್ರೇಗೌಡ ಮಾತನಾಡಿ, ಭಾರೀ ಮಳೆಯಿಂದಾಗಿ ನಾವು ವಾಸವಿರುವ ಮನೆ ಗೋಡೆ ಕುಸಿದು ಬಿದ್ದಿದ್ದು ಸರ್ಕಾರ ಮತ್ತು ಜನಪ್ರತಿನಿಧಿಗಳು ನಮ್ಮ ನೆರವಿಗೆ ಧಾವಿಸಬೇಕೆಂದು ಮನವಿ ಮಾಡಿದ್ದಾರೆ.

ಗಾಯಾಳುಗಳ ಆರೋಗ್ಯ ವಿಚಾರಣೆ



ಮೈಸೂರಿನಲ್ಲಿ ನಡೆದ ಬಸವ ಜಯಂತಿಗೆ ಆಗಮಿಸುವ ವೇಳೆ ಅಪಘಾತಕ್ಕೀಡಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹೆಚ್.ಡಿ.ಕೋಟೆ ತಾಲೂಕು ಕಟ್ಟೆಮನುಗನಹಳ್ಳಿ ಯುವಕರನ್ನು ರಾಜ್ಯ ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಧನಸಹಾಯ ಮಾಡಿದರು. ಈ ವೇಳೆ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ತಾಲೂಕು ಬಿಜೆಪಿ ಅಧ್ಯಕ್ಷ ಶಂಭೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಮೊತ್ತ ಬಸವರಾಜಪ್ಪ, ಮುಖಂಡರಾದ ಸುರೇಶ್, ಚಂದ್ರು, ಗುರುಸ್ವಾಮಿ, ಬಹದ್ದೂರ್ ಸತೀಶ್, ರಾಜಣ್ಣ, ಗಿರೀಶ್, ವೃಷಭೇಂದ್ರ, ವಕೀಲರಾದ, ಪ್ರಸನ್ನ, ಪ್ರಶಾಂತ್, ಅಭಿ ತೊಂಟದಾರ್ಯ, ಲೇಖನ್, ನರಸಿಂಹರಾಜು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಬಸವಣ್ಣನವರ ತತ್ವಾದರ್ಶಗಳಿಂದ ಎಲ್ಲಾ ಸಮಾಜಗಳ ಅಭಿವೃದ್ಧಿ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯ



ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಕ ಸದಸ್ಯ ಆರ್.ಎಸ್.ಕುಮಾರ್, ಸಮಾಜ ಸೇವಕ ಕೂರ್ಗಲ್ ಶಿವಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಮೇ 26– ಬಸವಣ್ಣನವರ ತತ್ವಾದರ್ಶಗಳನ್ನು ಪಾಲಿಸುವುದರ ಜೊತೆಗೆ ಅದನ್ನು ಅಳವಡಿಸಿಕೊಂಡಾಗ ಮಾತ್ರ ಎಲ್ಲಾ ಸಮಾಜಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕು ರಾವಂದೂರು ಗ್ರಾಮದಲ್ಲಿ ಬಸವ ಬಳಗದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸವಣ್ಣನವರ ತತ್ವ, ಆದರ್ಶಗಳು ಇಡೀ ವಿಶ್ವವೇ ಮೆಚ್ಚುವಂತದ್ದು. ಆದರೆ ನಾವು ಅವುಗಳನ್ನು ಮರೆಯುತಿರುವುದು ವಿಷಾದದ ಸಂಗತಿ. ಎಲ್ಲಾ ಸಮಾಜವು ಬಸವಣ್ಣನವರ ತತ್ವ, ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಅದನ್ನು ಅಳವಡಿಸಿಕೊಳ್ಳಬೇಕು ಹಾಗೂ ಯುವ ಜನಾಂಗಕ್ಕೂ ದಾರಿದೀಪವಾಗಬೇಕು. ಇತರ ಸಮಾಜವನ್ನು ಜೊತೆಗೂಡಿಸಿಕೊಂಡು ಸಹಬಾಳ್ವೆಯಿಂದ ಬಾಳುವ ಸಮಾಜ ವೀರಶೈವ ಸಮಾಜವಾಗಿದೆ. ಬಸವ ಜಯಂತಿ ರಾಜಕೀಯ ಪ್ರೇರಿತ ಕಾರ್ಯಕ್ರಮ ಆಗಬಾರದು. ಇದನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದರು.

ಶಾಸಕ ಗಣೇಶ್ ಪ್ರಸಾದ್ ಮಾತನಾಡಿ, ಬಸವಣ್ಣನವರ ಕಾಯಕವೇ ಕೈಲಾಸ ಎಂಬ ತತ್ವ ಅಳವಡಿಸಿಕೊಳ್ಳದೆ ಕಾಯಕ ಮಾಡದೆ ಯಾವ ರೀತಿ ಹಣ ಸಂಪಾದಿಸಬಹುದು ಎಂಬುದರ ಬಗ್ಗೆ ಜನರು ಹೆಚ್ಚು ಗಮನ ಹರಿಸುತ್ತಿದ್ದಾರೆ. ಅದನ್ನು ಬಿಟ್ಟು ಬಸವಣ್ಣನ ತತ್ವ, ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಪ್ರತಿಯೊಬ್ಬ ಪ್ರಜೆ ಆದರ್ಶ ಪ್ರಜೆಯಾಗಲು ಸಾಧ್ಯವಾಗುತ್ತದೆ. ಬುದ್ಧ, ಬಸವ ಅಂಬೇಡ್ಕರ್ ಅವರ ವಿಚಾರಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದರು.

ಬಸವ ಬಳಗ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್ ಮಾತನಾಡಿ, ಬಸವಣ್ಣನವರ ತತ್ವ ಆದರ್ಶಗಳು ಪ್ರತಿಯೊಬ್ಬರ ಬದುಕಿನ ದಾರಿದೀಪವಾಗಬೇಕು. ಯುವಕರು ಜಾತ್ಯತೀತ ಮನೋಭಾವ ಬೆಳೆಸಿಕೊಳ್ಳುವುದರ ಜೊತೆಗೆ ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಂಡು ಸಮಾಜದ ಉತ್ತಮ ಪ್ರಜೆಗಳಾಗಬೇಕು. ಪ್ರತಿಯೊಂದು ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡು ರಾಜಕೀಯವಾಗಿ ಬೆಳೆಯುವುದರ ಜೊತೆಗೆ ನಮ್ಮ ಸಮಾಜದ ಬೆಳವಣಿಗೆಗೂ ಸಹ ಕೈ ಜೋಡಿಸಬೇಕು ಎಂದರು.

ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಮಾತನಾಡಿ, ಬಸವಣ್ಣನವರ ತತ್ವ, ಆದರ್ಶಗಳು ಒಂದು ಸಮಾಜಕ್ಕೆ ಮೀಸಲಲ್ಲ. ಇದನ್ನು ಪ್ರತಿಯೊಬ್ಬರೂ ಪಾಲಿಸಿದಾಗ ಮಾತ್ರ ಉತ್ತಮ ಸಮಾಜದ ನಿರ್ಮಾಣಕ್ಕೆ ದಾರಿ ದೀಪವಾಗುತ್ತದೆ. ಇಂದಿನ ಯುವ ಜನಾಂಗವು ಬಸವಣ್ಣನವರ ತತ್ವ ಆದರ್ಶಗಳನ್ನು ಪಾಲಿಸುವುದರ ಮೂಲಕ ಉತ್ತಮ ಸಮಾಜಕ್ಕೆ ದಾರಿದೀಪವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ವೇಳೆ ರಾವಂದೂರು ಮುರುಘ ಮಠದ ಮೋಕ್ಷಪತಿ ಸ್ವಾಮೀಜಿ, ಇಮ್ಮಡಿ ಉದ್ಯಾನ ಸ್ವಾಮೀಜಿ, ರಾಮದುರ್ಗದ ಮಹಾಂತ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ಹಾಸ್ಯ ಕಲಾವಿದ ಶ್ರೀಕಂಠ, ಮೈಸೂರು ಜಿಲ್ಲಾ ವೀರಶೈವ ಸಮಾಜದ ಅಧ್ಯಕ್ಷ ಹಿನ್‌ಕಲ್ ಬಸವರಾಜ್, ತಾಲೂಕು ಅಧ್ಯಕ್ಷ ಹಿಟ್ನಳ್ಳಿ ಪರಮೇಶ್, ಬಿಜೆಪಿ ಮುಖಂಡ ಆರ್.ಟಿ.ಸತೀಶ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಅರ್ಜುನ್, ಮಹಿಳಾ ಘಟಕದ ಅಧ್ಯಕ್ಷೆ ಧನ್ಯ, ಮಲೆ ಮಹದೇಶ್ವರ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಕ ಸದಸ್ಯ ಆರ್.ಎಸ್.ಕುಮಾರ್, ಮಾಜಿ ಜಿಪಂ ಸದಸ್ಯ ಆರ್.ಎಸ್.ಚಿಕ್ಕವೀರಪ್ಪ, ವಿಜಯ್, ಸಮಾಜ ಸೇವಕ ಕೂರ್ಗಲ್ ಶಿವಕುಮಾರಸ್ವಾಮಿ, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್, ಮುಖಂಡರಾದ ಮಹದೇವಪ್ಪ, ರಾಜೇಂದ್ರ, ತಂಬಾಕು ಮಂಡಳಿ ಹರಾಜು ಅಧಿಕಾರಿ ಧನರಾಜ್, ಬಸವ ಬಳಗದ ಅಧ್ಯಕ್ಷ ಆರ್.ಎಸ್.ವಿಜಯಕುಮಾರ್. ವಕೀಲ ಮಂಜುನಾಥ್, ರೈತ ಸಂಘದ ಮುಖಂಡ ಲೋಕರಾಜ್ ಅರಸ್, ಪ್ರಾಂಶುಪಾಲ ವೆಂಕಟೇಶ್, ಉಪನ್ಯಾಸಕ ಲಕ್ಷ್ಮಿಕಾಂತ್ ಸೇರಿದಂತೆ ಬಸವ ಬಳಗದ ಸದಸ್ಯರು ಹಾಜರಿದ್ದರು.

ಬಾಬು ನಾಯ್ಡು ನಿಧನ



ಹೆಚ್.ಡಿ.ಕೋಟೆ, ಮೇ 26– ಮೂಲತಃ ತಾಲೂಕಿನ ಬೀಚನಹಳ್ಳಿ ಗ್ರಾಮದ, ಹಾಲಿ ಬೆಂಗಳೂರಿನ ಕೆ.ಜೆ.ಜಾರ್ಜ್ ಲೇಔಟ್ ನಿಂಗರಾಜ ಕಾಲೋನಿ ನಿವಾಸಿ ಬಾಬು ನಾಯ್ಡು(55) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

ಮಾರ್ಟಿನ್



ಹುಣಸೂರು, ಮೇ 26– ನಗರದ ಉದಯನಗರ ನಿವಾಸಿ, ಸೆಂಟ್ ಜೋಸೆಫ್ ಶಾಲೆ ಶಿಕ್ಷಕಿ ಸಿಸಿಲಿಯಾ ಅವರ ಪತಿ ಮಾರ್ಟಿನ್(68) ಸೋಮವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ್ಯಾಯಲಯದ ಹಿಂಭಾಗದಲ್ಲಿರುವ ವಿಶ್ರಾಂತಿಧಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಮುಂಬೈ ಮಣಿಸಿ ಅಗ್ರಸ್ಥಾನಕ್ಕೇರಿದ ಪಂಜಾಬ್ ಕಿಂಗ್ಸ್



ಜೈಪುರ, ಮೇ 26– ಜೋಶ್ ಇಂಗ್ಲಿಸ್, ಪ್ರಿಯಾಂಶ್ ಆರ್ಯ ಅವರ ಶತಕದ ಜೊತೆಯಾಟದ ನೆರವಿನಿಂದ ಪಂಜಾಬ್ ಕಿಂಗ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಆ ಮೂಲಕ 11 ವರ್ಷಗಳ ಬಳಿಕ ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಪ್ಲೇ ಆಫ್‌ಗೆ ಎಂಟ್ರಿ ಕೊಟ್ಟ ಪಂಜಾಬ್ ಕಿಂಗ್ಸ್ ಪ್ರಸಕ್ತ ಸಾಲಿನಲ್ಲಿ ಆಡಿರುವ 14 ಪಂದ್ಯಗಳ ಪೈಕಿ 9 ಗೆಲುವು, 4 ಸೋಲು, 1 ಡ್ರಾದೊಂದಿಗೆ 19 ಅಂಕಗಳಿಸಿ ಇದೇ ಮೊದಲ ಬಾರಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ಪ್ಲೇ ಆಫ್‌ಗೆ ಲಗ್ಗೆ ಹಾಕಿದೆ.

ಇಲ್ಲಿನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿತು. ಸ್ಪರ್ಧಾತ್ಮಕ ಗುರಿ ಬೆನ್ನಟ್ಟಿದ ಪಂಜಾಬ್ 18.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿ ಗೆಲುವು ಸಾಧಿಸಿತು. ಈ ಪಂದ್ಯದೊಂದಿಗೆ ಉಭಯ ತಂಡಗಳೂ 18ನೇ ಆವೃತ್ತಿಯ ಲೀಗ್ ಸುತ್ತಿನ ಪಂದ್ಯಗಳನ್ನು ಮುಕ್ತಾಯಗೊಳಿಸಿದವು.

ನಿಧಾನಗತಿ ಬ್ಯಾಟಿಂಗ್ ಆರಂಭಿಸಿದ ಪಂಜಾಬ್ ಕಿಂಗ್ಸ್ 4.2 ಓವರ್‌ಗಳಲ್ಲಿ 34 ರನ್ ಗಳಿಸಿದ್ದ ವೇಳೆ 13 ರನ್ ಗಳಿಸಿದ್ದ ಪ್ರಭ್‌ಸಿಮ್ರಾನ್ ಸಿಂಗ್ ವಿಕೆಟ್ ಒಪ್ಪಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಜೋಶ್ ಇಂಗ್ಲಿಸ್ ಹಾಗೂ ಪ್ರಿಯಾಂಶ್ ಆರ್ಯ 109 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯದ ಹಾದಿ ಸುಗಮಗೊಳಿಸಿದರು. ಸ್ಫೋಟಕ ಬ್ಯಾಟಿಂಗ್ ಮಾಡಿದ್ದ ಪ್ರಿಯಾಂಶ್ ಆರ್ಯ 35 ಎಸೆತಗಳಲ್ಲಿ 2 ಸಿಕ್ಸರ್, 9 ಬೌಂಡರಿ ಸಹಿತ 62 ರನ್ ಸಿಡಿಸಿ ಔಟಾಗುತ್ತಿದ್ದಂತೆ ಜೋಶ್ ಇಂಗ್ಲಿಸ್ ಆರ್ಭಟ ಮುಂದುವರಿಸಿದರು. ಅಂತಿಮವಾಗಿ ಇಂಗ್ಲಿಸ್ 42 ಎಸೆತಗಳಲ್ಲಿ 3 ಸಿಕ್ಸರ್, 9 ಬೌಂಡರಿ ಒಳಗೊಂಡ 73 ರನ್ ಗಳಿಸಿ ನಿರ್ಗಮಿಸಿದರು. ನಾಯಕ ಶ್ರೇಯಸ್ ಅಯ್ಯರ್ 16 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಒಳಗೊಂಡ 26 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ನೇಹಾಲ್ ವಧೇರಾ 2 ರನ್ ಗಳಿಸಿದರು. ಮುಂಬೈ ಪರ ಮಿಚೆಲ್ ಸ್ಯಾಂಟ್ನರ್ 2, ಬೂಮ್ರಾ 1 ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್‌ಗೆ ರೋಹಿತ್ ಶರ್ಮಾ, ರಯಾನ್ ರಿಕಲ್ಟನ್ ಮೊದಲ ವಿಕೆಟ್‌ಗೆ 45 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ ರಿಕಲ್ಟನ್ 27 ರನ್ ಗಳಿಸಿ ಔಟಾದರು. ರೋಹಿತ್ ಶರ್ಮಾ ಕೂಡ ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ಮತ್ತೆ ವಿಫಲರಾದರು. ರೋಹಿತ್ ಶರ್ಮಾ 21 ಎಸೆತಗಳಲ್ಲಿ 24 ರನ್ ಗಳಿಸಿ ಔಟಾದರು. ನಂತರ ಬಂದ ತಿಲಕ್ ವರ್ಮಾ ಕೇವಲ 1 ರನ್‌ಗೆ ವಿಕೆಟ್ ಒಪ್ಪಿಸಿ ನಿರಾಸೆ ಮೂಡಿಸಿದರು. ಸ್ಫೋಟಕ ಪ್ರದರ್ಶನ ನೀಡುತ್ತಿದ್ದ ವಿಲ್ ಜಾಕ್ಸ್ ಕೂಡ 8 ಎಸೆತಗಳಲ್ಲಿ 17 ರನ್ ಗಳಿಸಿ ಔಟ್ ಆದರು.

ಅಲ್ಪ ಮೊತ್ತಕ್ಕೆ ಕುಸಿಯುವ ಭೀತಿಯಲ್ಲಿದ್ದ ಮುಂಬೈಗೆ ನಾಯಕ ಹಾರ್ದಿಕ್ ಪಾಂಡ್ಯ ಹಾಗೂ ಸೂರ್ಯ ಕುಮಾರ್ ಯಾದವ್ ಚೇತರಿಕೆ ನೀಡಿದರು. ಇವರಿಬ್ಬರು 5ನೇ ವಿಕೆಟ್‌ಗೆ 44 ರನ್ ಜೊತೆಯಾಟವಾಡಿದರು. ಪಾಂಡ್ಯ 15 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಸೇರಿ 26 ರನ್ ಗಳಿಸಿದರು. ಕೊನೆಯಲ್ಲಿ ಅಬ್ಬರಿಸಿದ ಸೂರ್ಯಕುಮಾರ್ ಹಾಗೂ ನಮನ್ ಧೀರ್ ಜೋಡಿ 6ನೇ ವಿಕೆಟ್ ಜೊತೆಯಾಟದಲ್ಲಿ 17 ಎಸೆತಗಳಲ್ಲಿ 31 ರನ್ ಸೇರಿಸಿದರು. ನಮನ್ 12 ಎಸೆತಗಳಲ್ಲಿ 2 ಸಿಕ್ಸರ್ ಸಹಿತ 20 ರನ್ ಗಳಿಸಿದರು. ಕೊನೆಯವರೆಗೂ ಹೋರಾಡಿದ ಸೂರ್ಯ ಕುಮಾರ್ ಯಾದವ್ 39 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್‌ಗಳ ಸಹಿತ 57 ರನ್ ಗಳಿಸಿ ಕೊನೆಯ ಎಸೆತದಲ್ಲಿ ಅರ್ಷ್‌ದೀಪ್ ಸಿಂಗ್‌ಗೆ ವಿಕೆಟ್ ಒಪ್ಪಿಸಿದರು. ಪಂಜಾಬ್ ಕಿಂಗ್ಸ್ ಪರ ಅರ್ಷ್‌ದೀಪ್ ಸಿಂಗ್, ಮಾರ್ಕೊ ಜಾನ್ಸನ್, ವೈಶಾಕ್ ವಿಜಯಕುಮಾರ್ ತಲಾ 2, ಹರ್ಪ್ರೀತ್ ಬ್ರಾರ್ 1 ವಿಕೆಟ್ ಪಡೆದರು. ಜೋಶ್ ಇಂಗ್ಲಿಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಪಂಜಾಬ್	14	9	4	1	19
ಗುಜರಾತ್	14	9	5	0	18
ಬೆಂಗಳೂರು	13	8	4	1	17
ಮುಂಬೈ	14	8	6	0	16
ಡೆಲ್ಲಿ	14	7	6	1	15
ಹೈದರಾಬಾದ್	14	6	7	1	13
ಲಕ್ನೋ	13	6	7	0	12
ಕೊಲ್ಕತ್ತಾ	14	5	7	2	12
ರಾಜಸ್ಥಾನ್	14	4	10	0	8
ಚೆನ್ನೈ	14	4	10	0	8

ಇಂದಿನ ಪಂದ್ಯ

ಲಕ್ನೋ ಸೂಪರ್ ಜೈಂಟ್ಸ್
V/S
ರಾಯಲ್ ಚಾಲೆಂಜರ್ಸ್ ಬೆಂಗಳೂರು

ಸಮಯ: ಸಂಜೆ 7.30

ಸ್ಥಳ : ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಲಕ್ನೋ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡ್ಕನ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಿರಿಕ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ಸೈನೈಡ್ (ಕ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಕೆ.ಆರ್.ರಕ್ಷಿತ್

ಪ್ರಭಾರಿಯಾಗಿ ಆಯುಕ್ತರ ಜವಬ್ದಾರಿ



ಮೈಸೂರು, ಮೇ 26(ಆರ್‌ಕೆ)– ಮೈಸೂರು ಉಪವಿಭಾಗದ ಉಪವಿಭಾಗಾಧಿಕಾರಿ ಕೆ.ಆರ್.ರಕ್ಷಿತ್ ಅವರನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಸಮವರ್ತಿತ ಪ್ರಭಾರ ಆಯುಕ್ತರನ್ನಾಗಿ ನಿಯೋಜಿಸಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಹೆಚ್.ಕೇಶವಪ್ರಸಾದ್ ಈ ಬಗ್ಗೆ ಇಂದು ಅಧಿಸೂಚನೆ ಹೊರಡಿಸಿದ್ದು, ಎಂಡಿಎ ಆಯುಕ್ತ ಹುದ್ದೆಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ–68ರನ್ವಯ ಸಮವರ್ತಿತ ಪ್ರಭಾರದಲ್ಲಿರಿಸಿ ಆದೇಶಿಸಿದ್ದಾರೆ. ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ರಕ್ಷಿತ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ. ಇಂದು (ಮೇ 27) ಬೆಳಗ್ಗೆ 11 ಗಂಟೆಗೆ ರಕ್ಷಿತ್ ಎಂಡಿಎ ಪ್ರಭಾರ ಆಯುಕ್ತರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಅಭಿನಂದನೆ



ಕೆಸಿಇಟಿ ಇಂಜಿನಿಯರಿಂಗ್ ವಿಭಾಗದಲ್ಲಿ ಮೈಸೂರಿನ ಕುವೆಂಪುನಗರದ ಶ್ರೀ ಆದಿ ಚುಂಚನಗಿರಿ ಶಿಕ್ಷಣ ಸಂಸ್ಥೆಗೆ ಸೇರಿದ ಬಿಜಿಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಆರ್.ಚಿನ್ಮಯ್ ಗೌಡ 31ನೇ ರ್‍ಯಾಂಕ್ ಮತ್ತು ಸಿ.ಎ. ಸುಧನ್ವ ರಾವ್ 109 ನೇ ರ್‍ಯಾಂಕ್ ಪಡೆದಿದ್ದು, ಈ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅಭಿನಂದಿಸಿದರು. ಈ ವೇಳೆ ಸಂಸ್ಥೆಯ ಆಡಳಿತಾಧಿಕಾರಿ ಡಾ.ಆರ್.ಎಸ್.ನರಸೇಗೌಡ, ಶೈಕ್ಷಣಿಕ ಸಂಯೋಜಕ ಆರ್.ರಂಗನಾಥಬಾಬು ಉಪಸ್ಥಿತರಿದ್ದರು.

ರಾಜ್ಯಕ್ಕೆ ಎಸ್‌ಎಸ್‌ಎಲ್‌ಸಿ ಎರಡನೇ ಟಾಪರ್ ಅನನ್ಯಾಗೆ ಅಭಿನಂದನೆ

ಮೈಸೂರು, ಮೇ 26– ಮೈಸೂರಿನ ವಿಜಯ ವಿಠಲ ಶಿಕ್ಷಣ ಸಂಸ್ಥೆಗಳು ಹಾಗೂ ಬಿಎಸ್‌ಎಸ್ ವಿದ್ಯೋದಯದ ಸಹಯೋಗದೊಂದಿಗೆ ಎರಡು ದಿನಗಳ ಸಂವರ್ಧನ ಸಮಾವೇಶವನ್ನು ಆಯೋಜಿಸಲಾಗಿತ್ತು.

ಶೈಕ್ಷಣಿಕ ಶ್ರೇಷ್ಠತೆಯನ್ನು ಗುರುತಿಸುವುದರ ಜೊತೆಗೆ ಮಕ್ಕಳಲ್ಲಿ ಕಲಿಕಾ ಸ್ಫೂರ್ತಿ ತುಂಬುವ ಉದ್ದೇಶದಿಂದ ಬಿಎಸ್‌ಎಸ್ ವಿದ್ಯೋದಯ ಆವರಣದಲ್ಲಿ ಏರ್ಪಡಿಸಿದ್ದ ಸಮಾವೇಶದಲ್ಲಿ ಪೇಜಾವರ ಮಠದ ಪೀಠಾಧಿಪತಿ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಭಾಗವಹಿಸಿ, ಆಶೀರ್ವಚನ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 624 ಅಂಕಗಳೊಂದಿಗೆ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿರುವ ವಿಜಯ ವಿಠಲ ವಿದ್ಯಾಶಾಲೆಯ ಅನನ್ಯಾ ಆರ್. ನಾಯಕ್‌ಗೆ ಅಭಿನಂದಿಸಿ, ಆಶೀರ್ವದಿಸಿದರು. ವಿವಿಧ ಸಂಘ ಸಂಸ್ಥೆಗಳ ವತಿಯಿಂದಲೂ ಅನನ್ಯಾಳನ್ನು ಅಭಿನಂದಿಸಲಾಯಿತು.



ಪೇಜಾವರ ಶ್ರೀಗಳ ಸಾನಿಧ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿರುವ ವಿಜಯ ವಿಠಲ ವಿದ್ಯಾಶಾಲೆ ಅನನ್ಯಾಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ವಿಜಯ ವಿಠಲ ವಿದ್ಯಾಶಾಲೆ ಹಾಗೂ ಬಿಎಸ್‌ಎಸ್ ವಿದ್ಯೋದಯದ ಆಡಳಿತ ಮಂಡಳಿಯವರು, ಅಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

ಸುತ್ತೂರು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೇ.29ರಿಂದ ಜೂನ್ 12 ರವರೆಗೆ ವಿಕಸಿತ ಕೃಷಿ ಸಂಕಲ್ಪ ಅಭಿಯಾನ

ಮೈಸೂರು,ಮೇ 26(ಎಂಟಿವೈ)– ಇದೇ ಮೇ.29 ರಿಂದ ಜೂನ್ 12 ರವರೆಗೆ ರಾಷ್ಟ್ರಾದ್ಯಂತ ಹಮ್ಮಿಕೊಂಡಿರುವ ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ಯಶಸ್ವಿಗಾಗಿ ಮೈಸೂರು ಜಿಲ್ಲೆಯ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಸಜ್ಜಾಗಿದೆ ಎಂದು ಕೇಂದ್ರದ ಹಿರಿಯ ವಿಜ್ಞಾನಿ ಡಾ.ಬಿ.ಎನ್.ಜ್ಞಾನೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಮೂರು ತಂಡದೊಂದಿಗೆ ಮೈಸೂರು ಜಿಲ್ಲೆಯಲ್ಲಿ 135 ಗ್ರಾಮಗಳಲ್ಲಿ 200 ಸಭೆ ನಡೆಸಿ, 22,000 ರೈತರಿಗೆ ಮಾಹಿತಿ ನೀಡಲು ಉದ್ದೇಶಿಸಿದೆ. ಈ ಅಭಿಯಾನಕ್ಕೆ ಐಸಿಎಆರ್‌ನ ವಿವಿಧ ಸಂಶೋಧನಾ ಸಂಸ್ಥೆಗಳಿಂದ 12 ವಿಜ್ಞಾನಿಗಳು, ವಿವಿಧ ಕೃಷಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಪ್ರಗತಿಪರ ರೈತರು ಪಾಲ್ಗೊಳ್ಳಲಿದ್ದಾರೆ ಎಂದರು.

ದೇಶದ ಎಲ್ಲಾ ಪ್ರಮುಖ ಬೆಳೆಗಳ ಉತ್ಪಾದಕತೆ ಹೆಚ್ಚಿಸಲು, ಕೃಷಿ ವಿಸ್ತರಣಾ ಸೇವೆಗಳನ್ನು ಸುಧಾರಿಸಲು, ಹೊಸ ತಂತ್ರ ಜ್ಞಾನ ಮತ್ತು ಪ್ರಯೋಗಾಲಯಗಳಲ್ಲಿ ಮಾಡಿದ ಸಂಶೋಧನಾ ಕಾರ್ಯಗಳನ್ನು ರೈತರಹೊಲಗಳಿಗೆ ಲಭ್ಯವಾಗುವಂತೆ ಮಾಡಲು, ರೈತರಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ಹೊಸ ಬೀಜ ಪ್ರಭೇದಗಳ ಬಗ್ಗೆ ಜಾಗೃತಿ ಮೂಡಿಸಲು ಈ ಅಭಿಯಾನವನ್ನು ಕೇಂದ್ರ ಸರ್ಕಾರ ಆಯೋಜಿಸಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕಾ ವಿಜ್ಞಾನಿ ಡಾ.ಜಿ.ಎಂ.ವಿನಯ್ ಇದ್ದರು.

ಕನ್ನಡದ ಅಸ್ಮಿತೆಯನ್ನು ನಾನು ವಿಜಯೇಂದ್ರರಿಂದ ಕಲಿಯಬೇಕಿಲ್ಲ

● ಸಚಿವ ಎಂ.ಬಿ.ಪಾಟೀಲ್ ತಿರುಗೇಟು ● ವಾಣಿಜ್ಯ ಉದ್ದೇಶಕ್ಕೆ ತಮನ್ನಾ ರಾಯಭಾರಿ ಆಯ್ಕೆ



ಬೆಂಗಳೂರು, ಮೇ 26(ಕೆಎಂಶಿ)– ಕರ್ನಾಟಕ ಸೋಪ್ ಮತ್ತು ಮಾರ್ಜಕಗಳ ಸಂಸ್ಥೆ (ಕೆಎಸ್‌ಡಿಎಲ್) ಅಧ್ಯಕ್ಷರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ ಅವ್ಯವಹಾರ ಆರೋಪದಲ್ಲಿ ಜೈಲಿಗೆ ಹೋದಾಗ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಕನ್ನಡ ಅಸ್ಮಿತೆ ಏಕೆ ನೆನಪಾಗಲಿಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಲ್ಲಿ ಕೆಎಸ್‌ಡಿಎಲ್ ಸಾರ್ವಕಾಲಿಕ ಉತ್ಪಾದನೆ, ವಹಿವಾಟು ಮತ್ತು ಲಾಭ ಹೆಚ್ಚಿಸಿಕೊಂಡಿದೆ. ನನ್ನ ಸ್ವಂತ ವ್ಯಾಪಾರಕ್ಕಿಂತ ಸಂಸ್ಥೆಗೆ ಆದ್ಯತೆ ಕೊಟ್ಟು ದಕ್ಷತೆ ಹೆಚ್ಚಿಸಿದ್ದೇನೆ. ಸಂಸ್ಥೆ ಸೊರಗಿದಾಗ ಏನೂ ಮಾತನಾಡದವರ ಕೆಂಗಣ್ಣು ಈಗ ಅದರ ಮೇಲಿದೆ ಎಂದರು.

ಬಾಲಿವುಡ್ ನಟಿ ತಮನ್ನಾ ಭಾಟಿಯಾ ಅವರನ್ನು ಕೆಎಸ್‌ಡಿಎಲ್ ಪ್ರಚಾರ ರಾಯಭಾರಿಯಾಗಿ ಮಾಡಿರುವುದರ ಹಿಂದೆ ವಾಣಿಜ್ಯ ಉದ್ದೇಶವಿದೆ ಎಂದು ಸ್ಪಷ್ಟಪಡಿಸಿದ ನಂತರ ಕೆಲವು ಕನ್ನಡಪರ ಸಂಘಟನೆಗಳ ನಾಯಕರು, ನೀವು ಒಳ್ಳೆಯ ಕೆಲಸ ಮಾಡಿದ್ದೀರಿ ಎಂಬುದಾಗಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಾನು ಯಾರಿಂದಲೂ ಕನ್ನಡಾಭಿಮಾನ ಕಲಿಯುವ ಅಗತ್ಯವಿಲ್ಲ. ಕಳೆದ ಎರಡು ವರ್ಷದಲ್ಲಿ 23 ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗಿದೆ. ಸದ್ಯದಲ್ಲೇ ಡಿಶ್ ವಾಷರ್ ಮತ್ತು ಸುಗಂಧದ್ರವ್ಯಗಳನ್ನು ಮಾರುಕಟ್ಟೆಗೆ ಬಿಡಲಾಗುವುದು. ವ್ಯಾಪಾರವನ್ನು ವ್ಯಾಪಾರವಾಗಿ ನೋಡಬೇಕು ಎಂದರು.

ಹೈದರಾಬಾದ್‌ನಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಉತ್ಪನ್ನ ತಯಾರಿಸುತ್ತಿದ್ದುದ್ದನ್ನು ಮಟ್ಟ ಹಾಕಿದ್ದೇವೆ. ಈಗಲೂ ಕೆಲವರು ನಕಲು ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇದರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಮೈಸೂರಲ್ಲಿ ಜೂ.8ರಂದು ರಾಜ್ಯಮಟ್ಟದ ಈಜು ಸ್ಪರ್ಧೆ

ಮೈಸೂರು, ಮೇ 26(ಎಂಟಿವೈ)– ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಹಾಗೂ ಎಂಎಎಸ್‌ಪಿ ಅಕ್ವಾಟಿಕ್ ಕ್ಲಬ್ ಸಹಯೋಗದಲ್ಲಿ ಜೂ.8ರಂದು ಮೈಸೂರಲ್ಲಿ ರಾಜ್ಯಮಟ್ಟದ ನಾನ್ ಮೆಡಲಿಸ್ಟ್ ಈಜು ಸ್ಪರ್ಧೆ–2025 ಆಯೋಜಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಅಂದು ಬೆಳಗ್ಗಿನಿಂದ ಸಂಜೆವರೆಗೂ ವಯೋಮಿತಿಗೆ ಅನುಗುಣವಾಗಿ 8 ಗುಂಪಿನಲ್ಲಿ ಈಜು ಸ್ಪರ್ಧೆ ನಡೆಯಲಿದೆ. 50 ಮೀಟರ್‌ನಿಂದ 200 ಮೀಟರ್ ಉದ್ದದ ವಿವಿಧ ಶೈಲಿಯ ಈಜು ಸ್ಪರ್ಧೆ ಆಯೋಜಿಸಲಾಗಿದ್ದು, ವಿವಿಧ ವಯೋಮಾನದ ಬಾಲಕ, ಬಾಲಕಿಯರು, ಪುರುಷ, ಮಹಿಳಾ ಸ್ಪರ್ಧಿಗಳು ಈಜು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಈಜು ಸ್ಪರ್ಧೆಯಲ್ಲಿ ಭಾಗವಹಿಸುವವರು ಜೂ.2ರೊಳಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಸ್ಥಳದಲ್ಲಿ ಹೆಸರು ನೊಂದಣಿ ಮಾಡಿಕೊಳ್ಳಲು ಅವಕಾಶವಿಲ್ಲ. ನುರಿತ ಈಜು ತಜ್ಞರು, ಈಜು ತರಬೇತುದಾರರು ಈ ಪಂದ್ಯಾವಳಿಯನ್ನು ಸ್ಪರ್ಧೆ ನಡೆಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ. ಸಂಖ್ಯೆ 9591187357, 9900110147, 9845073464 ಸಂಪರ್ಕಿಸುವಂತೆ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಂಸ್ಥೆಯ ಕವಿತಾ ವಿನೋದ್ ಕೋರಿದ್ದಾರೆ.

ಭಾರತೀಯರನ್ನು ಒಗ್ಗೂಡಿಸಿದ್ದು ಡಾ.ಅಂಬೇಡ್ಕರ್ ಸಂವಿಧಾನ

● ಶಾಸಕ ಜಿ.ಟಿ.ದೇವೇಗೌಡರ ಅಭಿಮತ ● ವಿವಿಧ ಸಂಘಟನೆಗಳಿಂದ ಡಾ.ಅಂಬೇಡ್ಕರ್ ಜಯಂತಿ ● ದೇವರು ಮಾಡಲಾಗದ ಕೆಲಸವನ್ನು ಅಂಬೇಡ್ಕರ್ ಸಂವಿಧಾನ ಮಾಡುತ್ತಿದೆ

ಮೈಸೂರು, ಮೇ 26(ಎಸ್‌ಪಿಎನ್)– ಸ್ವಾತಂತ್ರ್ಯಕ್ಕೂ ಮುನ್ನ ಚದುರಿ ಹೋಗಿದ್ದ ಭಾರತೀಯರನ್ನು ಸಂವಿಧಾನದಡಿ ಒಂದುಗೂಡಿಸಿದ ಕೀರ್ತಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಶಾಸಕ ಜಿ.ಟಿ. ದೇವೇಗೌಡರು ಅಭಿಪ್ರಾಯ ಪಟ್ಟರು.

ಮೈಸೂರು ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣಮಂಟಪದಲ್ಲಿ ರಾಮಕೃಷ್ಣನಗರದ ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘ, ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘ, ಕುವೆಂಪುನಗರದ ಪರಿಶಿಷ್ಟ ಜಾತಿ ನಾಗರಿಕ ಕ್ಷೇಮಾಭಿವೃದ್ಧಿ ಸಂಘ, ವಿಜಯನಗರ ನಾಲ್ಕನೇ ಹಂತದ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ, ವಿಜಯನಗರ 3ನೇ ಹಂತದ ಪರಿಶಿಷ್ಟ ಜನಾಂಗದ(ಬಲಗೈ) ಕ್ಷೇಮಾಭಿವೃದ್ಧಿ ಸಂಘ, ದಟ್ಟಗಳ್ಳಿ ಬುದ್ಧ ಬಳಗದ ಸಹಯೋಗದೊಂದಿಗೆ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸುವ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಂವಿಧಾನದಲ್ಲಿ ಅಡಕವಾಗಿರುವ ಕಾನೂನು ಮತ್ತು ಸುವ್ಯವಸ್ಥೆ ರಾಜಕೀಯ ದೇಹಕ್ಕೆ ಔಷಧವಿದ್ದಂತೆ. ರಾಜಕೀಯ ದೇಹ ಅನಾರೋಗ್ಯಕ್ಕೊಳಗಾದರೆ ಖಂಡಿತವಾಗಿಯೂ ಔಷಧಿ ನೀಡಬೇಕಾಗುತ್ತದೆ. ಆ ಕೆಲಸವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಚೌಕಟ್ಟಿನಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಸಂಗತಿಯನ್ನು ಪ್ರತಿಯೊಬ್ಬ ಪ್ರಜೆಯೂ ಅರಿತುಕೊಳ್ಳಬೇಕು. ಪರಿಸ್ಥಿತಿಯ ಸ್ವಾರ್ಥಕ್ಕೆ ಮಾತ್ರ ಅಂಬೇಡ್ಕರ್ ಅವರ ಹೆಸರನ್ನು ಬಳಸಿಕೊಳ್ಳದೇ ಮುಂದಿನ ಪ್ರಜೆಗಳ ಭವಿಷ್ಯಕ್ಕೂ ಉಳಿಸಿಕೊಳ್ಳಬೇಕು ಎಂದು ಸಲಹೆನೀಡಿದರು.

ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ, ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಅಂಬೇಡ್ಕರ್ ರಚಿತ ಸಂವಿಧಾನಕ್ಕೆ ಕೈಮುಗಿದು ಅಧಿಕಾರ ಸ್ವೀಕರಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಶಾಲೆಯಲ್ಲಿ ಪ್ರತಿದಿನ ಸಂವಿಧಾನ ಪೀಠಿಕೆ ಬೋಧಿಸುವುದು ಕಡ್ಡಾಯ ಮಾಡಿರುವುದು ಸ್ವಾಗತಾರ್ಹ ಎಂದರು.

ಹಾಗಾಗಿ ಭಾರತೀಯರಾದ ನಾವೆಲ್ಲರೂ ಸಂವಿಧಾನದಡಿ ಒಗ್ಗಟ್ಟಾಗಿದ್ದೇವೆ. ಇದರಡಿ ನಾನೂ ಒಬ್ಬ. ದೇವರಲ್ಲಿ ಬೇಡಿಕೊಂಡರೂ ನಮ್ಮ ಸಮಸ್ಯೆ ಬಗೆಹರಿಸಲ್ಲ. ಆದರೆ, ಅಂಬೇಡ್ಕರ್ ರಚಿತ ಸಂವಿಧಾನದಡಿ ಕಾರ್ಯನಿರ್ವಹಿಸುವ ಸರ್ಕಾರಗಳಲ್ಲಿ ಮನವಿ ಮಾಡಿದಾಗ ನಮ್ಮ ಬೇಕು–ಬೇಡಗಳಿಗೆ ಸ್ಪಂದಿಸುತ್ತವೆ. ಈ ಸಂಗತಿ ಭಾರತದಲ್ಲಿ ಮಾತ್ರ ಸಾಧ್ಯ. ಹಾಗಾಗಿ ಅಂಬೇಡ್ಕರ್ ನಮ್ಮೆಲ್ಲರಿಗೂ ದೇವರ ಸಮಾನರಾಗಿ ಪ್ರತಿಬಿಂಬಿತವಾಗಿದ್ದಾರೆ ಎಂದು ಸ್ಮರಿಸಿದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಅಂಬೇಡ್ಕರ್ ನಮಗೆ ಸರ್ವಸ್ವ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ನೂರಾರು ವರ್ಷಗಳಿಂದ ಶೋಷಿತರ ಸಮಸ್ಯೆಗಳನ್ನು ಯಾವ ದೇವರ ಬಳಿ ಬೇಡಿಕೊಂಡರೂ ಬಗೆಹರಿದಿರಲಿಲ್ಲ. ಈ ದೇಶಕ್ಕೆ ಅಂಬೇಡ್ಕರ್ ರಚಿತ ಸಂವಿಧಾನ ಅನುಷ್ಠಾನಗೊಂಡ ನಂತರ ನಮ್ಮ ಸಮಸ್ಯೆಗಳು ಬಗೆಹರಿಯುತ್ತಿವೆ ಆ ಕಷ್ಟಕಾಲದಲ್ಲಿ ಯಾವ ದೇವರು ನಮ್ಮ ಕೈಹಿಡಿದಿಲ್ಲ. ಮತ್ತಷ್ಟು ಕಷ್ಟಗಳೇ ಹೆಚ್ಚಾದ್ದವು. ಕತ್ತಲಲ್ಲಿದ್ದ ಸಮಾಜವನ್ನು ಬೆಳಕಿನಡಿಗೆ ತಂದವರು ಡಾ.ಬಿ.ಆರ್.ಅಂಬೇಡ್ಕರ್. ಹಾಗಾಗಿ ನಮಗೆ ಅಂಬೇಡ್ಕರ್ ಅವರೇ ಸರ್ವಸ್ವ ಎಂದರು.

ಬಿಜೆಪಿಗರ ಅಪಪ್ರಚಾರ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಶಿಕ್ಷಣ ಮತ್ತು ಸಬಲೀಕರಣದಿಂದ ಅಸಮಾನತೆ ಎಂಬುದು ಸಂಪೂರ್ಣವಾಗಿ ತೊಲಗಬೇಕು. ಅದರ ಜೊತೆಯಲ್ಲಿ ಈ ಸಮುದಾಯಗಳು ಅಭಿವೃದ್ಧಿಯಾಗಬೇಕು. ಕಾಂಗ್ರೆಸ್ ಪಕ್ಷ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಮೋಸ ಮಾಡಿದೆ. ಅಧಿಕಾರ ನೀಡಲಿಲ್ಲ ಎಂಬ ಆರೋಪವನ್ನು ಪ್ರಸ್ತುತ ಬಿಜೆಪಿ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ಸತ್ಯಾಂಶವಿಲ್ಲ. ಆದರೆ ಕಾಂಗ್ರೆಸ್ ಪಕ್ಷವೇ ಅಂಬೇಡ್ಕರ್ ಅವರಿಗೆ ಸಂವಿಧಾನ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಬಿಜೆಪಿ ಮುಖಂಡರು, ಇಂದು ನಮ್ಮ ಮತ್ತು ಮುಸಲ್ಮಾನರ ನಡುವೆ ದ್ವೇಷ ಹರಡುತ್ತಿದ್ದಾರೆ. ಆದರೆ ಮುಸಲ್ಮಾನರ ಅವಶ್ಯಕತೆ ನಮ್ಮೆಲ್ಲರಿಗೂ ಇದೆ ಎಂದು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ಈ ವೇಳೆ ದ್ವಿತೀಯ ಪಿಯುಸಿ ವಿಭಾಗದ ಪರೀಕ್ಷೆಯಲ್ಲಿ ಶೇ.96 ಅಂಕಗಳಿಸಿದ ಚಾಮರಾಜನಗರ ಜಿಲ್ಲೆ ಸೋಮವಾರ ಪೇಟೆ ನಿವಾಸಿ ನಂಜುಂಡಸ್ವಾಮಿ ಅವರ ಪುತ್ರಿ ಅಪೇಕ್ಷಾ, ಎಸ್‌ಎಸ್‌ಎಲ್‌ಸಿಯಲ್ಲಿ ಶೇ.98 ಅಂಕಗಳಿಸಿದ ರಾಮಕೃಷ್ಣ ನಗರದ ನಿವಾಸಿ ರಾಜು ಅವರ ಪುತ್ರಿ ಪ್ರಜ್ಞಾ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಸಹಕಾರಿ ಗೌತಮ ಸಹಕಾರಿ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ರಂಗನಾಥಯ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿವೃತ್ತ ನಿರ್ದೇಶಕ ಡಾ.ಬಿ.ಎಸ್.ಪುಷ್ಪಲತಾ, ಕೆ.ಅಪ್ಪಾಜಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ರಾಮಕೃಷ್ಣನಗರದ ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಅಪ್ಪಾಜಿ, ಮುಖಂಡರಾದ ಶಿವಮಲ್ಲು, ಪುರುಷೋತ್ತಮ್, ಎಸ್.ಚೌಡಯ್ಯ ಜಿ.ನಾಗರಾಜು, ಶಿವಮೂರ್ತಿ, ವೈಯಾಲಕ್ಕಯ್ಯ, ಬಿ.ಎಂ.ನಟರಾಜು, ಪಿ.ಗುರುಮೂರ್ತಿ, ಸಿ.ಸೋಮಣ್ಣ, ಎಸ್. ರಾಜೀವ್, ಬಿ.ಪಿ.ಪ್ರೇಮಾ ಉಪಸ್ಥಿತರಿದ್ದರು. ಪರಿವರ್ತನಾ ಕಲಾತಂಡದಿಂದ ಬಂಡಾಯ ಗೀತೆಗಳನ್ನು ಪ್ರಸ್ತುತಪಡಿಸಿದರು.



"ದೇಶ ಕಂಡ ಮೇರು ನಾಯಕ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಆದರ್ಶ ನಮ್ಮೆಲ್ಲರಿಗೂ ದಾರಿದೀಪ. ಇಂದಿನ ಯುವ ಪೀಳಿಗೆ ವಿದ್ಯಾವಂತರಾಗಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ ಎಂಬ ಸಂದೇಶದಿಂದ ಆರಂಭವಾಗಿ ಪ್ರತಿಯೊಬ್ಬರನ್ನು ಹೇಗೆ ಗೌರವಿಸಬೇಕು, ಸಂವಿಧಾನ ಹೇಗೆ ಬಳಸಿಕೊಳ್ಳಬೇಕು, ಎಲ್ಲಿಯವರೆಗೆ ಬಳಸಿಕೊಳ್ಳಬೇಕು ಎಂಬುದರ ಕುರಿತು ಸಂದೇಶ ನೀಡಿರುವ ಪ್ರೇರಕ ಶಕ್ತಿ ಡಾ.ಬಿ.ಆರ್.ಅಂಬೇಡ್ಕರ್.

– ಡಾ.ಎಚ್.ಸಿ.ಮಹದೇವಪ್ಪ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ಮೈಸೂರು ರಾಜವಂಶಸ್ಥರಿಗೆ ಟಿಡಿಆರ್

ಇಂದು ಸುಪ್ರೀಂಕೋರ್ಟ್‌ನಲ್ಲಿ ರಾಜ್ಯ ಸರ್ಕಾರದ ಅರ್ಜಿ ವಿಚಾರಣೆ



ನವದೆಹಲಿ, ಮೇ 26– ಬೆಂಗಳೂರಿನ ಅರಮನೆ ಮೈದಾನದ 15 ಎಕರೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಮೈಸೂರು ರಾಜ ವಂಶಸ್ಥ ರಿಗೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ಅಡಿಯಲ್ಲಿ 3,011 ಕೋಟಿ ರೂ. ನೀಡುವುದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಮಂಗಳವಾರ ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂಕೋರ್ಟ್ ಒಪ್ಪಿಕೊಂಡಿದೆ.

ಆರಂಭದಲ್ಲಿ, ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸಿಹ್ ಅವರನ್ನೊಳಗೊಂಡ ಪೀಠ, ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರನ್ನು ಮತ್ತೊಂದು ಪೀಠ ನೀಡಿದ ಆದೇಶವನ್ನು ಹೇಗೆ ಪರಿಶೀಲಿಸಬಹುದು ಎಂದು ಪ್ರಶ್ನಿಸಿತ್ತು.

ಮೇ 22 ರಂದು ನ್ಯಾಯಮೂರ್ತಿ ಗಳಾದ ಎಂ.ಎಂ. ಸುಂದರೇಶ್ ಮತ್ತು ಅರವಿಂದ್ ಕುಮಾರ್ ಅವರನ್ನೊಳಗೊಂಡ ಮತ್ತೊಂದು ಪೀಠ, ಮೈಸೂರು ರಾಜ ವಂಶಸ್ಥರಿಗೆ 3,011 ಕೋಟಿ ರೂ. ಮೌಲ್ಯದ ಟಿಡಿಆರ್ ಪ್ರಮಾಣಪತ್ರಗಳನ್ನು ನೀಡುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದಾಗ್ಯೂ ಹಿರಿಯ ವಕೀಲರು, ಕರ್ನಾಟಕ ಪಟ್ಟಣ ಮತ್ತು ದೇಶ ಯೋಜನಾ ಕಾಯ್ದೆಗೆ 2004 ರ ತಿದ್ದುಪಡಿಯ ಮೂಲಕ ಪರಿಚಯಿಸ ಲಾದ ಟಿಡಿಆರ್ ನಿಬಂಧನೆಯಲ್ಲಿ, 1996 ರಲ್ಲಿ ಬೆಂಗಳೂರು ಅರಮನೆ(ಸ್ವಾಧೀನ ಮತ್ತು ವರ್ಗಾವಣೆ)ಕಾಯ್ದೆಯಡಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪೂರ್ವಾನ್ವಯವಾಗಿ ಅನ್ವಯಿಸಲಾಗುವುದಿಲ್ಲ ಎಂದು ಹೇಳಿದರು.

ಟಿಡಿಆರ್ ನಿಬಂಧನೆ ಜಾರಿಗೆ ಮೊದಲೇ 15 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಅದಕ್ಕೆ ಪರಿಹಾರವನ್ನು ಈಗಾಗಲೇ ಮೂಲ ಕಾಯ್ದೆಯಡಿಯಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಸ್ವಾಧೀನವು 1996 ರ ಕಾನೂನಿನ ಅಡಿಯಲ್ಲಿ ನಡೆದಿದ್ದು, 11 ಕೋಟಿ ರೂ. ಪರಿಹಾರವನ್ನು ನಿಗದಿಪಡಿಸಲಾಗಿದೆ. ಆ ಸಮಯದಲ್ಲಿ ಟಿಡಿಆರ್ ಪರಿಕಲ್ಪನೆ ಅಸ್ತಿತ್ವದಲ್ಲಿರಲಿಲ್ಲ ಎಂದು ರಾಜ್ಯ ಸರ್ಕಾರದ ಪರ ವಕೀಲರು ಹೇಳಿದ್ದಾರೆ.

ಬೆಂಗಳೂರು ಅರಮನೆಗೆ ಸೇರಿದ 15 ಎಕರೆ ಪ್ರದೇಶವನ್ನು ಬಳ್ಳಾರಿ ಹಾಗೂ ಜಯಮಹಲ್ ರಸ್ತೆಗಳ ಅಭಿವೃದ್ಧಿಗಾಗಿ 1994ರಲ್ಲಿ ಕರ್ನಾಟಕ ಸರ್ಕಾರ ಸ್ವಾಧೀನಪಡಿಸಿಕೊಂಡಿತ್ತು. ಆಗ, ಸ್ವಾಧೀನಪಡಿಸಿಕೊಂಡಿರುವ ಭೂಮಿಯ ಬೆಲೆಯನ್ನು 11 ಕೋಟಿ ರೂ. ಎಂದು ಅಂದಾಜಿಸಲಾಗಿತ್ತು. ಅದರ ವಿರುದ್ಧ ಅಸಮಾಧಾನಗೊಂಡ ಮೈಸೂರಿನ ಮಹಾರಾಜರ ಮನೆತನ ಅದರ ವಿರುದ್ಧ ನ್ಯಾಯಾಲಯದ ಮೊರೆ ಹೋಗಿತ್ತು.

100 ವರ್ಷಗಳ ದಾಖಲೆ ಮುರಿದ ಮೇ ತಿಂಗಳ ಮಳೆ



ಬೆಂಗಳೂರು, ಮೇ 26– ಇತಿಹಾಸದಲ್ಲೇ ಮೊದಲ ಬಾರಿಗೆ ಮೇ ತಿಂಗಳಿನಲ್ಲಿ ದಾಖಲೆಯ ಮಳೆಯಾಗಿದೆ. ನೂರು ವರ್ಷದಲ್ಲೇ ಬೆಂಗಳೂರಲ್ಲಿ ಈ ಬಾರಿ ಬಿದ್ದ ಮಳೆ ದಾಖಲೆ ಸೃಷ್ಟಿಸಿದೆ ಎಂದು ಹವಾಮಾನ ಇಲಾಖೆ ವಿಜ್ಞಾನಿ ಸಿಎಸ್ ಪಾಟೀಲ್ ತಿಳಿಸಿದ್ದಾರೆ.

ಬೆಂಗಳೂರಲ್ಲಿ ಮೇ ತಿಂಗಳಲ್ಲೇ 307.9 ಮಿಮೀ ಮಳೆ ದಾಖಲೆಯಾ ಗಿದೆ. ಮೇ 1 ರಿಂದ ಮೇ 26 ರವ ರೆಗೆ ಈ ಪ್ರಮಾಣದಲ್ಲಿ ಮಳೆಯಾಗಿದೆ. 2023 ಮೇ ತಿಂಗಳಲ್ಲಿ 305.4 ಮಿಮೀ ಮಳೆ ದಾಖಲಾಗಿತ್ತು.

ಇದು ಇಲ್ಲಿಯವರೆಗಿನ ದಾಖಲೆ ಯಾಗಿತ್ತು. ಈ ದಾಖಲೆಯನ್ನು ಈ ಬಾರಿಯ ಮಳೆ ಮುರಿದಿದೆ ಎಂದು ಅವರು ತಿಳಿಸಿದರು. ಜೂನ್ 5ಕ್ಕೆ ಮುಂಗಾರು ಆಗಮನದ ನಿರೀಕ್ಷೆ ಇತ್ತು. ಆದರೆ ಮೇ 24ಕ್ಕೆ ರಾಜ್ಯಕ್ಕೆ ಮುಂಗಾರು ಪ್ರವೇಶವಾಗಿದೆ. ಇಂದು ಸಂಪೂರ್ಣ ರಾಜ್ಯಕ್ಕೆ ಮುಂಗಾರು ಪ್ರವೇಶ ವಾಗಿದೆ. 2009 ರಲ್ಲಿ ಮೇ 23ಕ್ಕೆ ಕೇರಳ ಪ್ರವೇಶಿಸಿದ್ದ ಮುಂಗಾರು ಈ ಬಾರಿ ಮೇ 24ರಂದೇ ಪ್ರವೇಶ ಮಾಡಿದೆ. ಈ ಬಾರಿ ದಕ್ಷಿಣ ಒಳ ನಾಡಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಯಾಗುವ ನಿರೀಕ್ಷೆಯಿದೆ. ಉತ್ತರ ಒಳ ನಾಡು ಹಾಗೂ ಕರಾವಳಿಯಲ್ಲೂ ವಾಡಿಕೆಗಿಂತ ಹೆಚ್ಚು ಮಳೆ ಸಾಧ್ಯತೆ ಇದೆ ಅವರು ಮಾಹಿತಿ ನೀಡಿದರು. ಬೆಂಗಳೂರಲ್ಲಿ ಇನ್ನೂ ಒಂದು ವಾರ ಸಾಧಾರಣ ಮಳೆ ಮುಂದುವರಿಯಲಿದೆ. ಗಾಳಿ 40 ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಅವರು ಹೇಳಿದರು.

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಿಂದ ಅಕ್ಷರಾಭ್ಯಾಸ




ಮೈಸೂರು, ಮೇ 26– ಮೈಸೂರಿನ ಶ್ರೀನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರವು ಭಾನುವಾರ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವು ಬೆಳಿಗ್ಗೆ ಸರಸ್ವತಿ ಪೂಜೆ ಮತ್ತು ಗಣಹೋಮದೊಂದಿಗೆ ಪ್ರಾರಂಭವಾಯಿತು. ವಿದ್ಯಾರ್ಥಿಗಳ ಪೋಷಕರು ಪಾಲ್ಗೊಂಡಿದ್ದರು.

ಕರ್ನಾಟಕದ ವಿದ್ಯಾ ಭಾರತಿಯ ಉಪಾಧ್ಯಕ್ಷ ಶ್ರೀಪತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಇಂದಿನ ಪೋಷಕರು ತಮ್ಮ ಮಕ್ಕಳಿಗೆ ಸಾಂಪ್ರದಾಯಿಕ ಮತ್ತು ಆಧುನಿಕ ಶಿಕ್ಷಣವನ್ನು ನೀಡುವ ಅವಶ್ಯಕತೆ ಇದೆ. ಮಕ್ಕಳು ಮೊಬೈಲ್ ಫೋನ್ ಬಳಸುವ ಬಗ್ಗೆ ಪೋಷಕರು ಜಾಗರೂಕರಾಗಿರಬೇಕು ಎಂದು ಸಲಹೆ ನೀಡಿದರು. ಇತ್ತೀಚಿನ ದಿನಗಳಲ್ಲಿ ಮಕ್ಕಳು ಎಷ್ಟು ಬುದ್ಧಿವಂತರು ಎಂಬುದನ್ನು ವಿವರಿಸಲು ಅವರು ಭಾರತೀಯ ಧರ್ಮಗ್ರಂಥಗಳಲ್ಲಿ ಕೆಲ ದೃಷ್ಟಾಂತಗಳನ್ನು ಹಾಸ್ಯ ದಾಟಿಯಲ್ಲಿ ಹಂಚಿಕೊಂಡರು. ಶಿಸ್ತು ಮತ್ತು ಸ್ವಾತಂತ್ರ್ಯ ಒಟ್ಟಿಗೆ ಹೋಗಬೇಕು ಎಂದು ಹೇಳಿದರು. ಬೇಬಿ ಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಡಾ. ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಓಂ ನ ಮಹತ್ವವನ್ನು ವಿವರಿಸಿದ ಸ್ವಾಮೀಜಿ, ಅದು ಎಲ್ಲಾ ವೈದಿಕ ಜ್ಞಾನದ ಮೂಲ ಎಂದು ಹೇಳಿದರು. ಮಕ್ಕಳು, ಪೋಷಕರೊಂದಿಗೆ ಮಂತ್ರಗಳನ್ನು ಪಠಿಸುತ್ತಾ ಅರಿಶಿನದ ಕೋಲುಗಳಿಂದ ಅಕ್ಕಿಯ ಮೇಲೆ ಓಂ ಎಂದು ಬರೆದರು. ಮಕ್ಕಳು ಶಿಕ್ಷಣ ಮತ್ತು ಸಂಸ್ಕೃತಿ ಎರಡನ್ನೂ ಕಲಿಯಬೇಕು ಎಂದು ಶ್ರೀಗಳು ಕಿವಿಮಾತು ಹೇಳಿದರು. ಆರ್‌ವಿಕೆ ಶ್ರೀನಗರದ ಪ್ರಧಾನ ಆಚಾರ್ಯಜಿ ಅನಿತಾ ಮಾತಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸವಿನೆನಪು



ಪಾರ್ವತಮ್ಮಣ್ಣಿ–ಡಿ.ದೇವರಾಜ ಅರಸ್ (KSRTC)

ದುಃಖತಪ್ತರು: ಕುಟುಂಬವರ್ಗದವರು

18ನೇ ವರ್ಷದ ಸವಿನೆನಪು



ಬಿ.ಕೃಷ್ಣಪ್ಪ

ನೀವು ನಮ್ಮನ್ನಗಲಿ 18 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮಾನ್ ಚಿಕ್ಕಬಸವೇಗೌಡ

ಇವರು ದಿನಾಂಕ 17-05-2025ನೇ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 27-05-2025ರ ಮಂಗಳವಾರ ಸಂಜೆ 4.30 ರಿಂದ 6 ಗಂಟೆಗೆ ನಮ್ಮ ಸ್ವಗೃಹ ಹೆಳವರಹುಂಡಿ ಗ್ರಾಮ, ಟಿ.ನರಸೀಪುರ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ : ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ACKNOWLEDGEMENT & MADA INVITE



Kollira Kuttappa

We thank the members of Mysore Kodava Samaja, Kodagu Sahakara Sangha, Sri Kaveri Kodagu Mahila Sangha, Sri Iggutthappa Kodava Association, Srirampura, relatives, friends, well-wishers & members for their condolences & service during the demise of **Kollira Kuttappa**, on May 18 (Sunday). The Mada Ceremony has been arranged on **28th May 2025 (Wednesday) at 11 a.m. at Kodagu Sahakara Sangha Jayalakshmipuram, Mysore.** Mada invitations have been sent but those who have not ye: received the invitation may please treat this as a personal invitation, attend the ceremony and pray for the departed soul.

—Kollira Shanthi Kuttappa, Children, Son-in-Law, Daughters-in-Law & Grandchildren. Mob: 9972032709 / 9019381034

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ಜೆ.ಪಿ.ನಗರ, 2ನೇ ಹಂತ, 21ನೇ ಮುಖ್ಯ ರಸ್ತೆ, ಮನೆ ನಂ. 235/1 ರ ವಾಸಿಯಾದ ಶ್ರೀ ಡಿ.ಬಿ. ರಾಜಶೇಖರ ಮೂರ್ತಿ ಬಿನ್ ಲೇಟ್ ಬೋಗಣ್ಣ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತ ರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಉದ್ದೂರು ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು

ಸರ್ವೇ ನಂಬರ್: 481/1 ; ವಿಸ್ತೀರ್ಣ: 01 ಎಕರೆ 25 ಗುಂಟೆ. ಚಕ್ಕುಬಂದಿ:– ಪೂರ್ವ: ಚಿನ್ನಸ್ವಾಮಿನಾಯಕ ಬಿನ್ ಮರಿಚಿಕ್ಕನಾಯಕ ರವರ ಜಮೀನು ; ಪಶ್ಚಿಮ: ಕುಳಕಯ್ಯನ ಕರಿಹುಚ್ಚನಾಯಕ ರವರ ಜಮೀನು ; ಉತ್ತರ: ಖಾಸಗಿ ಸ್ವತ್ತು ; ದಕ್ಷಿಣ: ಹುಚ್ಚನಾಯಕ ಬಿನ್ ಹನುಮಂತನಾಯಕ ಹಾಗೂ ಚಿಕ್ಕಮಂಚನಾಯಕ ಬಿನ್ ಮಂಚನಾಯಕ ರವರ ಜಮೀನು.

ಸರ್ವೆ ನಂಬರ್: 481/2 ; ವಿಸ್ತೀರ್ಣ: 01 ಎಕರೆ 07 ಗುಂಟೆ. ಚಕ್ಕುಬಂದಿ:– ಪೂರ್ವ: ಹುಚ್ಚನಾಯಕ ಬಿನ್ ಹನುಮಂತನಾಯಕ ರವರ ಜಮೀನು ; ಪಶ್ಚಿಮ: ಕೆಲ್ಲಹಳ್ಳಿ ಶಿವಣ್ಣೇಗೌಡರವರ ಜಮೀನು ; ಉತ್ತರ: ಸ್ವಾಮಿನಾಯಕ ಬಿನ್ ಚಿಕ್ಕೋಸ ನಾಯಕ ರವರ ಜಮೀನು ; ದಕ್ಷಿಣ: ಹುಚ್ಚನಾಯಕ ಬಿನ್ ಹನುಮಂತನಾಯಕ ರವರ ಜಮೀನು.

ಸರ್ವೆ ನಂಬರ್: 482/3 ; ವಿಸ್ತೀರ್ಣ: 00 ಎಕರೆ 38 ಗುಂಟೆ. ಚಕ್ಕುಬಂದಿ: ಪೂರ್ವ: ಉದ್ದೂರು ಕೆಲ್ಲಹಳ್ಳಿ ರಸ್ತೆ ; ಪಶ್ಚಿಮ: ಸರ್ವೆ ನಂ. 482/1 ; ಉತ್ತರ: ಸರ್ವೆ ನಂಬರ್ 482/2 ; ದಕ್ಷಿಣ: ಸರ್ವೆ ನಂಬರ್ 484.

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com.

ಮೈಸೂರು: 26–5–2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದಲ್ಲಿ ವಾಸವಾಗಿರುವ (1), ಶ್ರೀಮತಿ. ಸಿದ್ಧಮ್ಮ ಕೋಂ. ಲೇಟ್. ಹುಚ್ಚನಾಯಕ, (2), ಮಂಚಣ್ಣ. ಬಿನ್. ಲೇಟ್, ಹುಚ್ಚನಾಯಕ (3), ಮಂಜುಳ ಬಿನ್. ಲೇಟ್, ಹುಚ್ಚನಾಯಕ (4), ಲಕ್ಷ್ಮಿ ಬಿನ್. ಲೇಟ್, ಹುಚ್ಚನಾಯಕ (5), ನಾರಾಯಣಿ ಹೆಚ್. ಬಿನ್. ಲೇಟ್. ಹುಚ್ಚನಾಯಕ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು

ಸರ್ವೇ ನಂಬರ್ :481/3, ವಿಸ್ತೀರ್ಣ 1 ಎಕರೆ, ಉದ್ಬೂರು ಗ್ರಾಮ, ಚಕ್ಕುಬಂದಿ: ಪೂರ್ವ : ಮರಿಗೌಡ ಮತ್ತು ಹುಚ್ಚನಾಯಕ ರವರ ಜಮೀನು, ಪಶ್ಚಿಮ: ಸರ್ವೆ ನಂಬರ್ 9/1ಬಿ, ಉತ್ತರ: ತಮ್ಮಯ್ಯ ಬಿನ್ ಮಂಚನಾಯಕ ರವರ ಜಮೀನು, ದಕ್ಷಿಣ: ರಾಮೇಗೌಡ ಬಿನ್ ಚಿಕ್ಕೋಡಿಗೌಡ ರವರ ಜಮೀನು.

ಸರ್ವೇ ನಂಬರ್ :482/1 , ವಿಸ್ತೀರ್ಣ 1 ಎಕರೆ 2 ಗುಂಟೆ, ಉದ್ಬೂರು ಗ್ರಾಮ, ಚಕ್ಕುಬಂದಿ: ಪೂರ್ವ : ಚನ್ನವೀರನಾಯ್ಕ ರವರ ಜಮೀನು, ಪಶ್ಚಿಮ: ತಮ್ಮಯ್ಯ ಮತ್ತು ಹುಚ್ಚನಾಯ್ಕ ರವರ । ಜಮೀನು , ಉತ್ತರ: ಸೋಮನಾಯ್ಕ ರವರ ಜಮೀನು, ದಕ್ಷಿಣ: ಮರಿಗೌಡ ರವರ ಜಮೀನು .

ಸರ್ವೇ ನಂಬರ್ :91/1ಬಿ, ವಿಸ್ತೀರ್ಣ: 32 ಗುಂಟೆ, ಕೆಲ್ಲಹಳ್ಳಿ ಗ್ರಾಮ, ಚಕ್ಕುಬಂದಿ: ಪೂರ್ವ : ಹುಚ್ಚನಾಯ್ಕ ಬಿನ್ ಹನುಮಂತನಾಯ್ಕ ರವರ ಜಮೀನು, ಪಶ್ಚಿಮ: ಸಾಕಮ್ಮ ರವರ ಜಮೀನು , ಉತ್ತರ: ಮರಿಲಿಂಗೇಗೌಡ ರವರ ಜಮೀನು, ದಕ್ಷಿಣ: ಕಳಸೇಗೌಡ ರವರ ಜಮೀನು

Sd/- M.N. Prakash Kalappa, KAR 1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 9343112535. Email: mnprakashkalappa@gmail.com

ಮೈಸೂರು:26.05.2025

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ನಂಜನಗೂಡು
ಊಟಿ ರಸ್ತೆ, ತಾಲ್ಲೂಕು ಕಛೇರಿ ಹತ್ತಿರ, ನಂಜನಗೂಡು
ಸಂ:ರೇಸನಿ/ನಂ/ಹೊ.ವಾಹನ/ಚಾಲಕ/ಟೆಂಡರ್/10/2025–26 ದಿ: 20.05.2025


ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರ ಸಮೇತ ವಾಹನದ ಸೇವೆ ಪಡೆಯಲು ಅಲ್ಪಾವಧಿ ಟೆಂಡರ್ ದರಪಟ್ಟಿ ಆಹ್ವಾನಿಸಿದ್ದು ದರಪಟ್ಟಿ ಸಲ್ಲಿಸಲು ಪ್ರಕಟಣೆ ದಿ: 20.05.2025 ರಿಂದ ಅಂತಿಮ ದಿ: 04.06.2025 ಅಪರಾಹ್ನ 3.00 ಗಂಟೆಗೆ ನಿಗದಿ ಪಡಿಸಲಾಗಿದೆ. ಟೆಂಡರ್ ಫಾರಂ ಪಡೆಯಲು ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ ನಂಜನಗೂಡು ಇಲ್ಲಿ ಸಂಪರ್ಕಿಸಲು ಸೂಚಿಸಿದೆ. ಫೋನ್ ಸಂಖ್ಯೆ: 9480168854

ಸಹಿ/–
ರೇಷ್ಮೆ ಸಹಾಯಕ ನಿರ್ದೇಶಕರು
ನಂಜನಗೂಡು

DIPR/DDMYS/233/KSMCA/205/2025-26

18ನೇ ವರ್ಷದ ಚಿರಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 18 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಶ್ರೀಮತಿ ಜಯಮ್ಮ (ಮಾಜಿ ನಿರ್ದೇಶಕರು, ಪಿಎಸಿಸಿ ಸಂಗಡ) ಮಕ್ಕಳು: ಶ್ರೀ ಕಾಳಸ್ವಾಮಿ, ಶ್ರೀ ಮಹೇಶ, ಸೊಸೆ: ಶ್ರೀಮತಿ ನೇತ್ರಾವತಿ ಕಾಳಸ್ವಾಮಿ ಮೊಮ್ಮಕ್ಕಳು: ಕು. ಪ್ರಣತಿ ಮತು ಕು.ಸಹನಾ ಹಾಗೂ ಕುಟುಂಬವರ್ಗ

ಶ್ರೀ ಹೊಸಹಳ್ಳಿ ಬೆಳ್ಳಯ್ಯ

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು